ಬುಧವಾರ, ಮೇ 12, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 132 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಉಸಿರನೇ ಕಸಿದ ಅವ್ಯವಸ್ಥೆ..

- ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಮೇ 2ರಂದು 23 ರೋಗಿಗಳು ಮೃತಪಟ್ಟಿದ್ದಾರೆ. ಆಮ್ಲಜನಕದ ಕೊರತೆ ಇದಕ್ಕೆ ಕಾರಣ ಎನ್ನಲಾಗಿದೆ
- ಜಿಲ್ಲಾಡಳಿತದಲ್ಲಿ ಸಂವಹನದ ಕೊರತೆ, ದುರಾಡಳಿತ, ನಿರ್ಲಕ್ಷ್ಯ ಧೋರಣೆ, ಬಹುಕಾಲದಿಂದ ಸಿಬ್ಬಂದಿಯ ಕೊರತೆ, ವೈದ್ಯಕೀಯ ಮೂಲಸೌಕರ್ಯ ಕಳಪೆ ಇತ್ತು ಎಂಬುದು ಮೃತರ ಸಂಬಂಧಿಕರ ಹೇಳಿಕೆಗಳಿಂದ ಸ್ಪಷ್ಟವಾಗಿದೆ
- 'ಚೇತರಿಸಿಕೊಳ್ಳುತ್ತಿದ್ದ ವ್ಯಕ್ತಿಯನ್ನು ಕರೆದೊಯ್ದು ಸಾಯುವಂತೆ ಮಾಡಿದರು' ಎಂದು ಆ ರಾತ್ರಿ ಮೃತಪಟ್ಟ ವ್ಯಕ್ತಿಯೊಬ್ಬರ ಹೆಂಡತಿ ಹೇಳಿದ್ದಾರೆ

https://bit.ly/3becEah
ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್	ನಿಫ್ಟಿ	₹/$
49,162 ▼	14,851 ▼	73.34 ▲

'ಲಸಿಕೆ ಅಭಿಯಾನ ನಿಷ್ಪ್ರಯೋಜಕ'

ಲಸಿಕೆಯೇ ಇಲ್ಲದೆ ಅಭಿಯಾನ ಆರಂಭಿಸಿದ್ದೇಕೆ: ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್ ಸಿಡಿಮಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ಲಭ್ಯತೆಯ ವಿಷಯದಲ್ಲಿ ಹತಾಶ ಪರಿಸ್ಥಿತಿ ಇದೆ. ಇದನ್ನು ಗಂಭೀರವಾಗಿ ಪರಿಗಣಿಸುವಂತೆ ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿರುವ ಹೈಕೋರ್ಟ್, ರಾಜ್ಯದಲ್ಲಿ ಕೋವಿಡ್ ಲಸಿಕೆ ಅಭಿಯಾನದ ಬಗ್ಗೆ ರೂಪಿಸಿಕೊಂಡಿರುವ ರೂಪರೇಷೆಯನ್ನು ಎರಡು ದಿನದಲ್ಲಿ ಮಂಡಿಸಬೇಕು ಎಂದು ನಿರ್ದೇಶನ ನೀಡಿದೆ.

ಕೋವಿಡ್ ಲಸಿಕೆ ಲಭ್ಯತೆಯಲ್ಲಿ ಇರುವ ಗೊಂದಲಗಳನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರನ್ನು ಒಳಗೊಂಡ ವಿಶೇಷ ಪೀಠ, ಈ ಆದೇಶವನ್ನು ನೀಡಿತು. ಆರೋಗ್ಯ ಕಾರ್ಯಕರ್ತರು ಹಾಗೂ 45 ವರ್ಷ ಮೇಲ್ಪಟ್ಟ 26 ಲಕ್ಷ ಮಂದಿ ಮೊದಲ ಡೋಸ್ ಪಡೆದು ಎರಡನೇ ಡೋಸ್‌ಗಾಗಿ ಕಾಯುತ್ತಿದ್ದಾರೆ. ಆದರೆ, ರಾಜ್ಯದಲ್ಲಿ ಸದ್ಯ ಲಭ್ಯ ಇರುವ ಲಸಿಕೆ ಪ್ರಮಾಣ 9.37 ಲಕ್ಷ ಮಾತ್ರ. ರಾಜ್ಯ ಸರ್ಕಾರವೇ ಸಲ್ಲಿಸಿದ ಈ ವಿವರ ಪರಿಶೀಲಿಸಿದ ಪೀಠವು ತೀವ್ರ ಆತಂಕ ವ್ಯಕ್ತಪಡಿಸಿತು.

'ಕೇಂದ್ರ ಸರ್ಕಾರ ನಿಗದಿ ಮಾಡಿರುವ ಮಾನದಂಡಗಳ ಪ್ರಕಾರ 26 ಲಕ್ಷ ಜನರಿಗೆ ತಕ್ಷಣವೇ ಎರಡನೇ ಡೋಸ್ ನೀಡಬೇಕಿದೆ. ಇಲ್ಲದಿದ್ದರೆ ಅವಧಿ ಮೀರಬಹುದು. ಇದೇ ಸ್ಥಿತಿ ಮುಂದುವರಿದರೆ ಕೋವಿಡ್ ಲಸಿಕೆಯ ಅಭಿಯಾನವೇ ನಿಷ್ಪ್ರಯೋಜಕವಾಗಲಿದೆ. ಇಂತಹ ಸಂದಿಗ್ಧ ಪರಿಸ್ಥಿತಿ ನಿಭಾಯಿಸಲು ಮಾಡಿಕೊಂಡಿರುವ ಸಿದ್ಧತೆ ಏನು' ಎಂದು ಪೀಠ ಪ್ರಶ್ನಿಸಿತು.

8ನೇ ಪುಟ ನೋಡಿ



ಬೆಂಗಳೂರಿನ ಸಿ.ವಿ.ರಾಮನ್ ಆಸ್ಪತ್ರೆಯಲ್ಲಿ ಮಂಗಳವಾರ ಕೋವಿಡ್ ಲಸಿಕೆ ಪಡೆಯಲು ಸೇರಿದ್ದ ಜನ –ಪ್ರಜಾವಾಣಿ ಚಿತ್ರ

ರಾಜಧಾನಿಯಲ್ಲಿ ಲಸಿಕೆಗೆ ಹೆಚ್ಚಿದ ಹಾಹಾಕಾರ

ಬೆಂಗಳೂರು: ರಾಜಧಾನಿಯಲ್ಲಿ ಕೋವಿಡ್ ಲಸಿಕೆಗೆ ಹಾಹಾಕಾರ ಶುರುವಾಗಿದೆ. ಬೆಳಕು ಹರಿಯುವ ಮುನ್ನವೇ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳ ಎದುರು ಸರದಿಯಲ್ಲಿ ನಿಂತು ದಿನವಿಡೀ ಕಾಯುವುದು ಸಾಮಾನ್ಯವಾಗಿದೆ.



ಗಂಟೆಗಟ್ಟಲೆ ಕಾದರೂ ಲಸಿಕೆ ಸಿಗದಿದ್ದರಿಂದ ಹೈರಾಣಾಗಿದ್ದವರು ಆಸ್ಪತ್ರೆಯ ಸಿಬ್ಬಂದಿ ಹಾಗೂ ಪೊಲೀಸರೊಂದಿಗೆ ವಾಗ್ವಾದ ನಡೆಸುತ್ತಿದ್ದ ದೃಶ್ಯ ಮಾಮೂಲಾಗಿದೆ.

ಲಸಿಕೆ ಸಾಕಷ್ಟು ಬಂದಿದೆ, ಕೊರತೆ ಇಲ್ಲ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಲಸಿಕೆಗೆ ಕಾದು ಹೈರಾಣಾಗುವ ಜನರ ಕಷ್ಟಕ್ಕೆ ಮಾತ್ರ ಕೊನೆಯಿಲ್ಲ.

8ನೇ ಪುಟ ನೋಡಿ

'ಲಸಿಕೆಗೆ ಬೊಬ್ಬೆ ಹೊಡೆಯಬೇಕಿಲ್ಲ'

ಬೆಂಗಳೂರು: 'ಎರಡನೇ ಡೋಸ್‌ಗೆ ಲಸಿಕೆ ಬರಲು ಆರಂಭವಾಗಿದೆ. ಅದಕ್ಕಾಗಿ ಗಾಬರಿ ಬಿದ್ದು, ರಾತ್ರಿ ವೇಳೆ ಸರದಿಯಲ್ಲಿ ನಿಂತು ಬೊಬ್ಬೆ ಹೊಡೆಯುವ ಅಗತ್ಯವಿಲ್ಲ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.



ಎಲ್ಲರಿಗೂ ಕ್ರಮಬದ್ಧವಾಗಿ ನಿರ್ದಿಷ್ಟ ಸಮಯದೊಳಗೆ ಲಸಿಕೆ ನೀಡಲಾಗುವುದು. ಯಾರೂ ಆತಂಕಕ್ಕೆ ಒಳಗಾಗಬೇಕಿಲ್ಲ ಎಂದೂ ಅವರು ಭರವಸೆ ನೀಡಿದರು.

'ಲಸಿಕೆ ಪೂರೈಕೆ ಹಾಗೂ ವಿತರಣೆ ಬಗ್ಗೆ ಆರೋಗ್ಯ ಇಲಾಖೆಯವರು ವಿಶೇಷ ಗಮನ ಕೊಡುತ್ತಿದ್ದಾರೆ. ಹಂತ ಹಂತವಾಗಿ ಲಸಿಕೆ ಬರುತ್ತದೆ. ಬಂದ ಹಾಗೆ ಕೊಡುವ ವ್ಯವಸ್ಥೆ ಮಾಡುತ್ತೇವೆ. ಎಲ್ಲರೂ ಸಹಕರಿಸಬೇಕು' ಎಂದು ಮನವಿ ಮಾಡಿದರು.

2ನೇ ಡೋಸ್‌ಗೆ ಆದ್ಯತೆ: ರಾಜ್ಯಗಳಿಗೆ ಕೇಂದ್ರ ಸೂಚನೆ

ನವದೆಹಲಿ(ಪಿಟಿಐ): 'ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲಿ ಎರಡನೇ ಡೋಸ್ ಹಾಕಿಸಿಕೊಳ್ಳಬೇಕಿರುವವರಿಗೆ ಆದ್ಯತೆ ನೀಡಿ' ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೂಚನೆ ನೀಡಿದೆ.

'ಇನ್ನು ಮುಂದೆ ಕೇಂದ್ರವು ಪೂರೈಸಲಿರುವ ಲಸಿಕೆಯಲ್ಲಿ ಶೇ 70ರಷ್ಟನ್ನು ಎರಡನೇ ಡೋಸ್ ಹಾಕಿಸಿಕೊಳ್ಳುವವರಿಗೆ ಮೀಸಲಿರಿಸಿ. ಶೇ 30ರಷ್ಟನ್ನು ಮೊದಲ ಡೋಸ್ ಹಾಕಿಸಿಕೊಳ್ಳುವವರಿಗೆ ನೀಡಿ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿದೆ.

'ಶೇ 100ರಷ್ಟು ಲಸಿಕೆಗಳನ್ನೂ ಎರಡನೇ ಡೋಸ್ ಪಡೆಯುವವರಿಗೆ ನೀಡಬಹುದು. ಇದನ್ನು ರಾಜ್ಯ ಸರ್ಕಾರಗಳ ವಿವೇಚನೆಗೆ ಬಿಡಲಾಗಿದೆ' ಎಂದು ಸಚಿವಾಲಯವು ಹೇಳಿದೆ.

ಸಮನ್ವಯಕ್ಕೆ ತಂಡ: ಲಸಿಕೆ ತಯಾರಕರಿಂದ ರಾಜ್ಯ ಸರ್ಕಾರಗಳು ಖರೀದಿಸಿರುವ ಲಸಿಕೆಗಳ ಮೊತ್ತ ಪೂರ್ಣಪ್ರಮಾಣದಲ್ಲಿ ಪಾವತಿಯಾಗಿಲ್ಲ. ಲಸಿಕೆ ತಯಾರಕರ ಜತೆ ಸಮನ್ವಯಕ್ಕಾಗಿ ತಂಡವನ್ನು ರಚಿಸಿ. ಲಸಿಕೆ ಪೂರೈಕೆಯಲ್ಲಿ ಅಡಚಣೆಯಾಗದಂತೆ ನೋಡಿಕೊಳ್ಳಬೇಕು ಎಂದೂ ತಿಳಿಸಿದೆ.

1.26 ಕೋಟಿ ಮಾನವ ದಿನ ನಷ್ಟ ಸಾಧ್ಯತೆ

ಕೋವಿಡ್: 'ನರೇಗಾ'ಕ್ಕೆ ಕುತ್ತು

● ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ (ನರೇಗಾ) ಮೇಲೂ ಪರಿಣಾಮ ಬೀರಿದ್ದು, ಈ ಯೋಜನೆಯನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಲು ಪಂಚಾಯತ್ ರಾಜ್ ಇಲಾಖೆ ನಿರ್ಧರಿಸಿದೆ.

ನರೇಗಾ ಯೋಜನೆಯಡಿ ನಡೆಯುತ್ತಿರುವ ಎಲ್ಲ ಕಾಮಗಾರಿಗಳನ್ನು ಎರಡು ವಾರ, ಅಂದರೆ ಇದೇ 24ರವರೆಗೆ ಸ್ಥಗಿತಗೊಳಿಸಲು ಎಲ್ಲ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಸಿಇಒ) ಇಲಾಖೆ ನಿರ್ದೇಶಕರು ಸೂಚಿಸಿದ್ದಾರೆ.

'ಈ ಯೋಜನೆಯಡಿ ರಾಜ್ಯದಲ್ಲಿ ದಿನವೊಂದಕ್ಕೆ ಸರಾಸರಿ 9 ಲಕ್ಷ ಮಾನವ ದಿನಗಳ ಉದ್ಯೋಗ ಸೃಜನೆ ಆಗುತ್ತಿದೆ. ಹೀಗಾಗಿ, 14 ದಿನ ಕಾಮಗಾರಿಗಳು ಸ್ಥಗಿತಗೊಂಡರೆ ಸುಮಾರು 1.26 ಕೋಟಿ ಮಾನವ ದಿನಗಳ ಉದ್ಯೋಗ ಸೃಜನೆ ನಷ್ಟವಾಗಲಿದೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಈ ವರ್ಷ ಕಳೆದ ಸಾಲಿನಷ್ಟೆ (2020–21) 13 ಕೋಟಿ ಮಾನವ ದಿನಗಳ ಉದ್ಯೋಗ ಸೃಜಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಮಾರ್ಚ್ ಅಂತ್ಯದವರೆಗೆ 71.67 ಲಕ್ಷ ಕುಟುಂಬಗಳ 1.68 ಕೋಟಿ ಜನರು ಉದ್ಯೋಗಕ್ಕಾಗಿ ನೋಂದಣಿ ಮಾಡಿಸಿದ್ದರು. ಪ್ರಸಕ್ತ ಸಾಲಿನಲ್ಲಿ ಹೊಸದಾಗಿ 84 ಸಾವಿರ ಕುಟುಂಬಗಳ 2.22 ಲಕ್ಷ ಮಂದಿ ಉದ್ಯೋಗ ಚೀಟಿ (ಜಾಬ್ ಕಾರ್ಡ್) ಪಡೆದುಕೊಂಡಿದ್ದಾರೆ. ಲಾಕ್‌ಡೌನ್ ಕಾರಣದಿಂದ ಸಾವಿರಾರು ಕಾರ್ಮಿಕರು ತಮ್ಮ ಗ್ರಾಮಗಳಿಗೆ ಮರಳುತ್ತಿರುವುದರಿಂದ ಇನ್ನಷ್ಟು ಜನರು ಉದ್ಯೋಗ ಚೀಟಿ ಪಡೆಯಬಹುದು' ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಯಾವುದೇ ಕಾಮಗಾರಿ ಇಲ್ಲ: 'ಯೋಜನೆ ಸ್ಥಗಿತಗೊಳಿಸಿದ ಅವಧಿಯಲ್ಲಿ ಸಮುದಾಯ ಅಥವಾ ವೈಯಕ್ತಿಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬಾರದು. ಕಾರ್ಮಿಕರ ಆರೋಗ್ಯ ದೃಷ್ಟಿಯಿಂದ ಈ ಕ್ರಮ ಅನಿವಾರ್ಯವಾಗಿದ್ದು, ಈ ಬಗ್ಗೆ ಕಾರ್ಮಿಕರಿಗೆ ಮನವರಿಕೆ ಮಾಡಿಕೊಡಬೇಕು' ಎಂದು ಸಿಇಒಗಳಿಗೆ ನಿರ್ದೇಶಕರು ಸೂಚಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಆದರೆ, ಈ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿ ದುರ್ಬಲ ಕುಟುಂಬಗಳನ್ನು ಗುರುತಿಸಿ, ಹೊಸದಾಗಿ ಉದ್ಯೋಗ ಚೀಟಿ ನೀಡಲು ನೋಂದಣಿ ಮಾಡಬೇಕು. ಬಾಕಿ ಇರುವ ಉದ್ಯೋಗ ಚೀಟಿಗಳನ್ನು ವಿತರಿಸುವ ಜತೆಗೆ ನವೀಕರಣ ಕಾರ್ಯ ಕೈಗೊಳ್ಳಬೇಕು. ಅಲ್ಲದೆ, ಕಾಮಗಾರಿಗಳ ಕಡತಗಳು ಮತ್ತು ದಾಖಲೆಗಳನ್ನು ನವೀಕರಿಸಬೇಕು. ಕೂಲಿ ಕಾರ್ಮಿಕರಿಂದ ಕಾಮಗಾರಿಗಳ (ಸಮುದಾಯ, ವೈಯಕ್ತಿಕ) ಉದ್ಯೋಗ ಬೇಡಿಕೆಯನ್ನೂ ಪಡೆಯಬೇಕು ಎಂದು ಅವರು ತಿಳಿಸಿದ್ದಾರೆ.

8ನೇ ಪುಟ ನೋಡಿ

ಅಂಕಿಅಂಶ

- **14.87** ಕೋಟಿ — 2020–21ನೇ ಸಾಲಿನಲ್ಲಿ ಮಾನವ ದಿನ
- **13** ಕೋಟಿ — ಪ್ರಸಕ್ತ ಸಾಲಿನ ಮಾನವ ದಿನ ಗುರಿ
- **71.67** ಲಕ್ಷ — ರಾಜ್ಯದಲ್ಲಿ ನರೇಗಾದಡಿ ನೋಂದಾಯಿತ ಕುಟುಂಬ
- **1.68** ಕೋಟಿ — ಉದ್ಯೋಗಕ್ಕೆ ನೋಂದಣಿ ಮಾಡಿಕೊಂಡವರು

'ನರೇಗಾ ಸ್ಥಗಿತ ಗಾಯಕ್ಕೆ ಉಪ್ಪು ಸವರಿದಂತೆ'

ಬೆಂಗಳೂರು: 'ಲಾಕ್‌ಡೌನ್ ಸಂದರ್ಭದಲ್ಲಿ ರಾಜ್ಯ ಸರ್ಕಾರ ನರೇಗಾ ಯೋಜನೆ ಸ್ಥಗಿತಗೊಳಿಸಲು ನಿರ್ಧರಿಸಿರುವುದು ಮತ್ತು ಗ್ರಾಮೀಣ ಕ್ಷೇತ್ರಕ್ಕೆ ಸಂಬಂಧಿಸಿದ ಹೆಚ್ಚಿನ ಇಲಾಖೆಗಳ ಅನುದಾನಗಳನ್ನು ರಾಜ್ಯ–ಕೇಂದ್ರ ಸರ್ಕಾರ ತಡೆಹಿಡಿದಿರುವುದು ಬಡವರ ಗಾಯಕ್ಕೆ ಉಪ್ಪು ಸವರಿದಂತಾಗಿದೆ' ಎಂದು ಗ್ರಾಮ ಸೇವಾ ಸಂಘದ ಹಿರಿಯ ಸದಸ್ಯ, ರಂಗಕರ್ಮಿ ಪ್ರಸನ್ನ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಅಭಿಪ್ರಾಯಪಟ್ಟಿದ್ದಾರೆ.

'ನಗರಗಳಲ್ಲಿ ರಿಯಲ್ ಎಸ್ಟೇಟ್ ಕಾಮಗಾರಿಗಳು, ಬೆಂಗಳೂರಿನ ಮೆಟ್ರೊ ಯೋಜನೆ ಮುಂದುವರೆಸಲು ಸರ್ಕಾರ ಅವಕಾಶ ನೀಡಿದೆ. ಸಾವಿರಾರು ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ತಮ್ಮ ಗ್ರಾಮಗಳತ್ತ ಹಿಂದಿರುಗುತ್ತಿರುವ ಈ ದಾರುಣ ಸಂದರ್ಭದಲ್ಲಿ ಸರ್ಕಾರದ ಈ ನಡೆ ಖಂಡನೀಯ' ಎಂದೂ ಹೇಳಿದ್ದಾರೆ.

8ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

- **20,13,193** ▲ ಒಟ್ಟು ಸೋಂಕಿತರು (19,73,683 ನಿನ್ನೆಯ ವಿವರ)
- **5,87,452** ▲ ಸಕ್ರಿಯ ಪ್ರಕರಣಗಳು
- **14,05,869** ▲ ಗುಣಮುಖರಾದವರು
- **19,852** ▼ ಒಟ್ಟು ಸಾವು

ದಿನದ ಏರಿಕೆ		
ಹೊಸ ಪ್ರಕರಣ	39,510	▲
ಗುಣಮುಖ	22,584	▼
ಸಾವು	480	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕಾರ್ಮಿಕರಿಗೆ ಆಹಾರ– ನೀರು ಒದಗಿಸಿ ಔದಾರ್ಯ

ಲಾಠಿ ಬಿಟ್ಟು ಜಾಗೃತಿಗಿಳಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜಾರಿಗೊಳಿಸಿರುವ ಕಠಿಣ ಲಾಕ್‌ಡೌನ್‌ನ ಎರಡನೇ ದಿನವಾದ ಮಂಗಳವಾರ, ಪೊಲೀಸರು ತುಸು ಮೃದುವಾಗಿ ವರ್ತಿಸಿದರು. ಸೋಮವಾರ ಲಾಠಿ ಝಳಪಿಸಿ ಜನಾಕ್ರೋಶಕ್ಕೆ ಗುರಿಯಾಗಿದ್ದ ಪೊಲೀಸರು ಜಾಗೃತಿ ಮೂಡಿಸಿ ಜನರನ್ನು ನಿಯಂತ್ರಿಸುವ ಕೆಲಸಕ್ಕೆ ಮುಂದಡಿ ಇಟ್ಟರು.

ಸೋಮವಾರ ಖರೀದಿಗೆ ಬಂದವರು, ಅಂಗಡಿ ಮಾಲೀಕರು, ಹಣ್ಣು ಮತ್ತು ತರಕಾರಿ ಮಾರಾಟಗಾರರು, ವಾಹನ ಸವಾರರ ಮೇಲೆ ಪೊಲೀಸರು ಲಾಠಿ ಬೀಸಿ ದರ್ಪ ಮೆರೆದಿದ್ದು, ಈ ವರ್ತನೆಗೆ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಅಗತ್ಯ ವಸ್ತುಗಳ ಖರೀದಿಗೆ ವಾಹನ ಬಳಕೆಗೆ ಅವಕಾಶ ನೀಡುವಂತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಮತ್ತು ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ನಿರ್ದೇಶನ ನೀಡಿದ್ದರು.

ಮಂಗಳವಾರ ಬೆಳಿಗ್ಗೆ 6ರಿಂದ 10 ಗಂಟೆಯವರೆಗೆ ರಾಜ್ಯದಾದ್ಯಂತ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿತ್ತು. ನಗರಗಳಲ್ಲಿ ಸಮೀಪದ ಅಂಗಡಿಗಳಿಗೆ ಮತ್ತು ಗ್ರಾಮೀಣ ಭಾಗದಲ್ಲಿ ಸಮೀಪದ ಪೇಟೆಗಳಿಗೆ ವಾಹನಗಳಲ್ಲೇ ತೆರಳಲು ಅವಕಾಶ ನೀಡಲಾಗಿತ್ತು. ಯಾವುದೇ ಭಾಗದಲ್ಲೂ ಮಂಗಳವಾರ ಲಾಠಿ ಪ್ರಹಾರ ನಡೆಸಿದ, ಜನರ ಮೇಲೆ ದೌರ್ಜನ್ಯ ನಡೆಸಿದ ಪ್ರಕರಣ ವರದಿಯಾಗಿಲ್ಲ.

ಜಾಗೃತಿಗೆ ಯತ್ನ: ಕೆಲವು ಪ್ರದೇಶಗಳಲ್ಲಿ ಬೆಳಿಗ್ಗೆ 10ರ ನಂತರವೂ ಅನಗತ್ಯವಾಗಿ ವಾಹನಗಳಲ್ಲಿ ಓಡಾಡುತ್ತಿದ್ದವರನ್ನು ಪೊಲೀಸರು ತಡೆದಿದ್ದಾರೆ. ಅಂತಹವರ ವಾಹನಗಳನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಲಾಗಿದೆ.

ಬೆಂಗಳೂರು ನಗರ ಸೇರಿದಂತೆ ಹಲವು ಕಡೆಗಳಲ್ಲಿ ಲಾಕ್‌ಡೌನ್ ಅವಧಿಯಲ್ಲಿ ಓಡಾಡುತ್ತಿದ್ದವರನ್ನು ಕರೆತಂದು ಬುದ್ಧಿಮಾತು ಹೇಳಿ ಕಳುಹಿಸುವ ಕೆಲಸವನ್ನೂ ಅಲ್ಲಲ್ಲಿ ಪೊಲೀಸರು ಮಾಡಿದ್ದಾರೆ. ಕೆಲವೆಡೆ ನಿರ್ಗತಿಕರು, ಕೂಲಿ ಕಾರ್ಮಿಕರಿಗೆ ಆಹಾರ ಮತ್ತು ನೀರು ವಿತರಿಸಿ ಪೊಲೀಸರು ನೆರವಾಗಿದ್ದಾರೆ. ಕೆಲವೆಡೆ ಮಾಸ್ಕ್ ಕೂಡ ವಿತರಣೆ ಮಾಡಿ, ಜಾಗೃತಿ ಮೂಡಿಸಿದ್ದಾರೆ.

ಚೆಕ್ ಪೋಸ್ಟ್‌ಗಳಲ್ಲೂ ನಿರಾಳ: ಮೊದಲ ದಿನ ಅಂತರ ಜಿಲ್ಲಾ ಚೆಕ್ ಪೋಸ್ಟ್‌ಗಳು ಮತ್ತು ನಗರ ಪ್ರದೇಶಗಳನ್ನು ಪ್ರವೇಶಿಸುವ ಸ್ಥಳದಲ್ಲಿನ ಚೆಕ್ ಪೋಸ್ಟ್‌ಗಳಲ್ಲಿ ಜನರು ಹೆಚ್ಚಿನ ತೊಂದರೆ ಅನುಭವಿಸಿದ್ದರು. ಆಸ್ಪತ್ರೆಗೆ ತೆರಳುತ್ತಿದ್ದವರು, ಅಗತ್ಯ ವಸ್ತು ಖರೀದಿಗೆ ಹೊರಟವರನ್ನು ಪೊಲೀಸರು ಗಂಟೆಗಟ್ಟಲೆ ತಡೆದು ನಿಲ್ಲಿಸಿದ್ದರು.

ಮಂಗಳವಾರ ಬಹುತೇಕ ಚೆಕ್ ಪೋಸ್ಟ್‌ಗಳಲ್ಲಿ ವಾತಾವರಣ ಸಂಪೂರ್ಣ ಬದಲಾಗಿತ್ತು. ವೈದ್ಯಕೀಯ ದಾಖಲೆಗಳನ್ನು ಹೊಂದಿರುವವರು, ಅನಾರೋಗ್ಯಕ್ಕೆ ಒಳಗಾದವರನ್ನು ತ್ವರಿತವಾಗಿ ಮುಂದಕ್ಕೆ ಕಳಿಸಲಾಗುತ್ತಿತ್ತು. ಅಗತ್ಯ ವಸ್ತು ಖರೀದಿಗೆ ಬಂದವರಿಗೂ ಮುಂದಕ್ಕೆ ಸಾಗಲು ಅವಕಾಶ ಕಲ್ಪಿಸಲಾಯಿತು.

ತಾಳ್ಮೆಯಿಂದ ವರ್ತಿಸಲು ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಲಾಕ್‌ಡೌನ್ ಮಾನದಂಡಗಳನ್ನು ಜಾರಿಗೊಳಿಸುವಾಗ ತಾಳ್ಮೆಯಿಂದ ವರ್ತಿಸಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಹೈಕೋರ್ಟ್ ಸೂಚನೆ ನೀಡಿದೆ. ಕೋವಿಡ್ ವಿಷಯಗಳ ಕುರಿತ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಕಳೆದ ವರ್ಷ ಲಾಕ್‌ಡೌನ್ ಅವಧಿಯಲ್ಲಿ ಜಾರಿಗೊಳಿಸಿದ ಆದೇಶವನ್ನು ಈ ವರ್ಷವೂ ಅನ್ವಯಿಸುವಂತೆ ತಿಳಿಸಿತು.

ಲಾಕ್‌ಡೌನ್ ನಿಯಮ ಉಲ್ಲಂಘಿಸಿ ಹೊರ ಹೋಗುವ ಜನರ ವಿರುದ್ಧ ಲಾಠಿ ಬೀಸುತ್ತಿರುವುದನ್ನು ವಕೀಲರು ಉಲ್ಲೇಖಿಸಿದರು. ಸಂಯಮದಿಂದ ವರ್ತಿಸಲು ಸಂಬಂಧಪಟ್ಟವರಿಗೆ ತಿಳಿಸಲಾಗುವುದು ಎಂದು ಅಡ್ವೊಕೇಟ್ ಜನರಲ್ ಭರವಸೆ ನೀಡಿದರು. ಕಳೆದ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿ ಇದೇ ರೀತಿಯ ದೂರುಗಳು ಬಂದಾಗ 2020ರ ಮಾರ್ಚ್ 30ರಂದು ಹೊರಡಿಸಿದ ಆದೇಶವನ್ನು ಪೀಠ ನೆನಪಿಸಿತು. 'ಲಾಠಿ ಬಳಸದೆ ನಾಗರಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ನಾಗರಿಕರು ಕೂಡ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಪೀಠ ತಿಳಿಸಿತು.

ಎಲ್ಲ ಜಿಲ್ಲೆಗಳಲ್ಲಿ ಮಕ್ಕಳ ಆರೈಕೆ ಕೇಂದ್ರ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯನ್ನು ನಿಯಂತ್ರಿಸಲು ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಮಕ್ಕಳಿಗಾಗಿ ಪ್ರತ್ಯೇಕ ಆರೈಕೆ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ.



ನಗರದ ಜಿಕೆವಿಕೆ ಕೋವಿಡ್ ಆರೈಕೆ ಕೇಂದ್ರಕ್ಕೆ ಭೇಟಿ ನೀಡಿದ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

'ಮೂರನೇ ಅಲೆ ಮಕ್ಕಳ ಮೇಲೆ ಪರಿಣಾಮ ಬೀರಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ. ಅದಕ್ಕಾಗಿ ಈಗಿನಿಂದಲೇ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗುವುದು. ಮೂರು–ನಾಲ್ಕು ದಿನಗಳಲ್ಲಿ ಈ ಸಂಬಂಧ ಕಾರ್ಯಪಡೆ ರಚನೆ ಆಗಲಿದೆ' ಎಂದರು.

ಎಲ್ಲ ಆಸ್ಪತ್ರೆಗಳ ಆವರಣದಲ್ಲಿ ಮಕ್ಕಳಿಗಾಗಿ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಲು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದೂ ಅವರು ತಿಳಿಸಿದರು.

ಗೋವಾ: ಆಮ್ಲಜನಕ ಕೊರತೆ 26 ಕೋವಿಡ್ ರೋಗಿಗಳ ಸಾವು

ಪ್ರಜಾವಾಣಿ ವಾರ್ತೆ

ಪಣಜಿ: ಇಲ್ಲಿನ ಗೋವಾ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ (ಜಿಎಂಸಿಎಚ್) ಆಮ್ಲಜನಕ ಕೊರತೆಯಿಂದಾಗಿ ಮಂಗಳವಾರ ನಸುಕಿನಲ್ಲಿ ನಾಲ್ಕು ಗಂಟೆಗಳ ಅವಧಿಯಲ್ಲಿ 26 ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ.

'ನಸುಕಿನ 2 ರಿಂದ 6 ಗಂಟೆ ಅವಧಿಯಲ್ಲಿ ಈ ದುರಂತ ಸಂಭವಿಸಿದೆ. ಆಸ್ಪತ್ರೆಗೆ ಅಗತ್ಯ ಪ್ರಮಾಣದಷ್ಟು ಆಮ್ಲಜನಕ ಪೂರೈಕೆಯಾಗಿಲ್ಲ. ಆದರೆ, ಆಸ್ಪತ್ರೆಯಲ್ಲಿದ್ದ ಆಮ್ಲಜನಕದ ನಿರ್ವಹಣೆಯಲ್ಲಿ ಯಾವುದೇ ವೈಫಲ್ಯ ಕಂಡುಬಂದಿಲ್ಲ' ಎಂದು ಆರೋಗ್ಯ ಸಚಿವ ವಿಶ್ವಜಿತ್ ರಾಣೆ ಹೇಳಿದರು.

'ಈ ಘಟನೆ ಕುರಿತು ಕೂಡಲೇ ಬಾಂಬೆ ಹೈಕೋರ್ಟ್‌ನ ಪಣಜಿ ಪೀಠ ತನಿಖೆ ನಡೆಸಬೇಕು. ಜಿಎಂಸಿಎಚ್‌ನಲ್ಲಿ ಕೋವಿಡ್ ರೋಗಿಗಳಿಗೆ ನೀಡುವ ಚಿಕಿತ್ಸೆಯ ಉಸ್ತುವಾರಿಯನ್ನೂ ಪೀಠ ವಹಿಸಿಕೊಳ್ಳಬೇಕು' ಎಂದು ಸಚಿವ ರಾಣೆ ಒತ್ತಾಯಿಸಿದರು.

'ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆ ಇತ್ತೇ ಅಥವಾ ನಿರ್ವಹಣೆಯ ಕೊರತೆ ಇತ್ತೇ ಎಂಬುದನ್ನು ಪತ್ತೆ ಹಚ್ಚಬೇಕು ಎಂದು ಹೈಕೋರ್ಟ್ ಪೀಠಕ್ಕೆ ಮನವಿ ಮಾಡುತ್ತೇನೆ. ತಜ್ಞರ ನೆರವು ಪಡೆದು, ಈ ಸಂಬಂಧ ಶ್ವೇತಪತ್ರವನ್ನು ಹೊರತರಬೇಕು ಎಂದೂ ಕೋರುತ್ತೇನೆ' ಎಂದರು.

ಜಿಎಂಸಿಎಚ್‌ಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರ ಹೇಳಿಕೆಗಳು ಸಚಿವ ರಾಣೆ ಅವರ ಹೇಳಿಕೆಗಳಿಗೆ ತದ್ವಿರುದ್ಧವಾಗಿದ್ದವು.

'ಆಸ್ಪತ್ರೆಯ ಕೋವಿಡ್ ವಾರ್ಡ್‌ನಲ್ಲಿ ಆಮ್ಲಜನಕದ ಕೊರತೆ ಇರಲಿಲ್ಲ. ಸಿಲಿಂಡರ್‌ಗಳನ್ನು ಸಕಾಲಕ್ಕೆ ರೋಗಿಗಳ ಬಳಿ ಒಯ್ದು, ಆಮ್ಲಜನಕ ಪೂರೈಕೆಗೆ ಕ್ರಮ ತೆಗೆದುಕೊಳ್ಳಲಿಲ್ಲ. ಹೀಗಾಗಿ ರೋಗಿಗಳು ಸಾವನ್ನಪ್ಪಿದ್ದಾರೆ' ಎಂದು ಹೇಳುವ ಮೂಲಕ, ಆಸ್ಪತ್ರೆಯಲ್ಲಿ ಆಮ್ಲಜನಕದ ನಿರ್ವಹಣೆಯಲ್ಲಿ ಕೊರತೆ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

'ಆಸ್ಪತ್ರೆಯಲ್ಲಿ ಆಮ್ಲಜನಕ ಸಿಲಿಂಡರ್‌ಗಳ ಸಾಕಷ್ಟು ದಾಸ್ತಾನಿದೆ. ಅವುಗಳನ್ನು ಸಕಾಲಕ್ಕೆ ಬಳಸದಿದ್ದರೆ, ಅವುಗಳ ದಾಸ್ತಾನು ಇದ್ದರೂ ವ್ಯರ್ಥ' ಎಂದರು.

ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಬಗ್ಗೆ ಮೃತ ರೋಗಿಗಳ ಸಂಬಂಧಿಕರು ಮುಖ್ಯಮಂತ್ರಿ ಸಾವಂತ್ ಅವರಿಗೆ ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಾವಂತ್, 'ಒಂದು ದಿನದಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವೆ' ಎಂದು ಭರವಸೆ ನೀಡಿದರು.

ಸಮರ್ಪಕವಾಗಿ ಆಮ್ಲಜನಕ ಪೂರೈಕೆ ಖಾತರಿಪಡಿಸುವುದು ಸೇರಿದಂತೆ ಕೋವಿಡ್ ರೋಗಿಗಳ ಚಿಕಿತ್ಸೆ ಕುರಿತಂತೆ ಅವರು ಉನ್ನತ ಅಧಿಕಾರಿಗಳು ಹಾಗೂ ಜಿಎಂಸಿಎಚ್ ಅಧಿಕಾರಿಗಳೊಂದಿಗೆ ಚರ್ಚಿಸುವರು ಎಂದು ಮೂಲಗಳು ಹೇಳಿವೆ.

ಮುಸುಕಿನ ಗುದ್ದಾಟ

ರಾಜ್ಯದಲ್ಲಿನ ಕೋವಿಡ್–19 ಪರಿಸ್ಥಿತಿ ನಿರ್ವಹಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹಾಗೂ ಆರೋಗ್ಯ ಸಚಿವ ವಿಶ್ವಜಿತ್ ರಾಣೆ ನಡುವೆ ಕಳೆದ ಕೆಲವು ವಾರಗಳಿಂದ ಮುಸುಕಿನ ಗುದ್ದಾಟ ನಡೆದಿದೆ. ಈಗ ಜಿಎಂಸಿಎಚ್‌ನಲ್ಲಿನ ದುರಂತದಿಂದ ಇದು ಬಹಿರಂಗಗೊಂಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಸುವ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಇತ್ತೀಚೆಗೆ ಸಚಿವ ರಾಣೆ ಅವರಿಂದ ಕಿತ್ತುಕೊಂಡಿದ್ದ ಮುಖ್ಯಮಂತ್ರಿ ಸಾವಂತ್, ಅದನ್ನು ತಾವೇ ನಿರ್ವಹಣೆ ಮಾಡುತ್ತಿದ್ದಾರೆ. ಇದು ರಾಣೆ ಅವರ ಅಸಮಾಧಾನಕ್ಕೆ ಕಾರಣವಾಗಿದೆ ಎನ್ನಲಾಗುತ್ತಿದೆ.

ಈ ವಿಷಯವಾಗಿ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ಸಚಿವರು ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ಕೋವಿಡ್–19 ವಿರುದ್ಧದ ಹೋರಾಟಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದ್ದವು.

ಈ ಕುರಿತು ಟ್ವೀಟ್ ಮಾಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ದಿಗಂಬರ ಕಾಮತ್, 'ನಿರ್ವಹಣೆಯಲ್ಲಿ ವೈಫಲ್ಯವಿದೆ ಎಂಬುದು ಮನವರಿಕೆಯಾಗಲು ಇನ್ನೂ ಎಷ್ಟು ಸಾವು ಸಂಭವಿಸಬೇಕು' ಎಂದು ಪ್ರಶ್ನಿಸಿದ್ದಾರೆ.

ಇಂದಿರಾ ಕ್ಯಾಂಟೀನ್: 1 ಲಕ್ಷಕ್ಕೂ ಹೆಚ್ಚು ಮಂದಿಗೆ ಉಚಿತ ಆಹಾರ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ಜಾರಿಗೊಳಿಸಲಾದ ಲಾಕ್‌ಡೌನ್‌ನಿಂದ ಕೆಲಸವಿಲ್ಲದೇ ಒಪ್ಪೊತ್ತಿನ ಊಟಕ್ಕೂ ಸಮಸ್ಯೆ ಎದುರಿಸುತ್ತಿರುವ 1 ಲಕ್ಷಕ್ಕೂ ಅಧಿಕ ಮಂದಿಗೆ ಬಿಬಿಎಂಪಿ ಬುಧವಾರದಿಂದ ಆಹಾರದ ಪೊಟ್ಟಣಗಳನ್ನು ಒದಗಿಸಲು ಮುಂದಾಗಿದೆ.



ಬಿಬಿಎಂಪಿ ವ್ಯಾಪ್ತಿಯ ಎಲ್ಲ ಇಂದಿರಾ ಕ್ಯಾಂಟೀನ್‌ಗಳಲ್ಲಿ ಬಡವರು, ವಲಸಿಗರು ಹಾಗೂ ಕೂಲಿ ಕಾರ್ಮಿಕರಿಗೆ ದಿನದ ಮೂರೂ ಹೊತ್ತು ಉಚಿತ ಆಹಾರದ ಪೊಟ್ಟಣಗಳನ್ನು ವಿತರಿಸಲಾಗುತ್ತದೆ. ಬೆಳಗಿನ ಉಪಾಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟದ ಪೊಟ್ಟಣಗಳನ್ನು ಲಾಕ್‌ಡೌನ್ ಅವಧಿ ಮುಗಿಯುವವರೆಗೂ (ಮೇ 24) ನಿತ್ಯ ಪಡೆಯಬಹುದು.

ಆಹಾರದ ಪೊಟ್ಟಣಗಳನ್ನು ಪಡೆಯಲು ಬರುವವರು ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ವಾಹನ ಚಾಲನೆ ಪರವಾನಗಿ, ಕಾರ್ಮಿಕ ಇಲಾಖೆಯ ಗುರುತಿನ ಚೀಟಿ ಮೊದಲಾದುವುಗಳಲ್ಲಿ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ತೋರಿಸಬೇಕು.

2ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮುಂದಿನ ಒಂದು ವಾರಕ್ಕೆ ಬೇಕಾಗುವ ಪ್ರಮಾಣದ ಕುರಿತು ವಿವರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ

ಆಮ್ಲಜನಕ ಬೇಡಿಕೆ: ಮಾಹಿತಿ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇ 5ರಿಂದ 11ರವರೆಗೆ ದಿನಕ್ಕೆ ಎಷ್ಟು ಪ್ರಮಾಣದಲ್ಲಿ ಆಮ್ಲಜನಕದ ಬೇಡಿಕೆ ಇತ್ತು, ಮುಂದಿನ ಒಂದು ವಾರಕ್ಕೆ ಬೇಕಾಗುವ ಪ್ರಮಾಣ ಎಷ್ಟು ಎಂಬುದರ ವಿವರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ರಾಜ್ಯಕ್ಕೆ ನೀಡುತ್ತಿರುವ ಆಮ್ಲಜನಕದ ಪ್ರಮಾಣ ಮೇ 11ರಿಂದ 1,015 ಟನ್‌ಗೆ ಹೆಚ್ಚಳವಾಗಿದೆ ಎಂದು ರಾಜ್ಯ ಸರ್ಕಾರ ಸಲ್ಲಿಸಿದ ವಿವರವನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಪರಿಶೀಲಿಸಿತು. ರಾಜ್ಯದ ಪಾಲನ್ನು 1,200 ಟನ್‌ಗೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಈ ಹಿಂದೆ ಪೀಠ ನಿರ್ದೇಶನ ನೀಡಿತ್ತು. ಈ ಸಂಬಂಧ ಅನುಸರಣಾ ವರದಿ ಸಲ್ಲಿಸಿಲ್ಲ ಎಂಬುದನ್ನೂ ಪೀಠ ಗಮನಿಸಿತು.

ಈ ವಿಷಯದ ಕುರಿತು ಬುಧವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲಾಗುವುದು. ಸಭೆಯ ಫಲಿತಾಂಶವನ್ನು ಪೀಠಕ್ಕೆ ಸಲ್ಲಿಸಲಾಗುವುದು ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಮಾಹಿತಿ ನೀಡಿದರು. ವಿಚಾರಣೆಯನ್ನು ಪೀಠ ಗುರುವಾರಕ್ಕೆ ಮುಂದೂಡಿತು.

ರಾಜ್ಯದ ಆಮ್ಲಜನಕ ಕೋಟಾವನ್ನು 865 ಟನ್‌ನಿಂದ 965 ಟನ್‌ಗೆ ಹೆಚ್ಚಿಸಲಾಗಿದೆ ಎಂದು ಈ ಹಿಂದಿನ ವಿಚಾರಣೆ ವೇಳೆ ಕೇಂದ್ರ ಸರ್ಕಾರ ಪೀಠಕ್ಕೆ ತಿಳಿಸಿತ್ತು. ಸೋಂಕಿತರ ಸಂಖ್ಯೆ ದಿಢೀರ್ ಏರಿಕೆ ಆಗಿರುವ ಕಾರಣ ಮೇ 5ರೊಳಗೆ 1,792 ಟನ್ ಆಮ್ಲಜನಕ ಅಗತ್ಯವಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ದಿನಕ್ಕೆ 1,200 ಟನ್ ಆಮ್ಲಜನಕ ಪೂರೈಸುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಿತ್ತು.



ಜೆಮ್‌ಶೆಡ್‌ಪುರದಿಂದ ಆಮ್ಲಜನಕ ತಂದ ಆಕ್ಸಿಜನ್ ಎಕ್ಸ್‌ಪ್ರೆಸ್ ಮಂಗಳವಾರ ಬೆಂಗಳೂರಿನ ವೈಟ್‌ಫೀಲ್ಡ್ ರೈಲು ನಿಲ್ದಾಣಕ್ಕೆ ತಲುಪಿದ್ದು, ಆಮ್ಲಜನಕ ಕಂಟೇನರ್‌ಗಳ ಬಳಿ ಪೊಲೀಸರು ಕಾವಲು ನಿಂತಿದ್ದರು –ಪ್ರಜಾವಾಣಿ ಚಿತ್ರ

ಚಾಮರಾಜನಗರ ದುರಂತ ಹೈಕೋರ್ಟ್‌ಗೆ ವರದಿ ಸಲ್ಲಿಕೆ

ಬೆಂಗಳೂರು: ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಮ್ಲಜನಕ ಸಿಗದೆ 24 ಜನ ಮೃತಪಟ್ಟ ಘಟನೆ ಬಗ್ಗೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ (ಕೆಎಸ್‌ಎಲ್‌ಎಸ್‌ಎ) ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ನೇತೃತ್ವದ ಸಮಿತಿ ಹೈಕೋರ್ಟ್‌ಗೆ ವರದಿ ಸಲ್ಲಿಸಿದೆ. ನಿವೃತ್ತ ನ್ಯಾಯಮೂರ್ತಿ ಕೆ.ಎನ್.ಕೇಶವನಾರಾಯಣ ಮತ್ತು ನಿವೃತ್ತ ಡಿಜಿಪಿ ಎಸ್.ಟಿ. ರಮೇಶ್ ಅವರನ್ನು ಒಳಗೊಂಡ ಸಮಿತಿ ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸಿದೆ. ನ್ಯಾಯಪೀಠ ಇದನ್ನು ಬುಧವಾರ ವಿಚಾರಣೆ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ.

ಇದೇ ವಿಷಯದ ಬಗ್ಗೆ ಹಿರಿಯ ಐಎಎಸ್ ಅಧಿಕಾರಿ ಶಿವಯೋಗಿ ಸಿ. ಕಳಸದ ಅವರ ನಡೆಸುತ್ತಿರುವ ವಿಚಾರಣೆ ಆಧರಿಸಿ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಪೀಠಕ್ಕೆ ಅಡ್ವೊಕೇಟ್ ಜನರಲ್ ಭರವಸೆ ನೀಡಿದರು.

ಪೀಠವು ವಿಚಾರಣೆ ಕೈಗೆತ್ತಿಕೊಳ್ಳುವ ಬಗ್ಗೆ ಸೂಚನೆ ನೀಡಿದ ಬಳಿಕ ತನಿಖಾ ಆಯೋಗ ರಚಿಸುವ ನಿರ್ಧಾರ ಪ್ರಕಟಿಸಿದ ಸರ್ಕಾರದ ಕ್ರಮದ ಬಗ್ಗೆ ಪೀಠ ಅಸಮಾಧಾನ ವ್ಯಕ್ತಪಡಿಸಿತ್ತು. ಘಟನೆ ಬಗ್ಗೆ ವರದಿ ಸಲ್ಲಿಸುವಂತೆ ಕೆಎಸ್‌ಎಲ್‌ಎಸ್‌ಎ ಸಮಿತಿಗೆ ಪೀಠ ನಿರ್ದೇಶನ ನೀಡಿತ್ತು.

ನಿಧನ ವಾರ್ತೆ

ಈಶ್ವರ



ನೆಲಮಂಗಲ: ತ್ಯಾಮಗೊಂಡ್ಲು ನಿಸರ್ಗ ವಿದ್ಯಾನಿಕೇತನ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಮಾಕನಕುಪ್ಪೆಯ ಈಶ್ವರ(56) ಸೋಮವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಕೋವಿಡ್ ವಾರ್ ರೂಂಗೆ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಭೇಟಿ

20ಕ್ಕೂ ಹೆಚ್ಚು ದಿನ ಇದ್ದರೆ ಮನೆಗೆ ಕಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಕೋವಿಡ್ ಆಸ್ಪತ್ರೆಗಳಲ್ಲಿ 20ರಿಂದ 30 ದಿನಗಳ ಬಳಿಕವೂ 800ಕ್ಕೂ ಹೆಚ್ಚು ರೋಗಿಗಳು ಉಳಿದಿದ್ದಾರೆ. ಅವರನ್ನು ಮನೆಗೆ ಕಳುಹಿಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ ಸೂಚಿಸಿದ್ದಾರೆ.

ಮಾಗಡಿ ರಸ್ತೆ ಮತ್ತು ಮಲ್ಲೇಶ್ವರದ ವಾರ್‌ರೂಂಗಳಿಗೆ ಭೇಟಿ ನೀಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಆಸ್ಪತ್ರೆಗಳಲ್ಲಿನ ರೋಗಿಗಳು ಮತ್ತು ಹಾಸಿಗೆಯ ಸ್ಥಿತಿಗತಿಯ ಬಗ್ಗೆ ಅವರು ಮಾಹಿತಿ ಪಡೆದರು. ನಗರದಲ್ಲಿ 12,202 ಹಾಸಿಗೆಗಳು ಲಭ್ಯವಿದ್ದು, 1 ರಿಂದ 10 ದಿನಗಳವರೆಗಿನವರು 6,500 ಮಂದಿ, 11 ರಿಂದ 20 ದಿನಗಳವರೆಗಿನವರು 1,900 ಮಂದಿ, 20 ದಿನಗಳ ಮೇಲ್ಪಟ್ಟವರು 503 ಮತ್ತು 30 ದಿನಗಳಿಗೆ ಮೇಲ್ಪಟ್ಟವರು 303 ಮಂದಿ ರೋಗಿಗಳು ಇದ್ದಾರೆ ಎಂದು ವಿವರಿಸಿದರು.

ಒಮ್ಮೆ ಸೋಂಕು ಕಡಿಮೆ ಆದ ಮೇಲೆ ರೋಗಿಗಳು ತಮ್ಮ ಮನೆಗಳಲ್ಲಿಯೇ ಚಿಕಿತ್ಸೆ ಮುಂದುವರಿಸಬೇಕು. ಆಸ್ಪತ್ರೆಗಳಲ್ಲಿ ಉಳಿದುಕೊಳ್ಳುವುದರಿಂದ ತುರ್ತು ಚಿಕಿತ್ಸೆ ಇರುವವರಿಗೆ ತೊಂದರೆ ಆಗುತ್ತಿದೆ ಎಂದು ಹೇಳಿದರು.



ಕೋವಿಡ್ ವಾರ್ ರೂಂನಲ್ಲಿ ಸಿಬ್ಬಂದಿ ಜತೆ ಚರ್ಚಿಸಿದ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ

‘ಕೂಡಲೇ ಪರಿಹಾರ ಪ್ಯಾಕೇಜ್ ಪ್ರಕಟಿಸಿ’

ಬೆಂಗಳೂರು: ‘ಕೋವಿಡ್‌ನಿಂದಾಗಿ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದನ್ನು ಮನಗಂಡು ರಾಜ್ಯ ಸರ್ಕಾರ ಕೂಡಲೇ ಪರಿಹಾರ ಪ್ಯಾಕೇಜ್ ಘೋಷಿಸಬೇಕು. ಅಗತ್ಯ ಪಡಿತರವನ್ನೂ ವಿತರಿಸಬೇಕು. ಆ ಮೂಲಕ ಮನೆಯಲ್ಲೇ ಇರುವಂತೆ ಜನರ ಮನವೊಲಿಸಬೇಕು’ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

‘ಲಾಕ್‌ಡೌನ್ ನೆಪದಲ್ಲಿ ಪೊಲೀಸರು ಜನಸಾಮಾನ್ಯರ ಮೇಲೆ ದಬ್ಬಾಳಿ ಮಾಡುತ್ತಿದ್ದಾರೆ. ಸಿಕ್ಕ ಸಿಕ್ಕವರ ಮೇಲೆ ಲಾಠಿ ಬೀಸುವ ಮೂಲಕ ಅಮಾನವೀಯತೆ ಪ್ರದರ್ಶಿಸಿದ್ದಾರೆ. ಮಾನವ ಹಕ್ಕುಗಳನ್ನೂ ಉಲ್ಲಂಘಿಸಿದ್ದಾರೆ. ಇದು ಖಂಡನೀಯ. ಪೊಲೀಸರ ಈ ದಬ್ಬಾಳಿಕೆಗೆ ರಾಜ್ಯ ಸರ್ಕಾರ ಕಡಿವಾಣ ಹಾಕಬೇಕು’ ಎಂದು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಎನ್.ಉಮೇಶ್ ತಿಳಿಸಿದ್ದಾರೆ.

‘ಕೋವಿಡ್ ವಾರ್ ರೂಮ್‌ಗಳ ಸುಧಾರಣೆಯ ನೆಪದಲ್ಲಿ ರಾಜಕೀಯ ಮೇಲಾಟಗಳು ನಡೆಯುತ್ತಿವೆ. ಇದು ಕೂಡಲೇ ನಿಲ್ಲಬೇಕು. ಬಿಜೆಪಿ ಸಂಸದರು ಹಾಗೂ ಶಾಸಕರು ಹಾಸಿಗೆ ಬ್ಲಾಕಿಂಗ್ ಆರೋಪ ಮಾಡುವ ಮೂಲಕ ವ್ಯವಸ್ಥೆಯ ಮೇಲೆ ಜನರಿಗಿದ್ದ ನಂಬಿಕೆ ಕಳೆಯುವಂತೆ ಮಾಡಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಅವರು 100 ಗಂಟೆಗಳಲ್ಲಿ ವಾರ್ ರೂಮ್‌ಗಳ ವ್ಯವಸ್ಥೆ ಸುಧಾರಣೆ ಮಾಡುವುದಕ್ಕೆ ಅನೇಕ ಶಿಫಾರಸ್ಸುಗಳನ್ನು ನೀಡಿದ್ದಾರೆ. ಅವುಗಳನ್ನು ಅಳವಡಿಸಿದರೆ ಪರಿಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆ ಇದೆ’ ಎಂದು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ ಹೇಳಿದ್ದಾರೆ.

‘ವಿಶೇಷ ಪ್ಯಾಕೇಜ್ ಚಿಂತನೆ ಇಲ್ಲ’

ರಾಜ್ಯದಲ್ಲಿ ಲಾಕ್‌ಡೌನ್ ಘೋಷಣೆ ಮಾಡಿರುವ ಕಾರಣ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವ ಚಿಂತನೆ ಇಲ್ಲ ಎಂದು ಯಡಿಯೂರಪ್ಪ ಹೇಳಿದರು.

ಕೋವಿಡ್ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬರುತ್ತಿದ್ದು, ಪೂರ್ಣ ಪ್ರಮಾಣದ ನಿಯಂತ್ರಣಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿದರು.

ಬಿಲ್ ಮನ್ನಾ, ಸಹಾಯಧನಕ್ಕೆ ಆಗ್ರಹ

ಬೆಂಗಳೂರು: ‘ದುರ್ಬಲ ವರ್ಗಗಳ ಜನರಿಗೆ ಸರ್ಕಾರ ಮಾಸಿಕ ₹5 ಸಾವಿರ ಸಹಾಯಧನ ಹಾಗೂ ಮೂರು ತಿಂಗಳ ವಿದ್ಯುತ್ ಮತ್ತು ನೀರಿನ ಬಿಲ್ ಮನ್ನಾ ಮಾಡಬೇಕು’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಆಗ್ರಹಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೂರು ಹೊತ್ತಿನ ಊಟಕ್ಕೆ ಅಗತ್ಯವಿರುವ ಎಲ್ಲ ಪಡಿತರವನ್ನು ಎರಡು ತಿಂಗಳವರೆಗೆ ಮನೆಬಾಗಿಲಿಗೆ ಉಚಿತವಾಗಿ ವಿತರಿಸಬೇಕು. ಮೂರು ತಿಂಗಳ ಅವಧಿಗೆ ಪ್ರತಿ ಕುಟುಂಬಕ್ಕೆ ಉಚಿತವಾಗಿ 200 ಯೂನಿಟ್ ವಿದ್ಯುತ್ ಹಾಗೂ 20 ಸಾವಿರ ಲೀಟರ್ ನೀರು ಪೂರೈಸಬೇಕು’ ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ

ಬಡವರಿಗೆ ಪಡಿತರ: ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ಬೆಂಗಳೂರು: ಲಾಕ್ ಡೌನ್ ಅವಧಿಯಲ್ಲಿ ಆದಾಯ ಇಲ್ಲದೇ ಇರುವ ಸಮುದಾಯದವರಿಗೆ ಆಹಾರ ವಿತರಿಸುವ ಬಗ್ಗೆ ನಿರ್ಧಾರ ಕೈಗೊಂಡು ಗುರುವಾರದೊಳಗೆ-(ಮೇ 13) ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ಈ ಬಗ್ಗೆ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ‘ಲಾಕ್‌ಡೌನ್ ಕಾರಣದಿಂದ ಕೆಲ ವರ್ಗದ ಜನರಿಗೆ ಆದಾಯ ಇಲ್ಲವಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಅಂತಹ ನಾಗರಿಕರಿಗೆ ಆಹಾರ ಪೂರೈಕೆ ಮಾಡಬೇಕಾಗುತ್ತದೆ. ಹೀಗಾಗಿ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಹೇಳಿತು.

‘ಆಹಾರ ಭದ್ರತಾ ಕಾರ್ಯವಿಧಾನದ ಭಾಗವಾಗಿ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದವರಿಗೂ ಆಹಾರ ಧಾನ್ಯ ವಿತರಿಸುವ ಯೋಜನೆ ರೂಪಿಸಲಾಗಿದೆ. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆಗಾಗಿ ಕಾಯಲಾಗುತ್ತಿದೆ’ ಎಂದು ಸರ್ಕಾರದ ಪರ ವಕೀಲರು ತಿಳಿಸಿದರು.

ಕೂಡಲೇ ನಿರ್ಧಾರ ಕೈಗೊಂಡು ಗುರುವಾರ ವರದಿ ಸಲ್ಲಿಸಬೇಕು ಎಂದು ಪೀಠ ತಿಳಿಸಿತು. ಬಿಬಿಎಂಪಿ ವ್ಯಾಪ್ತಿ ಹೊರತುಪಡಿಸಿ ರಾಜ್ಯದ ಎಲ್ಲಾ ಇಂದಿರಾ ಕ್ಯಾಂಟಿನ್‌ಗಳಲ್ಲಿ ಮೇ 24ರ ತನಕ ಊಟ-ಉಪಾಹಾರವನ್ನು ಉಚಿತವಾಗಿ ನೀಡಲಾಗುವುದು ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿತು..



‘ಹೃದಯ ಸಂಬಂಧಿ ಕಾಯಿಲೆ: ಸಾವಿನ ಪ್ರಮಾಣ ಶೇಕಡ 22ಕ್ಕೆ ಏರಿಕೆ’

ಬೆಂಗಳೂರು: ‘ಕೋವಿಡ್ ಕಾಲಿಡುವ ಮುನ್ನ ಹೃದಯ ಸಂಬಂಧಿ ಕಾಯಿಲೆಗಳಿಂದ ಮರಣ ಹೊಂದುತ್ತಿದ್ದವರ ಪ್ರಮಾಣ ಶೇ 15ರಷ್ಟಿತ್ತು. ಆದರೆ, ಈಗ ಶೇ 22ಕ್ಕೆ ಏರಿದೆ. ಹೃದಯ ಸಂಬಂಧಿ ಕಾಯಿಲೆಗಳಿಂದ ಸುಮಾರು 8 ಸಾವಿರ ಮಂದಿ ಸತ್ತಿರುವುದು ಇತ್ತೀಚಿನ ವರದಿಗಳಿಂದ ದೃಢಪಟ್ಟಿದೆ’ ಎಂದು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದರು.

ರಾಜ್ಯ ಎನ್‌ಎಸ್‌ಎಸ್, ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ‘ಕೋವಿಡ್ ಕಾಲದಲ್ಲಿ ಹೃದಯಾಘಾತ ತಡೆಗಟ್ಟುವಿಕೆ ಹಾಗೂ ಪ್ರಥಮ ಚಿಕಿತ್ಸೆ ಕುರಿತು ಜಾಗೃತಿ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್ ‘ಟಿವಿಯಲ್ಲಿ ಬಿತ್ತರಗೊಳ್ಳುವ ಸುದ್ದಿ ಮತ್ತು ಕಾರ್ಯಕ್ರಮಗಳನ್ನು ನೋಡಿ ಜನರು ಹೆಚ್ಚು ಭೀತರಾಗುತ್ತಿದ್ದಾರೆ. ಇದರಿಂದ ಒತ್ತಡ ಹೆಚ್ಚಾಗಿ ಹೃದಯ ಸಂಬಂಧಿ ಕಾಯಿಲೆಗೆ ತುತ್ತಾಗುತ್ತಿದ್ದಾರೆ’ ಎಂದರು.

ಆದ್ಯತೆ ಆಧಾರದಲ್ಲಿ ಹಾಸಿಗೆ ಹಂಚಿಕೆಗೆ 28 ಟ್ರಯಾಜ್ ಕೇಂದ್ರ

ಬೆಂಗಳೂರು: ಕೋವಿಡ್ ರೋಗಿಗಳ ಆರೋಗ್ಯ ಸ್ಥಿತಿಯ ಆಧಾರದಲ್ಲಿ ಆಸ್ಪತ್ರೆ ದಾಖಲಾತಿಯ ಅಗತ್ಯ ನಿರ್ಧರಿಸುವ ಸಲುವಾಗಿ ನಗರದ 28 ವಿಧಾನಸಭಾ ಕ್ಷೇತ್ರಗಳಲ್ಲಿ ಟ್ರಯಾಜ್ ಕೇಂದ್ರಗಳನ್ನು ಆರಂಭಿಸಲಾಗುತ್ತಿದೆ. ಈ ಕೇಂದ್ರಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿವೆ.

ಸೋಂಕಿತರ ಬಂಧುಗಳು ನೇರವಾಗಿ ಈ ಕೇಂದ್ರಗಳಿಗೆ ಕರೆತಂದು ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಡಿ ಲಭ್ಯವಿರುವ ಹಾಸಿಗೆ ಸೌಲಭ್ಯ ಪಡೆಯಬಹುದು. ಸೋಂಕಿತರೂ ನೇರವಾಗಿ ಈ ಕೇಂದ್ರಗಳಿಗೆ ತೆರಳಿ ತಪಾಸಣೆಗೆ ಒಳಗಾಗಬಹುದು.

ಈ ಟ್ರಯಾಜ್ ಕೇಂದ್ರಗಳಿಗೆ ವೈದ್ಯರ ತಂಡವನ್ನು ಬಿಬಿಎಂಪಿ ನೇಮಿಸಲಿದೆ. ಅವರು ದಿನದ 24 ಗಂಟೆಯೂ ಮೂರು ಪಾಳಿಗಳಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಸೋಂಕಿತರ ಆರೋಗ್ಯ ಸ್ಥಿತಿಯನ್ನು ಅವಲೋಕಿಸಿ ಅವರಿಗೆ ಸಾಮಾನ್ಯ ಹಾಸಿಗೆ ಸಾಕೇ, ಆಮ್ಲಜನಕ ಪೂರೈಕೆ ವ್ಯವಸ್ಥೆಯ ಹಾಸಿಗೆ ಒದಗಿಸಬೇಕೇ, ತೀವ್ರ ಅವಲಂಬನೆ ಘಟಕದ (ಎಚ್‌ಡಿಯು), ತೀವ್ರ ನಿಗಾ ಘಟಕ (ಐಸಿಯು) ಅಥವಾ ವೆಂಟಿಲೇಟರ್ ಸೌಕರ್ಯ ಇರುವ ಐಸಿಯುಗಳಿಗೆ ದಾಖಲಿಸಬೇಕೇ ಎಂಬುದನ್ನು ಈ ವೈದ್ಯರು ನಿರ್ಧರಿಸಲಿದ್ದಾರೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿಲ್ಲದವರಿಗೆ ಅಗತ್ಯ ಬಿದ್ದರೆ ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲು ಮಾಡಲು ಶಿಫಾರಸು ಮಾಡುತ್ತಾರೆ.

ಪ್ರತಿಯೊಂದು ಟ್ರಯಾಜ್ ಕೇಂದ್ರಗಳನ್ನೂ ಸಮೀಪದ ರೆಫರಲ್ ಆಸ್ಪತ್ರೆ, ವೈದ್ಯಕೀಯ ಕಾಲೇಜು ಅಥವಾ ಖಾಸಗಿ ಆಸ್ಪತ್ರೆಗಳ ಜೊತೆ ಸಂಯೋಜಿಸಲಾಗುತ್ತದೆ. ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವ ರೋಗಿಗಳನ್ನು ಸೂಕ್ತ ಆಸ್ಪತ್ರೆಗೆ ದಾಖಲಿಸಲು ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕೇಂದ್ರಗಳಲ್ಲಿ ಅಗತ್ಯ ವೈದ್ಯಕೀಯ ಪರಿಕರಗಳನ್ನೂ ಬಿಬಿಎಂಪಿ ಪೂರೈಸಲಿದೆ.

ಪ್ರತಿಯೊಂದು ಕೋವಿಡ್ ಆರೈಕೆ ಕೇಂದ್ರಗಳೂ ಟ್ರಯಾಜ್ ಕೇಂದ್ರಗಳನ್ನು ಹೊಂದಿರಲಿವೆ. ಅಲ್ಲಿಗೂ ಸೋಂಕಿತರು ನೇರವಾಗಿ ಹೋಗಿ ವೈದ್ಯಕೀಯ ಸಲಹೆ ಪಡೆಯಬಹುದು.



ಅಂತರ ಮಾಯ...

ಟಿ.ದಾಸರಹಳ್ಳಿಯ ಮಾರುಕಟ್ಟೆಯಲ್ಲಿ ಸೊಪ್ಪು ಹಾಗೂ ತರಕಾರಿ ಖರೀದಿಸಲು ಜನರು ಮಂಗಳವಾರ ಗುಂಪುಗೂಡಿದ್ದರು. – ಪ್ರಜಾವಾಣಿ ಚಿತ್ರ

ಮನುಕುಲವೇ ಒಂದಾಗಲಿ: ಜಗ್ಗಿ ವಾಸುದೇವ್ ಸಲಹೆ

ಬೆಂಗಳೂರು: ‘ಕೋವಿಡ್ ವಿರುದ್ಧದ ಹೋರಾಟಕ್ಕೆ ಇಡೀ ಮನುಕುಲವೇ ಜೊತೆಯಾಗಬೇಕು. ನಿರ್ದಿಷ್ಟವಾಗಿ ಒಬ್ಬರತ್ತ ಬೊಟ್ಟು ಮಾಡುವುದನ್ನು ಬಿಡಬೇಕು. ರೋಷ, ದುಃಖ, ಹತಾಶೆಗಳಿಂದ ಯಾವ ಪ್ರಯೋಜನವೂ ಇಲ್ಲ. ಇದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಬಹುದಷ್ಟೇ. ಹೀಗಾಗಿ ನಾವೆಲ್ಲಾ ಜವಾಬ್ದಾರಿ ಅರಿತು ಕೆಲಸ ಮಾಡಬೇಕು’ ಎಂದು ಈಶ ಫೌಂಡೇಷನ್‌ನ ಸಂಸ್ಥಾಪಕ ಜಗ್ಗಿ ವಾಸುದೇವ್ ತಿಳಿಸಿದರು.

ದೆಹಲಿ ಕೋವಿಡ್ ರೆಸ್ಪಾನ್ಸ್ ಟೀಂ ಮಂಗಳವಾರ ಹಮ್ಮಿಕೊಂಡಿದ್ದ ‘ಪಾಸಿಟಿವಿಟಿ ಅನ್‌ಲಿಮಿಟೆಡ್’ ಉಪನ್ಯಾಸ ಮಾಲಿಕೆಯಲ್ಲಿ ಅವರು ಮಾತನಾಡಿದರು.

‘ಸರ್ಕಾರ ವಿಧಿಸಿರುವ ನಿಬಂಧನೆಗಳಿಂದ ಜೀವನಶೈಲಿಗೆ ಅಲ್ಪ ತೊಡಕಾಗಿರಬಹುದು. ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಜೀವ ರಕ್ಷಿಸಿಕೊಳ್ಳಲು ಇವು ತುಂಬಾ ಅವಶ್ಯ. ರೋಗಿಗಳ ಆರೈಕೆ ಮಾಡುವುದು ಶುಶ್ರೂಷಕಿಯರ ಕೆಲಸ ಎಂದು ಭಾವಿಸಬಾರದು. ಸೂಕ್ತ ಮುಂಜಾಗ್ರತಾ ಕ್ರಮಗಳೊಂದಿಗೆ ನಾವೂ ಕೂಡ ಆರೈಕೆ ಮಾಡಬಹುದು. ಎಲ್ಲರೂ ಆರೋಗ್ಯಕರ ಜೀವನಶೈಲಿ ಮೈಗೂಡಿಸಿಕೊಳ್ಳಬೇಕು. ಆಗಾಗ ಕಷಾಯ ಕುಡಿಯುತ್ತಿರಬೇಕು. ಇದರಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸಲಿದ್ದು, ಸೋಂಕಿನಿಂದ ಪಾರಾಗಬಹುದು’ ಎಂದರು.



ಜೈನ ಮುನಿ ಪ್ರಮಾಣ್ ಸಾಗರ್‌ಜೀ ಮಹಾರಾಜ್ ‘ಕೋವಿಡ್ ಪ್ರಕರಣಗಳು ಏರುತ್ತಲೇ ಇದೆ. ಸಾಯುವವರ ಸಂಖ್ಯೆಯೂ ಅಧಿಕವಿದೆ. ಆಸ್ಪತ್ರೆಗಳಲ್ಲೂ ಹಾಸಿಗೆ ಸಿಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಮಾನಸಿಕವಾಗಿ ಸದೃಢರಾಗಬೇಕು. ಹಾಗಾದಾಗ ಮಾತ್ರ ಈ ಪಿಡುಗಿನ ವಿರುದ್ಧ ಜಯಿಸಲು ಸಾಧ್ಯ’ ಎಂದು ಹೇಳಿದರು.

ಇಂದಿರಾ ಕ್ಯಾಂಟೀನ್‌ಗಳಲ್ಲಿ ಉಚಿತ ಆಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇದೇ 24ರವರೆಗೆ ಲಾಕ್‌ಡೌನ್ ಘೋಷಿಸಿರುವ ಕಾರಣ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಇಂದಿರಾ ಕ್ಯಾಂಟೀನ್‌ಗಳಲ್ಲಿ ಮಂಗಳವಾರದಿಂದಲೇ ದಿನದ ಮೂರು ಹೊತ್ತು ಉಚಿತ ಆಹಾರ ವಿತರಿಸಲಾಗುತ್ತದೆ.

ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿಯ ಊಟಗಳನ್ನು ಉಚಿತವಾಗಿ ವಿತರಿಸುವಂತೆ ಪೌರಾಡಳಿತ ನಿರ್ದೇಶಕರು ಹೊರಡಿಸಿದ ಆದೇಶದಲ್ಲಿ ಸೂಚಿಸಿದ್ದಾರೆ.

ಲಾಕ್‌ಡೌನ್ ದಿನಗಳಲ್ಲಿ ನಿರಾಶ್ರಿತರಿಗೆ ಆಹಾರ ಕಿಟ್ ಮತ್ತು ಆಹಾರ ಪದಾರ್ಥಗಳ ಕಿಟ್‌ಗಳನ್ನು ನೀಡುವ ಕುರಿತಂತೆ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅಧ್ಯಕ್ಷತೆಯಲ್ಲಿ ಸೋಮವಾರ ವಿಡಿಯೊ ಸಂವಾದ ನಡೆದಿತ್ತು.

ಕೂಲಿ ಕಾರ್ಮಿಕರು, ವಲಸಿಗರು ಮತ್ತು ಇತರ ದುರ್ಬಲ ವರ್ಗದವರಿಗೆ ಅನುಕೂಲ ಮಾಡಿಕೊಡಲು ಸ್ಥಳೀಯ ಸಂಸ್ಥೆಗಳಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಉಚಿತವಾಗಿ ಆಹಾರ ವಿತರಿಸಲು ಈ ವಿಡಿಯೊ ಸಂವಾದದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಅದರಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಆಯುಕ್ತರು ಸೂಚನೆ ನೀಡಿದ್ದಾರೆ.

1 ಲಕ್ಷಕ್ಕೂ ಹೆಚ್ಚು ಮಂದಿಗೆ ಆಹಾರ ಸೌಲಭ್ಯ

ಒಂದನೇ ಪುಟದಿಂದ

ಒಬ್ಬ ವ್ಯಕ್ತಿಗೆ ಒಮ್ಮೆಗೆ ಗರಿಷ್ಠ ಮೂರು ಆಹಾರದ ಪೊಟ್ಟಣಗಳನ್ನು ನೀಡಲಾಗುವುದು. ಪಡಿತರ ಚೀಟಿ ತಂದಲ್ಲಿ, ಅದರಲ್ಲಿರುವ ಕುಟುಂಬದ ಸದಸ್ಯರ ಸಂಖ್ಯೆಯಷ್ಟು ಆಹಾರದ ಪೊಟ್ಟಣಗಳನ್ನು ಪಡೆಯಬಹುದು. ಫಲಾನುಭವಿಗಳು ಕೋವಿಡ್ ಹರಡುವಿಕೆ ನಿಯಂತ್ರಣ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು. ಪೊಟ್ಟಣಗಳನ್ನು ಪಡೆಯುವಾಗ ಪರಸ್ಪರ 2 ಮೀಟರ್ ಅಂತರ ಕಾಯ್ದುಕೊಂಡು ಸರತಿ ಸಾಲಿನಲ್ಲಿ ನಿಂತುಕೊಳ್ಳಬೇಕು ಎಂದು ಬಿಬಿಎಂಪಿ ಪ್ರಕಟಣೆಯಲ್ಲಿ ತಿಳಿಸಿದೆ.

‘ಲಾಕ್‌ಡೌನ್ ಜಾರಿಯಾದ ಬಳಿಕ ನಗರದ ಇಂದಿರಾ ಕ್ಯಾಂಟೀನ್‌ಗಳಲ್ಲಿ ನಿತ್ಯ ಮಾರಾಟವಾಗುವ ಊಟದ ಪ್ರಮಾಣ 65 ಸಾವಿರಕ್ಕೆ ಇಳಿದಿದೆ. ಉಚಿತವಾಗಿ ಊಟ ವಿತರಿಸುವುದರಿಂದ ಬೇಡಿಕೆ ಹೆಚ್ಚುವ ನಿರೀಕ್ಷೆ ಇದೆ. ಹಾಗಾಗಿ ಊಟದ ಪ್ರಮಾಣವನ್ನು 1 ಲಕ್ಷಕ್ಕೆ ಹೆಚ್ಚಿಸಲಿದ್ದೇವೆ. ಬುಧವಾರ ಎಷ್ಟು ಬೇಡಿಕೆ ಬರುತ್ತದೆ ಎಂಬುದನ್ನು ನೋಡಿಕೊಂಡು ಅದಕ್ಕನುಗುಣವಾಗಿ ಊಟದ ಪ್ರಮಾಣ ಹೆಚ್ಚಿಸುತ್ತೇವೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಊಟಗಳು ಉಳಿದರೆ ಅವುಗಳನ್ನು ಕ್ಯಾಂಟೀನ್ ಸಮೀಪದಲ್ಲಿರುವ ಬಡವರ ಮನೆಗಳಿಗೆ ಹಾಗೂ ಬೀದಿ ಬದಿಯ ನಿರ್ಗತಿಕರಿಗೆ ಉಚಿತವಾಗಿ ವಿತರಿಸಲಿದ್ದೇವೆ’ ಎಂದರು.

ಬಾಕಿ ಬಿಲ್ ಪಾವತಿಗೆ ₹ 25 ಕೋಟಿ: ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಪೂರೈಸುವ ಗುತ್ತಿಗೆದಾರರಿಗೆ ಬಾಕಿ ಉಳಿಸಿಕೊಂಡಿರುವ ಬಿಲ್ ಪಾವತಿಗೆ ₹ 25 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿರುವ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಳಸುವಂತೆ ಸರ್ಕಾರ ಬಿಬಿಎಂಪಿಗೆ ಸೂಚಿಸಿದೆ.

ಈ ಕುರಿತು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಪತ್ರ ಮಂಗಳವಾರ ಬರೆದಿರುವ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ‘ಸದ್ಯಕ್ಕೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ ಬಿಡುಗಡೆ ಮಾಡಿರುವ ₹ 300 ಕೋಟಿಯಲ್ಲಿ ₹ 25 ಕೋಟಿಯನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಬೇಕು. ನಂತರ ಇದರ ಮರುಪಾವತಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕು’ ಎಂದು ಸೂಚಿಸಿದ್ದಾರೆ. ಎಷ್ಟು ಜನರಿಗೆ ಊಟ ವಿತರಿಸಲಾಗಿದೆ ಎಂಬ ಬಗ್ಗೆ ವಿವರಗಳನ್ನು ನಿರ್ವಹಿಸಬೇಕು ಎಂದೂ ಸೂಚಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ಕ್ವಾರಂಟೈನ್ ಕೇಂದ್ರ: ಆಗ್ರಹ

ಬೆಂಗಳೂರು:‘ಗ್ರಾಮೀಣ ಭಾಗಗಳಲ್ಲಿ ಕೊರೊನಾ ಸೋಂಕು ಹರಡದಂತೆ ತಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಕ್ವಾರಂಟೈನ್ ಕೇಂದ್ರಗಳನ್ನು ತೆರೆಯಬೇಕು’ ಎಂದು ಸಾವಯವ ಕೃಷಿ ಸಂಘಟನೆ, ಇಕ್ರಾ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಒತ್ತಾಯಿಸಿವೆ.

ಈ ಸಂಬಂಧ ರೈತ ಸಂಘಟನೆಗಳು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿವೆ.

‘ಗ್ರಾಮಗಳಲ್ಲಿ ಹೋಂ ಕ್ವಾರಂಟೈನ್ ಎಂಬುದೇ ತಪ್ಪು ಕಲ್ಪನೆ. ಪ್ರತ್ಯೇಕ ಶೌಚಾಲಯ ಹೊಂದಿರುವ ಕೋಣೆಗಳಿದ್ದಾಗ ಮಾತ್ರ ಕ್ವಾರಂಟೈನ್ ಸಾಧ್ಯ. ಗ್ರಾಮೀಣ ಪರಿಸರದಲ್ಲಿ ಇದೆಲ್ಲ ಕಷ್ಟಕರವೂ ಆಗಿದೆ. ಹಾಗಾಗಿ, ಸೋಂಕಿತರನ್ನು ಕ್ವಾರಂಟೈನ್ ಮಾಡಲು ಪ್ರತ್ಯೇಕ ಕೇಂದ್ರಗಳನ್ನು ತೆರೆಯಬೇಕು. ಇದಕ್ಕಾಗಿ ಸ್ಥಳೀಯ ಸಂಸ್ಥೆಗಳು ಕೈಜೋಡಿಸಿ, ಹಾಸ್ಟೆಲ್, ವಸತಿ ಶಾಲೆಗಳನ್ನು ಬಳಸಿಕೊಳ್ಳಬಹುದು’ ಎಂದು ಸಾವಯವ ಕೃಷಿ ಸಂಘಟನೆಯ ಕಾರ್ಯಕರ್ತೆ ವಿ.ಗಾಯತ್ರಿ ತಿಳಿಸಿದರು. .

‘ಕೋವಿಡ್ ಕರ್ತವ್ಯ ನಿರ್ವಹಿಸಿದರೂ ಯೋಧರಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ವಿರುದ್ಧದ ಹೋರಾಟದಲ್ಲಿ ಮುಂದೆ ನಿಂತು ಕೆಲಸ ಮಾಡುತ್ತಿರುವ ಬಿಬಿಎಂಪಿ ಶಾಲಾ–ಕಾಲೇಜಿನ ಹೊರಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರು ಕೋವಿಡ್ ಯೋಧರ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲ. ಹೀಗಾಗಿ, ಕೋವಿಡ್ ಕರ್ತವ್ಯದಿಂದ ಮುಕ್ತಿ ಕೋರಿ ಪಾಲಿಕೆ ಆಯುಕ್ತರಿಗೆ ಉಪನ್ಯಾಸಕರು ಪತ್ರ ಬರೆದಿದ್ದಾರೆ.

ಬಿಬಿಎಂಪಿಯ 91 ನರ್ಸರಿ, 16 ಪ್ರಾಥಮಿಕ ಶಾಲೆ, 33 ಪ್ರೌಢಶಾಲೆ, 15 ಪದವಿ ಪೂರ್ವ ಕಾಲೇಜು, 6 ಪ್ರಥಮ ದರ್ಜೆ ಕಾಲೇಜುಗಳಲ್ಲಿ 600ಕ್ಕೂ ಹೆಚ್ಚು ಹೊರ ಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರು ಇದ್ದಾರೆ.

ಕೆಲಸ ನಿರ್ವಹಣೆ ಸಂದರ್ಭದಲ್ಲಿ 40 ಜನರಿಗೆ ಸೋಂಕು ತಗುಲಿದೆ. ಕೋವಿಡ್ ಯೋಧರೆಂದು ನಿರ್ಧರಿಸದ ಕಾರಣ ಯಾವುದೇ ಸವಲತ್ತು ದೊರೆಯುತ್ತಿಲ್ಲ. ಹಾಸಿಗೆ ಮತ್ತು ಆಮ್ಲಜನಕ ಸಿಗದೆ ಪರದಾಡಬೇಕಾದ ಸ್ಥಿತಿ ಇದೆ ಎಂದು ಉಪನ್ಯಾಸಕರು ದೂರಿದ್ದಾರೆ.

‘ನಮ್ಮಿಂದ ಮನೆಯವರಿಗೂ ಕೋವಿಡ್ ಹರಡುತ್ತಿದೆ. ನಾಲ್ಕು ಶಿಕ್ಷಕರು ಕುಟುಂಬ ಸದಸ್ಯರನ್ನು ಕಳೆದುಕೊಂಡಿದ್ದಾರೆ. ಪರಿಸ್ಥಿತಿ ಹೀಗಿದ್ದರೂ, ಕೋವಿಡ್ ಯೋಧರ ಪಟ್ಟಿಯಲ್ಲಿ ಇಲ್ಲದ ಕಾರಣ ಕೇಂದ್ರ ಸರ್ಕಾರದ ಯಾವುದೇ ಪರಿಹಾರ ದೊರಕುತ್ತಿಲ್ಲ’ ಎಂದು ಹೇಳಿದ್ದಾರೆ.

‘ಕೋವಿಡ್ ಯೋಧರ ಪಟ್ಟಿಗೆ ಸೇರಿಸಿ, ಇಲ್ಲವೇ ಕೋವಿಡ್ ಕರ್ತವ್ಯದಿಂದ ಮುಕ್ತಿಗೊಳಿಸಿ’ ಎಂದು ಅವರು ಪತ್ರದಲ್ಲಿ ಆಯುಕ್ತರಿಗೆ ಮನವಿ ಮಾಡಿದ್ದಾರೆ.

ಈ ನಡುವೆ, ಮಾರ್ಚ್‌ನಿಂದ ಈಚೆಗೆ ಬಾಕಿ ವೇತನವನ್ನೂ ಬಿಡುಗಡೆ ಮಾಡಿಲ್ಲ. 2020ರ ಜೂನ್ ಮತ್ತು ಜುಲೈನಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರೂ ವೇತನ ಬಿಡುಗಡೆ ಮಾಡಿಲ್ಲ. ಕೂಡಲೇ ವೇತನ ಕೊಡಿಸಬೇಕು ಎಂದು ಕೋರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಉಚಿತ ಆಪ್ತ ಸಮಾಲೋಚನೆ

ಬೆಂಗಳೂರು: ಕೋವಿಡ್ ಮತ್ತು ಲಾಕ್‌ಡೌನ್‌ನಿಂದಾಗಿ ವಿವಿಧ ವಯೋಮಾನದವರು ಎದುರಿಸುತ್ತಿರುವ ಮಾನಸಿಕ ಒತ್ತಡ ಮತ್ತು ಖಿನ್ನತೆಯನ್ನು ನಿವಾರಿಸಲು ಆಪ್ತ ಸಲಹಾ ಕೇಂದ್ರ ಮುಂದೆ ಬಂದಿದೆ.

ಈ ಕೇಂದ್ರದಲ್ಲಿ ನಿಮ್ಹಾನ್ಸ್ ಮತ್ತು ಸಮಾಧಾನ ಸಂಸ್ಥೆಯಿಂದ ಪರಿಣತಿ ಪಡೆದ 300ಕ್ಕೂ ಅಧಿಕ ಆಪ್ತ ಸಲಹೆಗಾರರು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಲಿದ್ದಾರೆ. ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರು ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯೊಳಗೆ ದೂರವಾಣಿ ಮೂಲಕ ಸಂಪರ್ಕಿಸಿ, ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆ: 6362055380,

ವೆಬ್‌ಸೈಟ್: www. ask4support.org

ಅನಾಥ ಮಕ್ಕಳಿಗೆ ಆಶ್ರಯ

ಬೆಂಗಳೂರು: ಕೋವಿಡ್‌ನಿಂದಾಗಿ ಅನೇಕ ಮಕ್ಕಳು ತಮ್ಮ ಪಾಲಕರನ್ನು ಕಳೆದುಕೊಂಡು ಅನಾಥರಾಗುತ್ತಿದ್ದಾರೆ. ಹೀಗಾಗಿ, ಈ ಮಕ್ಕಳಿಗೆ ಆಶ್ರಯ ನೀಡಲು ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ಮುಂದಾಗಿದೆ.

‘50 ಮಕ್ಕಳನ್ನು ಪೋಷಿಸುವ ಜೊತೆಗೆ ಅವರಿಗೆ ಶಿಕ್ಷಣ ನೀಡಲಾಗುವುದು. ಅಗತ್ಯವುಳ್ಳವರು ನಮ್ಮನ್ನು ಸಂಪರ್ಕಿಸಬಹುದು’ ಎಂದು ಸಿದ್ಧಾರೂಢ ಮಿಷನ್‌ನ ಅಧ್ಯಕ್ಷ ಆರೂಢಭಾರತೀ ಸ್ವಾಮೀಜಿ ಹೇಳಿದ್ದಾರೆ.

ಸಂಪರ್ಕಕ್ಕಾಗಿ: 6364117435, 9731004160.

‘ವೈದ್ಯಕೀಯ ಆಮ್ಲಜನಕದ ಬದಲು ವೆಂಟಿಲೇಟರ್’

ಬೆಂಗಳೂರು: ‘ಆಸ್ಪತ್ರೆಗಳಲ್ಲಿ ಹೆಚ್ಚುತ್ತಿರುವ ವೈದ್ಯಕೀಯ ಆಮ್ಲಜನಕದ ಬೇಡಿಕೆಯನ್ನು ತಗ್ಗಿಸಲು ಎಚ್‌ಎಫ್‌ಎನ್‌ಒ ವ್ಯವಸ್ಥೆಯ (ಮೂಗಿನ ಮೂಲಕ ಆಮ್ಲಜನಕ ಪೂರೈಕೆ) ಬದಲು ಇದಕ್ಕೆ ಪರ್ಯಾಯವಾಗಿ ವೆಂಟಿಲೇಟರ್ ಅಳವಡಿಸಲಾಗುವುದು’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕೋವಿಡ್ ನಿರ್ವಹಣೆಗೆ ಸಂಬಂಧಿಸಿದಂತೆ ಎಲ್ಲ ಜಿಲ್ಲೆಗಳ ಆರೋಗ್ಯಾಧಿಕಾರಿಗಳೊಂದಿಗೆ ವಿಡಿಯೊ ಸಂವಾದ ನಡೆಸಿದ ಅವರು, ‘ಮಧ್ಯಮ ಪ್ರಮಾಣದ ಲಕ್ಷಣ ಇರುವ ಕೊರೊನಾ ಸೋಂಕಿತರಿಗೆ ನಿಮಿಷಕ್ಕೆ 20 ಲೀಟರ್‌ಗಳಿಂದ 60 ಲೀಟರ್‌ಗಳವರೆಗೆ ವೈದ್ಯಕೀಯ ಆಮ್ಲಜನಕ ಬೇಕಾಗುತ್ತದೆ. ಆದರೆ, ಇದರ ಕೊರತೆ ಇರುವುದರಿಂದ ಬೇರೆ ಕ್ರಮ ವಹಿಸಬೇಕಿದೆ. ಇದಕ್ಕಾಗಿ ಎಚ್‌ಎಫ್‌ಎನ್‌ಒಗಿಂತ ಹೆಚ್ಚು ಪರಿಣಾಮಕಾರಿಯಾಗಿರುವ ಎನ್‌ಐವಿ (ವೆಂಟಿಲೇಟರ್) ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರಿಂದಾಗಿ ಆಮ್ಲಜನಕದ ಬೇಡಿಕೆ ಶೇ 80ರಷ್ಟು ಕಡಿಮೆಯಾಗುತ್ತದೆ’ ಎಂದರು.

ಖಾಸಗಿ ಆಸ್ಪತ್ರೆ ಸಿಬ್ಬಂದಿ ವಿಚಾರಣೆ

ಬೆಂಗಳೂರು: ಕೊರೊನಾ ಸೋಂಕಿತರ ಹೆಸರಿನಲ್ಲಿ ಹಾಸಿಗೆಗಳನ್ನು ಬ್ಲಾಕ್ ಮಾಡುತ್ತಿದ್ದ ಆರೋಪದಡಿ ನಗರದ ಕೆಲ ಖಾಸಗಿ ಆಸ್ಪತ್ರೆಗಳ ಸಿಬ್ಬಂದಿಯನ್ನು ಸಿಸಿಬಿ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಪ್ರಕರಣ ಸಂಬಂಧ ‘ಆರೋಗ್ಯ ಮಿತ್ರ’ ಅಧಿಕಾರಿ ಶಶಿಧರ್, ರಾಜರಾಜೇಶ್ವರಿ ನಗರದ ಸ್ಪರ್ಶ ಆಸ್ಪತ್ರೆ ನೌಕರ ವೆಂಕೋಬ ರಾವ್ ಹಾಗೂ ಬಸವೇಶ್ವರನಗರದ ಪುಣ್ಯ ಆಸ್ಪತ್ರೆ ನೌಕರ ಸುಧೀರ್ ಎಂಬುವರನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಅವರು ನೀಡಿರುವ ಮಾಹಿತಿ ಆಧರಿಸಿ ಖಾಸಗಿ ಆಸ್ಪತ್ರೆಗಳ ಕೆಲ ಸಿಬ್ಬಂದಿಗೆ ನೋಟಿಸ್ ನೀಡಿದ್ದ ಸಿಸಿಬಿ, ಮಂಗಳವಾರ ಕೆಲವರನ್ನು ವಿಚಾರಣೆಗೆ ಒಳಪಡಿಸಿತು. ಪ್ರತಿಯೊಬ್ಬರಿಂದ ಲಿಖಿತ ಹೇಳಿಕೆ ಪಡೆದು ಕಳುಹಿಸಿತು. ಹೇಳಿಕೆ ಪರಿಶೀಲನೆ ನಂತರವೂ ಅಗತ್ಯವಿದ್ದರೆ ವಿಚಾರಣೆ ಬರುವಂತೆ ಅಧಿಕಾರಿಗಳು ಸೂಚಿಸಿದ್ದಾರೆ.

ಪೊಲೀಸರ ದಬ್ಬಾಳಿಕೆ: ಆರೋಪ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ನೆಪದಲ್ಲಿ ನಾಗರಿಕರ ವಾಹನ ಬಳಕೆಗೆ ಪೊಲೀಸರು ನಿರ್ಬಂಧಿಸುತ್ತಿದ್ದು, ಇದು ನಾಗರಿಕರ ಮೇಲೆ ಪೊಲೀಸರು ನಡೆಸುತ್ತಿರುವ ದಬ್ಬಾಳಿಕೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಲಕ್ಷ್ಮೀನಾರಾಯಣ ನಾಗವಾರ ಆರೋಪಿಸಿದ್ದಾರೆ.

ವಾಹನ ಬಳಸದೆ ನಡೆದುಕೊಂಡೇ ಅಗತ್ಯ ವಸ್ತುಗಳ ಖರೀದಿಗೆ ಹೋಗುವುದು ಹೇಗೆ ಎಂದು ಅವರು ಪ್ರಶ್ನಿಸಿದ್ದಾರೆ. ಕೃಷಿ ಚಟುವಟಿಕೆ ಅವಕಾಶ ಇದ್ದರೂ, ಜಮೀನಿಗೆ ತೆರಳಲು ರೈತರು ಪರದಾಡಬೇಕಾಗಿದೆ. ಕೃಷಿ ಇಲಾಖೆಯಿಂದ ಪಾಸ್ ಪಡೆದುಕೊಂಡಿದ್ದರೂ ವಾಹನದಲ್ಲಿ ಹೋಗಲು ಅವಕಾಶ ನೀಡುತ್ತಿಲ್ಲ ಎಂದು ದೂರಿದ್ದಾರೆ.

‘ನಾನೂ ಕೃಷಿಕನಾಗಿದ್ದು, 60 ಕಿಲೋ ಮೀಟರ್ ದೂರದಲ್ಲಿರುವ ಜಮೀನಿಗೆ ತೆರಳಲು ಅವಕಾಶ ನೀಡುತ್ತಿಲ್ಲ. ಪಾಸ್ ಇದ್ದರೂ ವಾಹನ ಜಪ್ತಿ ಮಾಡುವ ಬೆದರಿಕೆಯನ್ನು ಪೊಲೀಸರು ಹಾಕುತ್ತಿದ್ದಾರೆ. ವಾಹನ ಬಳಕೆಗೆ ಅವಕಾಶ ನೀಡಿ ಸರ್ಕಾರ ಕೂಡಲೇ ಸುತ್ತೋಲೆ ಹೊರಡಿಸಬೇಕು’ ಎಂದು ಆಗ್ರಹಿಸಿದ್ದಾರೆ.

ನಗರದ ಆಸ್ಪತ್ರೆಗಳಿಗೆ ಭೇಟಿ ನೀಡುವ ಕೋವಿಡೇತರ ರೋಗಿಗಳ ಸಂಖ್ಯೆ ಅರ್ಧದಷ್ಟು ಇಳಿಕೆ

ಅನ್ಯ ರೋಗಿಗಳ ಚಿಕಿತ್ಸೆಗೆ ಅಡ್ಡಿಯಾದ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ, ಲಾಕ್‌ಡೌನ್ ಜಾರಿ ಸೇರಿದಂತೆ ವಿವಿಧ ಕಾರಣಗಳಿಂದ ಅನ್ಯ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ಚಿಕಿತ್ಸೆಯಲ್ಲಿ ವ್ಯತ್ಯಯವಾಗಲಾರಂಭಿಸಿದೆ. ಪರಿಣಾಮ ಆಸ್ಪತ್ರೆಗೆ ಹೊರರೋಗಿಗಳಾಗಿ ಭೇಟಿ ನೀಡುವ ಕೋವಿಡೇತರ ರೋಗಿಗಳ ಸಂಖ್ಯೆ ಅರ್ಧದಷ್ಟು ಕಡಿಮೆಯಾಗಿದೆ.

ವಿಕ್ಟೋರಿಯಾ, ಬೌರಿಂಗ್, ಕೆ.ಸಿ. ಜನರಲ್, ಜಯನಗರ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ಕೆಲವು ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ. ಇನ್ನೊಂದೆಡೆ, ಕೋವಿಡೇತರ ಆಸ್ಪತ್ರೆಗಳಲ್ಲೂ ವೈದ್ಯರು, ಶುಶ್ರೂಷಕರು ಹಾಗೂ ಆರೋಗ್ಯ ಸಿಬ್ಬಂದಿ ಸೋಂಕಿತರಾಗುತ್ತಿದ್ದಾರೆ. ಇದರಿಂದಾಗಿ ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯವಾಗುತ್ತಿದೆ. ಈ ನಡುವೆ, ಸರ್ಕಾರವು ಕೋವಿಡ್ ಕರ್ಫ್ಯೂ ವಿಧಿಸಿದ ಪರಿಣಾಮ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇಲ್ಲದಿರುವುದು ಕೂಡ ಸಮಸ್ಯೆಯಾಗಿದೆ. ಹೃದಯ, ಮೂತ್ರಪಿಂಡ, ಶ್ವಾಸಕೋಶ, ಅಧಿಕ ರಕ್ತದೊತ್ತಡ, ಕ್ಯಾನ್ಸರ್ ಸೇರಿದಂತೆ ವಿವಿಧ ಕಾಯಿಲೆಗಳು ಹಾಗೂ ಮನೋರೋಗದಿಂದ ಬಳಲುತ್ತಿರುವವರು ಮಾತ್ರ ಸೇವಿಸಿ, ಚಿಕಿತ್ಸೆ ಮುಂದೂಡುತ್ತಿದ್ದಾರೆ.

ಜಯದೇವ ಹೃದ್ರೋಗ ಸಂಸ್ಥೆ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ನೆಫ್ರೊ ಯುರಾಲಜಿ ಸಂಸ್ಥೆ, ನಿಮ್ಹಾನ್ಸ್ ಒಳಗೊಂಡಂತೆ ನಗರದ ಪ್ರಮುಖ ವೈದ್ಯಕೀಯ ಸಂಸ್ಥೆಗಳು ಆಸ್ಪತ್ರೆಗೆ ಬಂದ ರೋಗಿಗಳಿಗೆ ಕೋವಿಡ್ ಪರೀಕ್ಷೆ ನಡೆಸಿ, ಚಿಕಿತ್ಸೆ ಒದಗಿಸುತ್ತಿವೆ.



ಕೋವಿಡ್ ಲಸಿಕೆ ಪಡೆಯಲು ಜಯನಗರದ ಸಾರ್ವಜನಿಕ ಆಸ್ಪತ್ರೆಯ ಎದುರು ಮಂಗಳವಾರ ಸಾಲಿನಲ್ಲಿ ನಿಂತಿದ್ದ ಜನ —ಪ್ರಜಾವಾಣಿ ಚಿತ್ರ

> **ಡಯಾಲಿಸಿಸ್ ಸೇರಿದಂತೆ ವಿವಿಧ ತುರ್ತು ಚಿಕಿತ್ಸೆಗಳನ್ನು ಮುಂದೂಡುವ ಹಾಗಿಲ್ಲ. ಕೋವಿಡ್ ಹಾಗೂ ಕರ್ಫ್ಯೂ ಕಾರಣ ಹೊರರೋಗಿಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿದೆ**
>
> **ಡಾ.ಆರ್. ಕೇಶವಮೂರ್ತಿ**
> ನೆಫ್ರೊ ಯುರಾಲಜಿ ಸಂಸ್ಥೆ ನಿರ್ದೇಶಕ

ಸೋಂಕು ದೃಢಪಟ್ಟಲ್ಲಿ ವ್ಯಕ್ತಿಯನ್ನು ಕೋವಿಡ್ ಆಸ್ಪತ್ರೆಗೆ ಸ್ಥಳಾಂತರಿಸಲಾಗುತ್ತಿದೆ.

ಕ್ಲಿನಿಕ್‌ಗಳು ಹಿಂದೇಟು: ನಗರದಲ್ಲಿ ಕೊರೊನಾ ಸೋಂಕು ವ್ಯಾಪಿಸಿಕೊಂಡ ಬಳಿಕ ಬಹುತೇಕ ಕ್ಲಿನಿಕ್‌ಗಳು ಬಾಗಿಲು ಮುಚ್ಚಿವೆ. ಇನ್ನೂ ಕೆಲವು ಬಾಗಿಲು ತೆರೆಯುತ್ತಿಲ್ಲ. ಹೀಗಾಗಿ, ಗಂಭೀರವಲ್ಲದ ಸಮಸ್ಯೆಯಿಂದ ಬಳಲುತ್ತಿರುವವರು ಮನೆ ಆರೈಕೆಗೆ ಮೊರೆ ಹೋಗಲಾರಂಭಿಸಿದ್ದಾರೆ. ಗಂಭೀರವಾಗಿ ಅಸ್ವಸ್ಥಗೊಂಡಿರುವ ರೋಗಿಗಳನ್ನು ದಾಖಲಿಸಿಕೊಳ್ಳಲು ಸಣ್ಣ ಹಾಗೂ ಮಧ್ಯಮ ಗಾತ್ರದ ಆಸ್ಪತ್ರೆಗಳು ಹಿಂದೇಟು ಹಾಕುತ್ತಿದ್ದು, ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ಬರುವಂತೆ ಸೂಚಿಸುತ್ತಿವೆ. ಇದರಿಂದ ಕೋವಿಡೇತರ ರೋಗಿಗಳು ಚಿಕಿತ್ಸೆ ಸಿಗದೆ ಪಡಿಪಾಟಲು ಪಡುತ್ತಿದ್ದಾರೆ.

‘ರೋಗದ ತೀವ್ರತೆ ಆಧರಿಸಿ ಆದ್ಯತೆ ನೀಡಬೇಕಾಗುತ್ತದೆ. ಈಗ ಕೋವಿಡ್ ಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ. ಕೋವಿಡೇತರ ರೋಗಿಗಳಿಗೆ ಸಮಸ್ಯೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಆಸ್ಪತ್ರೆಗಳು ಚಿಕಿತ್ಸೆ ನೀಡದಿದ್ದಲ್ಲಿ ಕೆಪಿಎಂಇ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಕ್ಯಾನ್ಸರ್ ಪೀಡಿತರಿಗೆ ಚಿಕಿತ್ಸೆಯನ್ನು ಮುಂದೂಡಿದಲ್ಲಿ ಸಮಸ್ಯೆಯಾಗುತ್ತದೆ. ಹಾಗಾಗಿ, ಎಲ್ಲ ರೀತಿಯ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ, ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಹೊರ ರೋಗಿಗಳ ಸಂಖ್ಯೆ ಕಡಿಮೆಯಾಗಿದೆ. ಎಲ್ಲರಿಗೂ ಕೋವಿಡ್ ಪರೀಕ್ಷೆ ನಡೆಸಿ, ದಾಖಲಿಸಿಕೊಳ್ಳುತ್ತೇವೆ’ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ವಿವರಿಸಿದರು.

ಶಸ್ತ್ರಚಿಕಿತ್ಸೆ, ಅಂಗಾಂಗ ಕಸಿ ಮುಂದೂಡಿಕೆ

ಖಾಸಗಿ ಆಸ್ಪತ್ರೆಗಳು ಕೋವಿಡ್ ಚಿಕಿತ್ಸೆ ಪ್ರಾರಂಭಿಸಿದ ಬಳಿಕ ಕೋವಿಡೇತರ ಕಾಯಿಲೆಗಳಿಗೆ ಆಸ್ಪತ್ರೆಗೆ ಹೋಗುವ ಹೊರರೋಗಿಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿದೆ. ಆಸ್ಪತ್ರೆಗಳ ವೈದ್ಯರು, ಶುಶ್ರೂಷಕರನ್ನು ಕೋವಿಡ್ ಚಿಕಿತ್ಸೆಗೆ ನಿಯೋಜನೆ ಮಾಡುತ್ತಿರುವುದರಿಂದ ತುರ್ತು ಅಗತ್ಯವಿಲ್ಲದ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಲಾಗುತ್ತಿದೆ. ನೇತ್ರ ಹಾಗೂ ದಂತ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಕೂಡ ಚಿಕಿತ್ಸೆಯನ್ನು ಮುಂದಕ್ಕೆ ಹಾಕುವಂತೆ ಸೂಚಿಸಲಾಗುತ್ತಿದೆ.

‘ಹೊರ ರೋಗಿಗಳ ಸಂಖ್ಯೆ ಶೇ 50ರಷ್ಟು ಕಡಿಮೆಯಾಗಿದೆ. ಡಯಾಲಿಸಿಸ್ ಈ ಮೊದಲಿನಂತೆ ನಡೆಯುತ್ತಿದೆ. ಕೋವಿಡ್ ರೋಗಿಗಳಿಗೆ ಡಯಾಲಿಸಿಸ್ ನಡೆಸಲು ವಿಕ್ಟೋರಿಯಾದಲ್ಲಿ 12 ಯಂತ್ರಗಳನ್ನು ಅಳವಡಿಸಲಾಗಿದೆ. ಸಂಸ್ಥೆಯಲ್ಲಿ ಪ್ರತಿನಿತ್ಯ ಸರಾಸರಿ 65 ಮಂದಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದಾರೆ. ಲಾಕ್‌ಡೌನ್ ಇರುವ ಕಾರಣ ಬರುವ ರೋಗಿಗಳ ಸಂಖ್ಯೆ ಇಳಿಕೆಯಾಗಿದೆ. ಕಸಿ ಮಾಡಿಸಿಕೊಂಡವರಿಗೆ ಮಾತ್ರೆಗಳನ್ನು ಕೊರಿಯರ್ ಮಾಡಿದ್ದೇವೆ’ ಎಂದು ನೆಫ್ರೊ ಯುರಾಲಜಿ ಸಂಸ್ಥೆಯ ನಿರ್ದೇಶಕ ಡಾ. ಆರ್. ಕೇಶವಮೂರ್ತಿ ತಿಳಿಸಿದರು.

‘ಮಾನಸಿಕ ಸಮಸ್ಯೆ ಹೆಚ್ಚಳ ಸಾಧ್ಯತೆ’

‘ಕರ್ಫ್ಯೂ ಇರುವ ಕಾರಣ ಮನೋರೋಗಗಳಿಗೆ ಚಿಕಿತ್ಸೆ ಪಡೆಯಲು ಬರುವ ಹೊರರೋಗಿಗಳ ಸಂಖ್ಯೆ ಮೂರನೇ ಒಂದರಷ್ಟು ಇಳಿಕೆಯಾಗಿದೆ. ತುರ್ತು ಚಿಕಿತ್ಸೆ ಪಡೆಯಲು ಬರುವವರ ಸಂಖ್ಯೆ ಕೂಡ ಸ್ವಲ್ಪ ಕಡಿಮೆಯಾಗಿದೆ. ಚಿಕಿತ್ಸೆಗೆ ಬಂದವರಿಗೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಹೆಚ್ಚಿನವರಿಗೆ ಕೊರೊನಾ ಸೋಂಕು ದೃಢಪಡುತ್ತಿದೆ’ ಎಂದು ನಿಮ್ಹಾನ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ) ಡಾ. ಶಶಿಧರ್ ಎಚ್.ಎನ್. ತಿಳಿಸಿದರು.

‘ತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರಿಗೆ ಮಾತ್ರೆಗಳನ್ನು ನೀಡಿ ಕಳುಹಿಸುತ್ತೇವೆ. ಚಿಕಿತ್ಸೆಯಲ್ಲಿ ಯಾವುದೇ ವ್ಯತ್ಯಾಯವಾಗಲಿಲ್ಲ. ಲಾಕ್‌ಡೌನ್ ಜಾರಿ ಮಾಡಿದ್ದರಿಂದ ಬಹುತೇಕರಿಗೆ ಮನೆಯಲ್ಲಿ ಕೂಡಿ ಹಾಕಿದ ಅನುಭವವಾಗಲಿದೆ. ಇದರಿಂದ ಮುಂದಿನ ದಿನಗಳಲ್ಲಿ ಮಾನಸಿಕ ಸಮಸ್ಯೆ ಎದುರಿಸುವವರ ಸಂಖ್ಯೆ ಜಾಸ್ತಿಯಾಗುವ ಸಾಧ್ಯತೆಯಿದೆ’ ಎಂದರು.

ಲಾಕ್‌ಡೌನ್: ಲಾಠಿ ಕೆಳಗಿಳಿಸಿ ಕರ್ತವ್ಯ ನಿರ್ವಹಿಸಿದ ಪೊಲೀಸರು

ಅನಗತ್ಯ ಸಂಚರಿಸುವರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್‌ನ ಎರಡನೇ ದಿನವಾದ ಮಂಗಳವಾರ ಪೊಲೀಸರು ಲಾಠಿ ಕೆಳಗಿಳಿಸಿ ಕರ್ತವ್ಯ ನಿರ್ವಹಿಸಿದರು. ಅನಗತ್ಯವಾಗಿ ಓಡಾಡಿದವರ ವಿರುದ್ಧ ಪ್ರಕರಣಗಳೂ ದಾಖಲಾದವು.

ಕೆ.ಆರ್. ಮಾರುಕಟ್ಟೆ, ಎಸ್.ಪಿ. ರಸ್ತೆ, ಯಶವಂತಪುರ, ಮಲ್ಲೇಶ್ವರ, ವೈಟ್‌ಫೀಲ್ಡ್, ಬೆಳ್ಳಂದೂರು, ಚಾಮರಾಜಪೇಟೆ, ಶಿವಾಜಿನಗರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಬೆಳಿಗ್ಗೆ 6 ಗಂಟೆಯಿಂದ 10 ಗಂಟೆಯವರೆಗೆ ವ್ಯಾಪಾರ ಜೋರಾಗಿತ್ತು. 10 ಗಂಟೆ ನಂತರ ಬಹುತೇಕ ಕಡೆ ಅಂಗಡಿಗಳನ್ನು ಬಂದ್ ಮಾಡಲಾಯಿತು.

ಶಿವಾಜಿನಗರ ಹಾಗೂ ಚಾಮರಾಜಪೇಟೆಗಳಲ್ಲಿ ಹಲವು ಅಂಗಡಿಗಳು ಬಾಗಿಲು ಮುಚ್ಚಿರಲಿಲ್ಲ. ಸ್ಥಳಕ್ಕೆ ಹೋಗಿದ್ದ ಕೆಲವೇ ಪೊಲೀಸರಿಗೆ ಅಂಗಡಿಗಳನ್ನು ಬಂದ್ ಮಾಡಿಸಲು ಆಗಲಿಲ್ಲ. ಹೀಗಾಗಿ, ಮಧ್ಯಾಹ್ನದವರೆಗೂ ಬಟ್ಟೆ, ಮಾಂಸ, ಹಣ್ಣು, ತರಕಾರಿ ಅಂಗಡಿಗಳು ತೆರೆದಿದ್ದವು.

ಕೆ.ಆರ್. ಮಾರುಕಟ್ಟೆ ಹಾಗೂ ಯಶವಂತಪುರದಲ್ಲಿ ಅಗತ್ಯ ವಸ್ತುಗಳ ಮಾರಾಟದ ವ್ಯಾಪಾರಿಗಳು ಹೆಚ್ಚಿದ್ದರು. ಆದರೆ, ಗ್ರಾಹಕರ ಸಂಖ್ಯೆ ಕಡಿಮೆ ಇತ್ತು. ಬಹುತೇಕ ಗ್ರಾಹಕರು, ವಾಹನಗಳಲ್ಲಿ ಬಂದು ವಸ್ತುಗಳನ್ನು ಖರೀದಿಸಿಕೊಂಡು ಹೋದರು. ರಸ್ತೆಯ ಅಕ್ಕ-ಪಕ್ಕದಲ್ಲಿ ತಳ್ಳುಗಾಡಿ ನಿಲ್ಲಿಸಿದ್ದವರನ್ನು ಪೊಲೀಸರು ಚದುರಿಸಿ ಬೇರೆಡೆ ಕಳುಹಿಸಿದರು.

ವಾಹನಗಳ ತಪಾಸಣೆ: ನಗರದಲ್ಲಿ ಭದ್ರತೆ ಹಾಗೂ ವಾಹನಗಳ ತಪಾಸಣೆಗಾಗಿ ಚೆಕ್‌ಪೋಸ್ಟ್‌ಗಳಲ್ಲಿ ನಿರ್ಮಿಸಲಾಗಿದೆ. ಮಂಗಳವಾರ ಬೆಳಿಗ್ಗೆ 6 ಗಂಟೆಯಿಂದಲೇ ವಾಹನಗಳ ತಪಾಸಣೆ ನಡೆಸಲಾಯಿತು.

ಪ್ರತಿಯೊಂದು ವಾಹನಗಳನ್ನು ತಡೆದ ಪೊಲೀಸರು, ದಾಖಲೆಗಳ ಪರಿಶೀಲನೆ ನಡೆಸಿದರು. ದಾಖಲೆ ಸರಿ ಇಲ್ಲದ ಹಾಗೂ ಸೂಕ್ತ ಕಾರಣ ನೀಡದವರ ವಾಹನಗಳನ್ನು ಜಪ್ತಿ ಮಾಡಿದರು. ಕೆಲ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡರು.

ಅಗತ್ಯ ವಸ್ತುಗಳ ಖರೀದಿ, ತುರ್ತು ವೈದ್ಯಕೀಯ ಸೇವೆ, ಹೋಟೆಲ್ ಪಾರ್ಸೆಲ್ ಸೇರಿದಂತೆ ಹಲವು ಕಾರಣ ನೀಡಿ ಜನರು ಪೊಲೀಸರಿಂದ ತಪ್ಪಿಸಿಕೊಂಡು ಹೋದರು.

‘ಪೊಲೀಸರು ಲಾಠಿಯಿಂದ ಹೊಡೆಯುತ್ತಿದ್ದಾರೆ’ ಎಂಬ ಆರೋಪಗಳು ಬಂದಿದ್ದರಿಂದ ಕಮಿಷನರ್ ಕಮಲ್ ಪಂತ್ ಅವರೇ ಮಂಗಳವಾರ ರಸ್ತೆಗೆ ಇಳಿದಿದ್ದರು. ಕೆ.ಆರ್. ಮಾರುಕಟ್ಟೆ ಬಳಿ ಪೊಲೀಸರ ಜೊತೆ ಸೇರಿ ವಾಹನಗಳನ್ನು ತಡೆದು ಪರಿಶೀಲನೆ ನಡೆಸಿದರು. ಆಯಾ ವಿಭಾಗಗಳಲ್ಲಿ ಡಿಸಿಪಿಗಳು ಸಂಚರಿಸಿ ಭದ್ರತೆ ಪರಿಶೀಲನೆ ನಡೆಸಿದರು.

ಬೈಕ್‌ನಲ್ಲಿ ಹೊರಟಿದ್ದ ವ್ಯಕ್ತಿಯೊಬ್ಬ ರಸ್ತೆಯ ದೃಶ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿದ್ದ. ಆತನನ್ನು ತಡೆದ ಕಮಲ್ ಪಂತ್, ವಿಚಾರಣೆ ನಡೆಸಿದರು. ‘ನಾನು ಪತ್ರಕರ್ತ’ ಎಂದು ಆತ ಹೇಳಿದ್ದ. ಯಾವ ಮಾಧ್ಯಮ ? ಎಂದಾಗ ಹೇಳಲು ತಡವರಿಸಿದ. ಆತನ ಬೈಕ್ ಜಪ್ತಿ ಮಾಡುವಂತೆ ಕಮಿಷನರ್, ಪೊಲೀಸರಿಗೆ ಸೂಚಿಸಿದರು.

ಕೆ.ಆರ್. ಮಾರುಕಟ್ಟೆ ಬಳಿ ಅನಗತ್ಯವಾಗಿ ಸಂಚರಿಸುತ್ತಿದ್ದ ಆಟೊ ಚಾಲಕನನ್ನು ತಡೆದಿದ್ದ ಪೊಲೀಸರು, ಬಸ್ಕಿ ಹೊಡೆಸಿ ಎಚ್ಚರಿಕೆ ನೀಡಿ ಕಳುಹಿಸಿದರು.



ಅಮೃತನಗರದಲ್ಲಿ ದ್ವಿಚಕ್ರ ವಾಹನ ಸವಾರರನ್ನು ಪೊಲೀಸರು ಮಂಗಳವಾರ ತಪಾಸಣೆ ನಡೆಸಿದರು – ಪ್ರಜಾವಾಣಿ ಚಿತ್ರ

ಅಂತರ ಮರೆತ ಜನ

‘ಶಿವಾಜಿನಗರ, ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ ಹಾಗೂ ಕೆಲ ಪ್ರದೇಶಗಳಲ್ಲಿ ರಸ್ತೆ ಬದಿಯಲ್ಲೇ ತಾತ್ಕಾಲಿಕ ಮಳಿಗೆಗಳನ್ನು ತೆರೆಯಲಾಗಿದೆ. ಅಲ್ಲಲ್ಲ ಅಂತರ ಮರೆತು ಜನ ಖರೀದಿಯಲ್ಲಿ ಮಗ್ನರಾಗಿದ್ದರು.

‘ಸೋಮವಾರವೂ ಮಳಿಗೆಗಳು ತೆರೆದಿದ್ದವು. ಲಾಠಿ ಏಟು ಬೀಳುವ ಭಯದಲ್ಲಿ ಅಂತರ ಕಾಯ್ದುಕೊಂಡಿದ್ದರು. ಆದರೆ, ಮಂಗಳವಾರ ಪೊಲೀಸರು ಅಂಗಡಿಗಳ ಬಳಿಯೂ ಬರಲಿಲ್ಲ. ಇದು ಜನರಿಗೆ ಮತ್ತಷ್ಟು ಅನುಕೂಲ ಮಾಡಿಕೊಟ್ಟಂತಾಯಿತು’ ಎಂದು ಶಿವಾಜಿನಗರ ನಿವಾಸಿಯೊಬ್ಬರು ಹೇಳಿದರು.

ಕಡಿಮೆ ಸಂಖ್ಯೆಯಲ್ಲಿದ್ದ ಪೊಲೀಸರು

ಪ್ರತಿ ಚೆಕ್‌ಪೋಸ್ಟ್‌ನಲ್ಲೂ ಪೊಲೀಸರು ಕಾವಲು ಕಾಯುತ್ತಿದ್ದರು. ಸೋಮವಾರಕ್ಕಿಂತಲೂ ಮಂಗಳವಾರ ನಗರದಲ್ಲಿ ಪೊಲೀಸರ ಸಂಖ್ಯೆ ಕಡಿಮೆ ಇತ್ತು.

‘ಜನರಿಗೆ ಎಷ್ಟೇ ಬುದ್ಧಿವಾದ ಹೇಳಿದರೂ ಕಾನೂನು ಪಾಲಿಸುತ್ತಿಲ್ಲ. ಅಂಥವರಿಗೆ ಲಾಠಿಯಿಂದ ಹೊಡೆದರೆ ಪೊಲೀಸರ ಬಗ್ಗೆಯೇ ಅಪಪ್ರಚಾರ ಮಾಡಲಾಯಿತು. ಜನರಿಗಾಗಿ ಕೆಲಸ ಮಾಡುತ್ತಿರುವ ಸಿಬ್ಬಂದಿ ನೊಂದಿದ್ದಾರೆ’ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಯಾರ ಮೇಲೆಯೇ ಲಾಠಿ ಪ್ರಹಾರ ಮಾಡಬೇಡಿ ಎಂದು ಸೂಚನೆ ನೀಡಲಾಗಿತ್ತು. ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣವನ್ನಷ್ಟೇ ದಾಖಲಿಸಿಕೊಂಡಿದ್ದಾರೆ’ ಎಂದೂ ತಿಳಿಸಿದರು.

ರೆಮ್‌ಡಿಸಿವಿರ್: ಫೋರ್ಟಿಸ್ ಆಸ್ಪತ್ರೆ ಶುಶ್ರೂಷಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.



ಸಂತೋಷ್



ಸುನೀಲ್

‘ಫೋರ್ಟಿಸ್ ಆಸ್ಪತ್ರೆಯ ಶುಶ್ರೂಷಕ ಸಂತೋಷ್ ಹಾಗೂ ಖಾಸಗಿ ಆಂಬುಲೆನ್ಸ್ ಚಾಲಕ ಸುನೀಲ್ ಬಂಧಿತರು. ಇಬ್ಬರಿಂದಲೂ ರೆಮ್‌ಡಿಸಿವಿರ್ ಚುಚ್ಚುಮದ್ದಿನ 8 ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಚುಚ್ಚುಮದ್ದು ಅಕ್ರಮವಾಗಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ಬಗ್ಗೆ ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ಬಂದಿತ್ತು. ಅದನ್ನು ಆಧರಿಸಿ ಬಸವೇಶ್ವರನಗರದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಪುರಾವೆ ಸಮೇತ ಬಂಧಿಸಲಾಗಿದೆ.’

‘ಸಂತೋಷ್, ಫೋರ್ಟಿಸ್ ಆಸ್ಪತ್ರೆಯಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ. ಕೊರೊನಾ ಸೋಂಕಿತರ ಸಂಬಂಧಿಕರನ್ನು ಸಂಪರ್ಕಿಸಿ ಚುಚ್ಚುಮದ್ದು ಮಾರುತ್ತಿದ್ದ. ಇನ್ನೊಬ್ಬ ಆರೋಪಿ ಸುನೀಲ್ ಸಹ ಚುಚ್ಚುಮದ್ದು ಮಾರಾಟದಲ್ಲಿ ನಿರತನಾಗಿದ್ದ’ ಎಂದು ಪೊಲೀಸರು ತಿಳಿಸಿದರು.

ಐಐಎಚ್‌ಆರ್ ಅಭಿವೃದ್ಧಿಪಡಿಸಿರುವ ವಾಹನ

ಹಾಪ್‌ಕಾಮ್ಸ್‌ಗೆ ಸೋಲಾರ್ ವಾಹನಗಳ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಹಣ್ಣು-ತರಕಾರಿ ಹಾಗೂ ಇತರೆ ಉತ್ಪನ್ನಗಳನ್ನು ತಾಜಾ ಸ್ಥಿತಿಯಲ್ಲೇ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸಲು ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರ (ಐಐಎಚ್‌ಆರ್) ಅಭಿವೃದ್ಧಿಪಡಿಸಿರುವ ನಾಲ್ಕು ಸೋಲಾರ್ ವಾಹನಗಳನ್ನು ಹಾಪ್‌ಕಾಮ್ಸ್‌ಗೆ ಮಂಗಳವಾರ ಹಸ್ತಾಂತರಿಸಲಾಯಿತು.

ಈ ವಾಹನದಲ್ಲಿ ವಿದ್ಯುತ್ ಅಥವಾ ಸೌರಶಕ್ತಿ ಬಳಸಿ ಹಣ್ಣು-ತರಕಾರಿಗಳನ್ನು ತಾಜಾಸ್ಥಿತಿಯಲ್ಲೇ ಇಡಬಹುದು. ಎಲ್ಲ ಬಗೆಯ ಹವಾಮಾನ ಸ್ಥಿತಿಗಳಲ್ಲೂ ಒಂದೇ ರೀತಿಯ ತಾಜಾತನ ಇರಲಿದೆ. ವಾಹನದ ಮೇಲ್ಭಾಗದಲ್ಲಿ ಇರುವ ಸೌರಫಲಕದಿಂದ ಉಷ್ಣಾಂಶ ನಿಯಂತ್ರಿಸುವ ವ್ಯವಸ್ಥೆಯೂ ಇದೆ.

ಬೆಂಗಳೂರು, ಕಲಬುರ್ಗಿ, ಬೆಳಗಾವಿ ಹಾಗೂ ಮಂಡ್ಯದ ಹಾಪ್‌ಕಾಮ್ಸ್‌ಗಳಿಗೆ ತಲಾ ಒಂದು ವಾಹನ ನೀಡಲಾಗಿದ್ದು, ಈಗ ಲಾಕ್‌ಡೌನ್ ಇರುವುದರಿಂದ ನಾಲ್ಕೂ ವಾಹನಗಳನ್ನು ತಾತ್ಕಾಲಿಕವಾಗಿ ಬೆಂಗಳೂರಿನ ನಾಗರಿಕರಿಗೆ ಉತ್ಪನ್ನಗಳನ್ನು ಪೂರೈಸಲು ಹಾಪ್‌ಕಾಮ್ಸ್ ನಿರ್ಧರಿಸಿದೆ. ಕಳೆದ ಲಾಕ್‌ಡೌನ್ ವೇಳೆಯೂ ಐಐಎಚ್‌ಆರ್ ಈ ವಾಹನಗಳನ್ನು ಬಳಕೆಗೆ ನೀಡಿತ್ತು.

ವಾಹನಗಳಿಗೆ ಚಾಲನೆ ನೀಡಿ ಮಾತನಾಡಿದ ತೋಟಗಾರಿಕೆ ಸಚಿವ ಆರ್.ಶಂಕರ್, ‘ಲಾಕ್‌ಡೌನ್ ಸಮಯದಲ್ಲಿ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಸರಬರಾಜು ಹಾಗೂ ಮಾರಾಟಕ್ಕೆ ಯಾವುದೇ ಅಡೆತಡೆಗಳಿಲ್ಲ. ಈ ಅವಧಿಯಲ್ಲಿ ವಾಹನಗಳಲ್ಲಿ ಗ್ರಾಹಕರಿಗೆ ಉತ್ಪನ್ನ ತಲುಪಿಸುವುದು ಸೂಕ್ತ. ವಿಶೇಷ ತಂತ್ರಜ್ಞಾನವುಳ್ಳ ಈ ವಾಹನಗಳ ಕುರಿತು ಜನರ ಪ್ರತಿಕ್ರಿಯೆ ತಿಳಿದು, ವಾಹನಗಳ ಸಂಖ್ಯೆ ಹೆಚ್ಚಿಸಲಾಗುವುದು’ ಎಂದು ತಿಳಿಸಿದರು.

‘ಈಗಿನ ಪರಿಸ್ಥಿತಿಯಲ್ಲಿ ಗ್ರಾಹಕರು ಮನೆಯಿಂದ ಹೊರಬರಲು ಹೆದರುತ್ತಾರೆ. ಹಾಗಾಗಿ, ಅವರ ಮನೆಬಾಗಿಲಿಗೆ ಈ ವಾಹನಗಳಲ್ಲಿ ಹಣ್ಣು-ತರಕಾರಿಯನ್ನು ತಾಜಾ ಸ್ಥಿತಿಯಲ್ಲಿ ಪೂರೈಸಲಾಗುವುದು. ವಾಹನದಲ್ಲಿ ತೂಕದ ಯಂತ್ರ, ಸ್ವಯಂಚಾಲಿತ ಘೋಷಣಾ ಧ್ವನಿವರ್ಧಕಗಳೂ ಇವೆ’ ಎಂದು ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ತಿಳಿಸಿದರು.



ಹಾಪ್‌ಕಾಮ್ಸ್ ಕೇಂದ್ರ ಕಚೇರಿಯಲ್ಲಿ ಸೋಲಾರ್ ವಾಹನಗಳಿಗೆ ಸಚಿವ ಆರ್.ಶಂಕರ್ ಚಾಲನೆ ನೀಡಿದರು. ಹಾಪ್‌ಕಾಮ್ಸ್ ಪದಾಧಿಕಾರಿಗಳು ಇದ್ದರು

ಬುಧವಾರ • ಮೇ 12, 2021 ಪ್ರಜಾವಾಣಿ

ಕೋವಿಡ್: ಮಕ್ಕಳಿಗೂ ಇದೆ ಆರೈಕೆ ಕೇಂದ್ರ

• ಮನೋಹರ್ ಎಂ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಪೋಷಕರಿಗೆ ಕೊರೊನಾ ಸೋಂಕು ತಗುಲಿ, ಮಕ್ಕಳ ಪಾಲನೆಯ ಚಿಂತೆಯಲ್ಲಿದ್ದರೆ ಹಾಗೂ ಸೋಂಕಿನಿಂದ ಪೋಷಕರನ್ನು ಕಳೆದುಕೊಂಡಿರುವ ಮಕ್ಕಳ ಆರೈಕೆಗಾಗಿ 'ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆ'ಯಡಿ ಮಕ್ಕಳ ಕಲ್ಯಾಣ ಸಮಿತಿಗಳು ಮಕ್ಕಳ ಆರೈಕೆ ಕೇಂದ್ರಗಳನ್ನು ತೆರೆದಿವೆ.


ಇದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆಯಾಗಿದ್ದು, ಜಿಲ್ಲಾವಾರು ಮಕ್ಕಳ ಕಲ್ಯಾಣ ಸಮಿತಿಗಳು ನೇತೃತ್ವ ವಹಿಸಿವೆ. ಕೊರೊನಾದಿಂದ ಒಂಟಿತನಕ್ಕೆ ದೂಡುತ್ತಿರುವ ಮಕ್ಕಳು ಹಾಗೂ ಕುಟುಂಬದ ತಾತ್ಕಾಲಿಕವಾಗಿ ಪ್ರತ್ಯೇಕಗೊಂಡಿರುವ ಮಕ್ಕಳ ಆರೈಕೆಗಾಗಿ ಎಲ್ಲ ರೀತಿಯ ವ್ಯವಸ್ಥೆಗಳನ್ನು ಕಲ್ಪಿಸುವ ಭರವಸೆ ನೀಡಿವೆ.



ಅಂಜಲಿ ರಾಮಣ್ಣ

'ಪೋಷಕರು ಹಾಗೂ ಮಕ್ಕಳನ್ನು ಕೊರೊನಾ ದೂರ ಮಾಡುತ್ತಿದೆ. ಪೋಷಕರಿಬ್ಬರಿಗೂ ಸೋಂಕು ತಗುಲಿದಾಗ, ಚಿಕಿತ್ಸೆಗಾಗಿ ಆಸ್ಪತ್ರೆ ಸೇರುತ್ತಾರೆ. ಈ ವೇಳೆ ಮಕ್ಕಳು ಒಂಟಿಯಾಗುತ್ತಾರೆ. ಸೋಂಕಿನಿಂದ ತಂದೆ–ತಾಯಿ ಇಬ್ಬರೂ ಮೃತಪಟ್ಟು ಮಕ್ಕಳು ಅನಾಥರಾಗುತ್ತಿರುವ ಘಟನೆಗಳೂ ಕಂಡು ಬರುತ್ತಿವೆ. ಇಂತಹ ಮಕ್ಕಳ ಪಾಲನೆಗೆಂದೇ ಮಕ್ಕಳ ಕಲ್ಯಾಣ ಸಮಿತಿಗಳು ವಿಶೇಷ ಪಾಲನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ' ಎಂದು ಮಕ್ಕಳ ಕಲ್ಯಾಣ ಸಮಿತಿಯ ಬೆಂಗಳೂರು ಘಟಕದ ಅಧ್ಯಕ್ಷೆ ಅಂಜಲಿ ರಾಮಣ್ಣ 'ಪ್ರಜಾವಾಣಿ'ಗೆ ತಿಳಿಸಿದರು.

'ಮಕ್ಕಳ ನ್ಯಾಯ ಕಾಯ್ದೆಯಡಿ ಮಕ್ಕಳ ಕಲ್ಯಾಣ ಸಮಿತಿಗಳು ಇಂತಹ ಮಕ್ಕಳ ಆರೈಕೆಗಾಗಿ ಒಂದು ಪ್ರತ್ಯೇಕ ಜಾಗ ನಿಗದಿಪಡಿಸಿದೆ. ಇಲ್ಲಿ 24 ಗಂಟೆಗಳ ಕಾಲ ಕಾರ್ಯ-ನಿರ್ವಹಿಸುವ ಶುಶ್ರೂಷಕರು, ವೈದ್ಯರು, ಆಪ್ತ ಸಮಾಲೋಚಕರೂ ಇರುತ್ತಾರೆ. ಮಕ್ಕಳಿಗೆ ಕೋವಿಡ್ ತಪಾಸಣೆ ಇರುತ್ತದೆ. ಸೋಂಕಿತ ಮಕ್ಕಳಿಗೆ ಕೋವಿಡ್ ಚಿಕಿತ್ಸೆಯ ವ್ಯವಸ್ಥೆಯೂ ಇರಲಿದೆ' ಎಂದು ವಿವರಿಸಿದರು.



ಯಾರನ್ನು ಸಂಪರ್ಕಿಸಬೇಕು?

- ಮಕ್ಕಳ ಸಹಾಯವಾಣಿ-**1098**
- ಮಕ್ಕಳ ರಕ್ಷಣಾ ಘಟಕ (ಬೆಂಗಳೂರು):**080-29523458**
- ಜಿಲ್ಲಾಧಿಕಾರಿಗಳ ಕಚೇರಿಗೆ ಕರೆ ಮಾಡುವುದು (ಜಿಲ್ಲಾವಾರು)

'ಬೆಂಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ 6ರಿಂದ 18 ವರ್ಷದೊಳಗಿನ 150 ಮಕ್ಕಳಿಗೆ ಆಗುವಷ್ಟು ಸುಸಜ್ಜಿತ ಆರೈಕೆ ಕೇಂದ್ರ ಸಿದ್ಧಗೊಂಡಿದೆ. ಕೋವಿಡೇತರ ಮಕ್ಕಳಿಗೂ ಆರೈಕೆ ನೀಡಲಾಗುವುದು. ವಸತಿ, ಊಟ ಸೇರಿದಂತೆ ಮೂಲ ಸೌಕರ್ಯಗಳ ಜೊತೆಗೆ ಮನರಂಜನೆ, ಶಿಕ್ಷಣ, ಪರೀಕ್ಷೆಗೆ ಸಿದ್ಧತೆ, ಆನ್‌ಲೈನ್ ತರಗತಿಗಳ ವ್ಯವಸ್ಥೆಯೂ ಇರಲಿದೆ' ಎಂದು ಮಾಹಿತಿ ನೀಡಿದರು.

'ಇಂತಹ ಮಕ್ಕಳು ಕಂಡುಬಂದಲ್ಲಿ, ಮಕ್ಕಳ ಕಲ್ಯಾಣ ಸಮಿತಿಗಳು ಮೊದಲಿಗೆ ಆ ಮಕ್ಕಳ ಸಂಬಂಧಿಕರನ್ನು ಸಂಪರ್ಕಿಸಿ, ಅವರ ಪಾಲನೆಗೆ ನೀಡಲು ಪರಿಶೀಲಿಸುತ್ತದೆ. ಸಂಬಂಧಿಗಳು ಮಕ್ಕಳ ಜವಾಬ್ದಾರಿ ಹೊರಲು ಹಿಂದೆ ಸರಿದರೆ, ಮಕ್ಕಳನ್ನು ನೇರವಾಗಿ ರಕ್ಷಣಾ ಘಟಕಗಳಿಗೆ ಕರೆತರಲಾಗುವುದು' ಎಂದರು.

'ಮಕ್ಕಳ ಪೋಷಣೆಯ ಹೊಣೆ ನಾವೇ ಹೊತ್ತರೂ ಪೋಷಕರಿಗೂ ಕೆಲವು ಜವಾಬ್ದಾರಿಗಳಿವೆ. ನಮ್ಮ ಆರೈಕೆಯಲ್ಲಿರುವಾಗ ಪೋಷಕರು ತಮ್ಮ ಮಕ್ಕಳ ಸಂಪರ್ಕದಲ್ಲಿರಬೇಕು. ದೈನಂದಿನ ಸ್ಥಿತಿಗತಿಗಳನ್ನು ವಿಚಾರಿಸುತ್ತಿರಬೇಕು. ಈ ವ್ಯವಸ್ಥೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿನ ಮಕ್ಕಳಿಗೂ ಲಭ್ಯ. ಅಗತ್ಯವಿರುವವರು ಸಮೀಪದ ಮಕ್ಕಳ ಹಕ್ಕುಗಳ ರಕ್ಷಣಾ ಘಟಕಗಳು ಅಥವಾ ಮಕ್ಕಳ ಕಲ್ಯಾಣ ಸಮಿತಿಗಳನ್ನು ಸಂಪರ್ಕಿಸಬಹುದು' ಎಂದು ಹೇಳಿದರು.

ಸುದ್ದಿ 2 ನಿಮಿಷ

ಮಿಮ್ಸ್: ಆಮ್ಲಜನಕ ಪೂರೈಕೆ ವ್ಯತ್ಯಯ?

ಮಂಡ್ಯ: ಮಿಮ್ಸ್ ಆಸ್ಪತ್ರೆ ಕೋವಿಡ್ ವಾರ್ಡ್‌ನಲ್ಲಿ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ರೋಗಿಗಳು ಪರದಾಡಿದರು ಎಂಬ ದೃಶ್ಯವುಳ್ಳ ವಿಡಿಯೊವೊಂದು ಮಂಗಳವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಮಂಗಳವಾರ ಸಂಜೆ 5.30ರಲ್ಲಿ ವಿದ್ಯುತ್ ಸಮಸ್ಯೆಯಾಗಿ ಆಮ್ಲಜನಕ ಪೂರೈಕೆಯಲ್ಲಿ ಸಮಸ್ಯೆಯಾಗಿದೆ. ರೋಗಿಗಳು ಸಂಕಷ್ಟಕ್ಕೆ ಸಿಲುಕಿದ್ದರು. ಅವರ ಸಂಬಂಧಿಕರು ವಾರ್ಡ್‌ನೊಳಗೆ ತೆರಳಿ ರೋಗಿಗಳಿಗೆ ಗಾಳಿ ಬೀಸುತ್ತಿರುವ, ಗೋಳಿಡುತ್ತಿರುವ ದೃಶ್ಯ ವಿಡಿಯೊದಲ್ಲಿ ಇದೆ. ದೃಶ್ಯ ವೈರಲ್ ಆದ ನಂತರ ವಾರ್ಡ್‌ನಲ್ಲಿ ಐವರು ರೋಗಿಗಳು ಆಮ್ಲಜನಕ ಪೂರೈಕೆಯಿಂದ ಮೃತಪಟ್ಟಿದ್ದಾರೆ ಎಂಬ ಸುದ್ದಿ ಹರಡಿತ್ತು.

ಇದಕ್ಕೆ ಸ್ಪಷ್ಟನೆ ನೀಡಿರುವ ಮಿಮ್ಸ್ ನಿರ್ದೇಶಕ ಡಾ.ಎಂ.ಆರ್.ಹರೀಶ್, 'ಆಮ್ಲಜನಕ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗಿಲ್ಲ, ಐವರು ರೋಗಿಗಳು ಮೃತಪಟ್ಟಿಲ್ಲ. ಸಂಜೆ 5.28ರಲ್ಲಿ ಆರೋಗ್ಯ ಕ್ಷೀಣಿಸಿದ್ದ ರೋಗಿಯೊಬ್ಬರು ಮೃತಪಟ್ಟಿದ್ದಾರೆ. ಆದರೆ ಅವರು ಆಮ್ಲಜನಕ ಕೊರತೆಯಿಂದ ಮೃತಪಟ್ಟಿಲ್ಲ' ಎಂದು ತಿಳಿಸಿದ್ದಾರೆ.

ಬಿಎಂಟಿಸಿಯಿಂದ ಸಂಚಾರಿ 'ಆಮ್ಲಜನಕ ಬಸ್' ವ್ಯವಸ್ಥೆ



ಬೆಂಗಳೂರು: ಆಸ್ಪತ್ರೆಗಳಲ್ಲಿ ಆಮ್ಲಜನಕ ಹಾಸಿಗೆ ಸಿಗದೇ ಹೊರಗೆ ಕಾಯುವ ರೋಗಿಗಳಿಗೆ ಆಮ್ಲಜನಕ ನೀಡಿ ಜೀವ ರಕ್ಷಿಸುವ ವಿನೂತನ ಯೋಜನೆಯನ್ನು ಬಿಎಂಟಿಸಿ ಆರಂಭಿಸಿದೆ.

ಅದುವೇ ಸಂಚಾರಿ 'ಆಮ್ಲಜನಕ ಬಸ್' !

ಬಿಎಂಟಿಸಿಯು ಖಾಸಗಿ ಸೇವಾ ಸಂಸ್ಥೆಯ ಸಹಭಾಗಿತ್ವದಲ್ಲಿ ಪ್ರಾಯೋಗಿಕವಾಗಿ ಸಂಚಾರಿ ಆಮ್ಲಜನಕ ಬಸ್ (ಆಕ್ಸಿ ಬಸ್) ಆರಂಭಿಸಿದೆ. ನಗರದ ಕೆ.ಸಿ.ಜನರಲ್ ಆಸ್ಪತ್ರೆ ಮತ್ತು ವಿಕ್ಟೋರಿಯಾ ಮುಂದೆ ಇದೇ ಗುರುವಾರದಿಂದ ಆಮ್ಲಜನಕ ಘಟಕ ಹೊಂದಿದ ಬಸ್ಸನ್ನು ನಿಲ್ಲಿಸಲು ತೀರ್ಮಾನಿಸಿದೆ.

ಈ ಆಸ್ಪತ್ರೆಗಳಿಗೆ ಬರುವ ಕೋವಿಡ್ ರೋಗಿಗಳಿಗೆ ತಕ್ಷಣ ಆಮ್ಲಜನಕ ಸೌಲಭ್ಯ ಇರುವ ಹಾಸಿಗೆ ಸಿಗದೇ ಕಾಯಬೇಕಾದ ಪರಿಸ್ಥಿತಿ ಬಂದರೆ, ಈ ಬಸ್ಸಿನಲ್ಲಿ ರೋಗಿಗಳಿಗೆ ಆಮ್ಲಜನಕ ಪೂರೈಕೆ ಮಾಡಲಾಗುವುದು. ಈ ಮೂಲಕ ರೋಗಿಗಳ ಪ್ರಾಣ ಉಳಿಸಲು ಸಾಧ್ಯ ಎನ್ನುತ್ತಾರೆ ಉಪಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವ ಲಕ್ಷ್ಮಣ ಸವದಿ.

ಈ ಪ್ರಯೋಗ ಯಶಸ್ವಿಯಾದರೆ ರಾಜ್ಯ ಎಲ್ಲ ಕಡೆಗಳಲ್ಲೂ ಸಂಚಾರಿ ಆಮ್ಲಜನಕ ಬಸ್‌ಗಳ ವ್ಯವಸ್ಥೆ ಮಾಡಲಾಗುವುದು. ಒಂದು ಬಸ್ಸಿನಲ್ಲಿ ಏಕ ಕಾಲಕ್ಕೆ ಆರು ರೋಗಿಗಳಿಗೆ ಆಮ್ಲಜನಕ ನೀಡಬಹುದಾಗಿದೆ ಎಂದರು.

ಪ್ರತಿ ರೋಗಿಯು 2 ರಿಂದ 4 ಗಂಟೆಯ ಅವಧಿಯಲ್ಲಿ ತಮಗೆ ಅಗತ್ಯವಿರುವ ಪ್ರಮಾಣದಲ್ಲಿ ಆಮ್ಲಜನಕ ಪಡೆಯಬಹುದು ಎಂದು ಅವರು ವಿವರಿಸಿದರು.

ವೆಂಟಿಲೇಟರ್ ಸಿಗದೆ ಸಾವು: ಹೊರಟ್ಟಿ ಪತ್ರ

ಹುಬ್ಬಳ್ಳಿ: ವೈದ್ಯಕೀಯ ನಿರ್ದೇಶಕ ಸಂಬಂಧಿ ಸೇರಿದಂತೆ ಹಲವರು ವೆಂಟಿಲೇಟರ್ ಕೊರತೆಯಿಂದ ಮೃತಪಟ್ಟಿದ್ದನ್ನು ಕಿಮ್ಸ್‌ನಲ್ಲಿ ಕೋವಿಡ್–19ಗೆ ಚಿಕಿತ್ಸೆ ಪಡೆಯುವಾಗ ಕಣ್ಣಾರೆ ಕಂಡಿದ್ದೇನೆ. ವೆಂಟಿಲೇಟರ್ ಬೆಡ್ ಹೆಚ್ಚಿಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪತ್ರ ಬರೆದಿದ್ದಾರೆ.

ಕಿಮ್ಸ್ ಆಸ್ಪತ್ರೆಯು ಧಾರವಾಡ ಜತೆಗೆ ಗದಗ, ಹಾವೇರಿ, ಬೆಳಗಾವಿ, ಬಾಗಲಕೋಟೆ, ಉತ್ತರ ಕನ್ನಡ ಸೇರಿದಂತೆ ಹಲವು ಜನರಿಗೆ ಉಪಯುಕ್ತ ಸೇವೆ ನೀಡುತ್ತಿದೆ. ಸಹಸ್ರಾರು ಜನರ ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಮೂಲಸೌಲಭ್ಯ ಸೌಕರ್ಯ, ಯಂತ್ರೋಪಕರಣಗಳ ಕೊರತೆಯಿಂದ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ.

ಆಮ್ಲಜನಕ ಹಾಗೂ ವೆಂಟಿಲೇಟರ್ ಬೆಡ್‌ಗಳ ತೀವ್ರ ಕೊರತೆಯಿದೆ. ಇದರಿಂದ ನಿತ್ಯವೂ ಯುವಕರು ಸೇರಿದಂತೆ ಹಲವರು ಮರಣ ಹೊಂದಿದ್ದನ್ನು ಕಣ್ಣಾರೆ ನೋಡಿ ತೀವ್ರ ವ್ಯಥೆಪಟ್ಟಿದ್ದೇನೆ. ಇಲ್ಲಿ 100 ವೆಂಟಿಲೇಟರ್ ಬೆಡ್ ಲಭ್ಯವಿದ್ದು ಕನಿಷ್ಠ 300ಕ್ಕೆ ಹೆಚ್ಚಿಸಬೇಕು ಎಂದು ಮನವಿ ಮಾಡಿದ್ದಾರೆ.

ಇದಕ್ಕೆ ಪೂರಕವಾಗುವಂತೆ ಅವಶ್ಯಕವಿರುವ ಆಮ್ಲಜನಕ ಸರಬರಾಜಿಗೆ ಅಗತ್ಯವಿರುವ ಘಟಕ ಸ್ಥಾಪಿಸಬೇಕು. ಇನ್ನೂ ಹೆಚ್ಚುವರಿ 500 ಆಕ್ಸಿಜನ್ ಬೆಡ್ ಒದಗಿಸಿಕೊಡಬೇಕು ಎಂದಿದ್ದಾರೆ.

ಪ್ರತಿನಿತ್ಯ 50ರಿಂದ 70 ಮಂದಿಯಿಂದ ಪ್ಲಾಸ್ಮಾಕ್ಕೆ ಬೇಡಿಕೆ • ದಾನಿಗಳಿಂದ ಹಿಂದೇಟು

ಕೋವಿಡ್: ಪ್ಲಾಸ್ಮಾ ಥೆರಪಿಗೆ ಅಪಸ್ವರ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಕಾಯಿಲೆಗೆ ಗಂಭೀರವಾಗಿ ಅಸ್ವಸ್ಥಗೊಂಡು, ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಏರಿಕೆ ಕಂಡಿದೆ. ಇದರಿಂದಾಗಿ ಪ್ಲಾಸ್ಮಾ ಥೆರಪಿ ಮತ್ತೆ ಮುನ್ನೆಲೆಗೆ ಬಂದಿದೆ. ಆದರೆ, ಈ ಚಿಕಿತ್ಸಾ ವಿಧಾನದ ಬಗ್ಗೆ ವೈದ್ಯಕೀಯ ಕ್ಷೇತ್ರದಲ್ಲಿಯೇ ಈಗ ಅಪಸ್ವರ ವ್ಯಕ್ತವಾಗಿದೆ.

ರಾಜ್ಯ ಸರ್ಕಾರವು ಕಳೆದ ವರ್ಷ ಡ್ರಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಸಿಜಿಐ) ಅನುಮತಿ ಪಡೆದು, ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯಲ್ಲಿ (ಬಿಎಂಸಿಆರ್‌ಐ) ಪ್ಲಾಸ್ಮಾ ಥೆರಪಿಗೆ ಚಾಲನೆ ನೀಡಿತ್ತು. ಬಳಿಕ ಎಚ್‌ಸಿಜಿ, ಮಣಿಪಾಲ್ ಸೇರಿದಂತೆ ಪ್ರಮುಖ ಖಾಸಗಿ ಆಸ್ಪತ್ರೆಗಳು ಕೂಡ ಪ್ಲಾಸ್ಮಾ ಬ್ಯಾಂಕ್‌ಗಳನ್ನು ಪ್ರಾರಂಭಿಸಿದ್ದವು. ಗಂಭೀರವಾಗಿ ಅಸ್ವಸ್ಥರಾಗಿ, ತೀವ್ರ ನಿಗಾ ಘಟಕ ದಲ್ಲಿರುವವರಿಗೆ (ಐಸಿಯು) ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಈ ಥೆರಪಿ ಮಾಡಲಾಗಿತ್ತು. ಪ್ಲಾಸ್ಮಾ ದಾನ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ದಾನಿಗಳಿಗೆ ಪೌಷ್ಟಿಕಾಂಶದ ಭತ್ಯೆಯಾಗಿ ತಲಾ ₹ 5 ಸಾವಿರ ಘೋಷಿಸಿತ್ತು.

ಕಳೆದ ವರ್ಷಾಂತ್ಯಕ್ಕೆ ಕೋವಿಡ್ ಪ್ರಕರಣ ಹಾಗೂ ಮರಣ ಪ್ರಮಾಣ ಇಳಿಕೆ ಕಂಡ ಬಳಿಕ ಪ್ಲಾಸ್ಮಾ ಸಂಗ್ರಹವನ್ನು ವಿಕ್ಟೋರಿಯಾ ಸೇರಿದಂತೆ ಕೆಲ ಆಸ್ಪತ್ರೆಗಳು ಸ್ಥಗಿತ ಮಾಡಿದ್ದವು. 'ಕೋವಿಡ್ ಪ್ರಕರಣಗಳಲ್ಲಿ ಸಾವಿನ ಪ್ರಮಾಣ ತಗ್ಗಿಸುವಲ್ಲಿ ಪ್ಲಾಸ್ಮಾ ಥೆರಪಿ ಅಷ್ಟೊಂದು ಪರಿಣಾಮಕಾರಿ ಮತ್ತು ಪ್ರಯೋಜನಕಾರಿ ಅಲ್ಲ' ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಸ್ಪಷ್ಟಪಡಿಸಿತ್ತು. ಹೀಗಾಗಿ, ಕೆಲವೆಡೆ ಪ್ಲಾಸ್ಮಾ ಥೆರಪಿಯನ್ನು ಸಂಪೂರ್ಣ ಸ್ಥಗಿತ ಮಾಡಲಾಗಿತ್ತು. ವೈದ್ಯಕೀಯ ವಲಯದಲ್ಲಿ ಕೂಡ ಇದರ ಫಲಿತಾಂಶದ ಬಗ್ಗೆ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿದ್ದವು.

ಹೆಚ್ಚಿನ ಬೇಡಿಕೆ: ಈಗ ಕೋವಿಡ್ ಪ್ರಕರಣಗಳ ದಿಢೀರ್ ಏರಿಕೆ ಕಾಣುವ ಜತೆಗೆ ಮರಣ ಪ್ರಕರಣಗಳ ಸಂಖ್ಯೆ ಕೂಡ ಹೆಚ್ಚಳವಾಗಿದೆ. ಅದೇ ರೀತಿ, 2,500ಕ್ಕೂ ಅಧಿಕ ಮಂದಿ ಐಸಿಯು ದಾಖಲಾಗಿ, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಇದರಿಂದಾಗಿ ಕೆಲ ಖಾಸಗಿ ಆಸ್ಪತ್ರೆಗಳ ವೈದ್ಯರು ಪ್ಲಾಸ್ಮಾ ಥೆರಪಿಗೆ ಶಿಫಾರಸು ಮಾಡಲಾರಂಭಿಸಿದ್ದಾರೆ. ಪ್ಲಾಸ್ಮಾ ಬ್ಯಾಂಕ್‌ಗಳಲ್ಲಿ ಪ್ರತಿನಿತ್ಯ 50ರಿಂದ 70 ಮಂದಿ ಪ್ಲಾಸ್ಮಾಕ್ಕೆ ಬೇಡಿಕೆ ಸಲ್ಲಿಸುತ್ತಿದ್ದಾರೆ. ಆದರೆ, ಕೋವಿಡ್‌ನಿಂದ ಚೇತರಿಸಿಕೊಂಡವರು ಪ್ಲಾಸ್ಮಾ ದಾನಕ್ಕೆ ಹಿಂದೇಟು ಹಾಕುತ್ತಿರುವ ಪರಿಣಾಮ 5ರಿಂದ 10 ಮಂದಿಗೆ ದೊರೆಯುತ್ತಿದೆ.

'ರಕ್ತದಲ್ಲಿ ಸಮಾನವಾಗಿ ಕೋಶ ಮತ್ತು ರಸಗಳು (ಪ್ಲಾಸ್ಮಾ) ಇರುತ್ತವೆ. ರೋಗದಿಂದ ಗುಣಮುಖರಾದವರ ದುಗ್ಧ ರಸದಲ್ಲಿ ಇರುವ ಪ್ರತಿರೋಧ ಕಣಗಳನ್ನು ತೆಗೆದುಕೊಂಡು, ರೋಗದಿಂದ ಬಳಲುತ್ತಿರುವ ವ್ಯಕ್ತಿಯ ರಕ್ತಕ್ಕೆ ಸೇರಿಸಲಾಗುತ್ತದೆ. ಈ ಪ್ರತಿರೋಧ ಕಣಗಳು ಕೊರೊನಾ ವೈರಾಣುವಿನ ಮೇಲೆ ದಾಳಿ ನಡೆಸುವ ಗುಣಗಳನ್ನು ಬೆಳೆಸಿಕೊಂಡಿರುತ್ತದೆ. ದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬಂದಲ್ಲಿ ಪ್ಲಾಸ್ಮಾ ಥೆರಪಿಯ ಮೂಲಕ ಸಾವಿನ ಪ್ರಮಾಣವನ್ನು ಗಣನೀಯವಾಗಿ ಇಳಿಕೆ ಮಾಡಲು ಶ್ರಮಿಸಬಹುದು' ಎಂದು ಕ್ಯಾನ್ಸರ್ ತಜ್ಞ ಹಾಗೂ ಎಚ್‌ಸಿಜಿ ಆಸ್ಪತ್ರೆಯ ಪ್ಲಾಸ್ಮಾ ಬ್ಯಾಂಕ್‌ನ ಮುಖ್ಯಸ್ಥ ಡಾ. ವಿಶಾಲ್ ರಾವ್ ತಿಳಿಸಿದರು.

ಪ್ಲಾಸ್ಮಾ ಥೆರಪಿ ನಿರರ್ಥಕ: ಡಾ. ಶಿವಕುಮಾರ್

'ಪ್ಲಾಸ್ಮಾ ಥೆರಪಿಯಿಂದ ಉತ್ತಮ ಫಲಿತಾಂಶ ದೊರೆತಿಲ್ಲ. ರೋಗಿಯು ಚೇತರಿಸಿಕೊಂಡಲ್ಲಿ ಅಥವಾ ಸ್ಪಂದಿಸಿದಲ್ಲಿ ಪ್ಲಾಸ್ಮಾನು ನೀಡಬಹುದಾಗಿತ್ತು. ಆದರೆ, ಇದರಿಂದ ಮರಣ ಪ್ರಮಾಣ ದರದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ. ಕೆಲವೊಂದು ಔಷಧ ಮತ್ತು ಚಿಕಿತ್ಸೆಯನ್ನು ಪ್ರಾಯೋಗಿಕವಾಗಿ ನಡೆಸಲಾಗುತ್ತದೆ. ಅದರಿಂದ ಉತ್ತಮ ಫಲಿತಾಂಶ ದೊರೆತಲ್ಲಿ ಮುಂದುವರೆಸಲಾಗುತ್ತದೆ. ಕೆಲ ಖಾಸಗಿ ಆಸ್ಪತ್ರೆಗಳು ಮಾತ್ರ ಈ ಚಿಕಿತ್ಸೆಯನ್ನು ನೀಡುತ್ತಿವೆ. ಪ್ಲಾಸ್ಮಾವನ್ನು ವಾಣಿಜ್ಯ ದೃಷ್ಟಿಕೋನದಿಂದ ಕೆಲವರು ನೋಡುತ್ತಿದ್ದಾರೆ' ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಶಿವಕುಮಾರ್ ತಿಳಿಸಿದರು.

'ಪ್ಲಾಸ್ಮಾ ಥೆರಪಿಯನ್ನು ಕೆಲವೆಡೆ ಈಗಲೂ ಮಾಡುತ್ತಿದ್ದಾರೆ. ಅದು ಉತ್ತಮ ಫಲಿತಾಂಶವನ್ನು ನೀಡಲಿಲ್ಲ. ಅದು ಅಷ್ಟು ಪ್ರಯೋಜನಕಾರಿಯಲ್ಲ ಎಂದುಐಸಿಎಂಆರ್ ಕೂಡ ಹೇಳಿದೆ. ರೋಗಿಯ ಸ್ಥಿತಿಗತಿ ಹಾಗೂ ದಾನಿಯ ಪ್ಲಾಸ್ಮಾದಲ್ಲಿನ ಪ್ರತಿರೋಧ ಕಣಗಳನ್ನು ಆಧರಿಸಿ ಫಲಿತಾಂಶ ದೊರೆಯುತ್ತದೆ' ಎಂದು ಆರೋಗ್ಯ ಇಲಾಖೆ ನಿರ್ದೇಶಕ ಡಾ. ಓಂಪ್ರಕಾಶ್ ಪಾಟೀಲ್ ತಿಳಿಸಿದರು.

ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ., 'ಪ್ಲಾಸ್ಮಾ ಥೆರಪಿಯಿಂದ ಉತ್ತಮ ಫಲಿತಾಂಶ ನಿರೀಕ್ಷಿಸಲು ಸಾಧ್ಯವಿಲ್ಲ. ಹಾಗಾಗಿ, ಇದಕ್ಕೆ ಮಹತ್ವ ನೀಡುತ್ತಿಲ್ಲ. ಕೆಲ ವೈದ್ಯರು ಮಾತ್ರ ಪ್ಲಾಸ್ಮಾ ತರಲು ಸೂಚಿಸುತ್ತಿದ್ದಾರೆ. ಈ ಚಿಕಿತ್ಸೆಯಿಂದ ಮರಣ ಪ್ರಮಾಣ ದರ ಕಡಿಮೆ ಮಾಡಲು ಸಾಧ್ಯವಿಲ್ಲ' ಎಂದು ವಿವರಿಸಿದರು.

ಚೇತರಿಸಿಕೊಂಡ 3 ತಿಂಗಳ ಅವಧಿ ಉತ್ತಮ

'ರೋಗಿಗೆ ವೈದ್ಯಕೀಯ ಆಮ್ಲಜನಕ ಬೇಕಾಕುವ ಮೂರು ದಿನಗಳ ಮೊದಲು ಪ್ಲಾಸ್ಮಾ ನೀಡಿದಲ್ಲಿ ಉತ್ತಮ ಫಲಿತಾಂಶ ಸಿಗುತ್ತದೆ. ಅದರಲ್ಲಿ ಅಧಿಕ ಪ್ರಮಾಣದಲ್ಲಿ ಪ್ರತಿರೋಧ ಕಣಗಳು ಇರಬೇಕು. ಇಲ್ಲವಾದಲ್ಲಿ ಫಲಿತಾಂಶ ಸಿಗುವುದಿಲ್ಲ. ಮೊದಲನೆ ಅಲೆಯಲ್ಲಿ ನಮ್ಮಿಂದ ಪ್ಲಾಸ್ಮಾ ಪಡೆದವರಲ್ಲಿ ಶೇ 60 ರಷ್ಟು ಮಂದಿಗೆ ಸಹಕಾರಿಯಾಗಿದೆ. 18 ವರ್ಷ ಮೇಲ್ಪಟ್ಟವರು ಪ್ಲಾಸ್ಮಾ ದಾನ ಮಾಡಬಹುದು. ಕೋವಿಡ್‌ನಿಂದ ಚೇತರಿಸಿಕೊಂಡ ಒಂದು ತಿಂಗಳಿನಿಂದ 3 ತಿಂಗಳ ಅವಧಿಯಲ್ಲಿ ಪ್ರತಿರೋಧ ಕಣಗಳು ಇರುವವರೆಗೆ ಎರಡು ವಾರಗಳಿಗೆ ಒಮ್ಮೆ ಪ್ಲಾಸ್ಮಾ ದಾನಮಾಡಬಹುದು' ಎಂದು ಡಾ. ವಿಶಾಲ್ ರಾವ್ ತಿಳಿಸಿದರು.

'ಲಸಿಕೆ: ಸ್ಥಳೀಯರಿಗೆ ಆದ್ಯತೆ ನೀಡಿ'

ನೆಲಮಂಗಲ: ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಬೆಂಗಳೂರು ಮತ್ತು ಹೊರ ವಲಯದವರು ಲಸಿಕೆ ಪಡೆಯಲು ಬರುತ್ತಿದ್ದು, ಸ್ಥಳೀಯರಿಗೆ ಆದ್ಯತೆ ನೀಡಲು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹೊರಗಿನವರು ಇಲ್ಲಿ ಲಸಿಕೆ ಪಡೆಯಲು ಬಂದರೆ ಸ್ಥಳೀಯರಿಗೆ ಅಭಾವ ಉಂಟಾಗಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ವೈದ್ಯಾಧಿಕಾರಿ ಹರೀಶ್ ಮಾತನಾಡಿ, 'ಸ್ಥಳೀಯರಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುವುದು' ಎಂದಿದ್ದಾರೆ.



ನಿಂತ ಬಸ್...

ನಗರದಲ್ಲಿ ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ಯಶವಂತಪುರ ಡಿಪೋದಲ್ಲಿ ಬಿಎಂಟಿಸಿ ಬಸ್‌ಗಳು ಮಂಗಳವಾರ ಸಾಲಾಗಿ ನಿಂತಿದ್ದವು -ಪ್ರಜಾವಾಣಿ ಚಿತ್ರ

ಹಾಸಿಗೆ ಬಿಟ್ಟು ಕೊಡದವರ ವಿರುದ್ಧ ಕ್ರಮ

ಆಸ್ಪತ್ರೆಗಳಿಗೆ ಭೇಟಿ ನೀಡುವಂತೆ ಅಧಿಕಾರಿಗಳಿಗೆ ಸಚಿವ ಆರ್‌.ಅಶೋಕ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾಲಿಕೆ ವ್ಯಾಪ್ತಿಯ ಆಸ್ಪತ್ರೆಗಳು ಶೇ 50ರಷ್ಟು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗಾಗಿ ಸರ್ಕಾರಕ್ಕೆ ಬಿಟ್ಟುಕೊಡದಿದ್ದರೆ ವಿಪತ್ತು ನಿರ್ವಹಣೆ ಕಾಯ್ದೆ ಅಡಿ ಕ್ರಮ ಕೈಗೊಳ್ಳಬೇಕು' ಎಂದು ಕಂದಾಯ ಸಚಿವ ಆರ್. ಅಶೋಕ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯ ಖಾಸಗಿ ಆಸ್ಪತ್ರೆಗಳ ಹಾಸಿಗೆ ಹಂಚಿಕೆ ಮತ್ತು ಲಭ್ಯತೆ ಕುರಿತು ಅವರು ಮಂಗಳವಾರ ವರ್ಚುವಲ್ ರೂಪದಲ್ಲಿ ಸಭೆ ನಡೆಸಿದರು.

'ಬಿಬಿಎಂಪಿ ಅಧಿಕಾರಿಗಳು, ನೋಡಲ್ ಅಧಿಕಾರಿಗಳು ಪೊಲೀಸ್ ಅಧಿಕಾರಿಗಳ ನೇತೃತ್ವದ ತಂಡವು ಶೀಘ್ರವೇ ಎಲ್ಲ ಆಸ್ಪತ್ರೆಗಳಿಗೆ ಭೇಟಿ ನೀಡಿ ಹಾಸಿಗೆಗಳ ಲಭ್ಯತೆಯ ವಾಸ್ತವಾಂಶ ಪರಿಶೀಲಿಸಬೇಕು' ಎಂದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ, 'ಆಸ್ಪತ್ರೆಗಳ ಸಹಕಾರ ಪಡೆದು ಸ್ಟೆಪ್ ಡೌನ್ ಆಸ್ಪತ್ರೆಗಳನ್ನು ಹೆಚ್ಚಿಸಬೇಕು. ಅವುಗಳಲ್ಲಿ ಸದ್ಯ 960 ಹಾಸಿಗೆಗಳಿವೆ. ಈ ಸಾಮರ್ಥ್ಯವನ್ನು 5 ಸಾವಿರ ಹಾಸಿಗೆಗಳಿಗೆ ಹೆಚ್ಚಿಸಬೇಕು' ಎಂದರು.

ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್, 'ಎಲ್ಲ ಖಾಸಗಿ ಆಸ್ಪತ್ರೆಗಳು ಶೇ 50ರಷ್ಟು ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳು ಶೇ 75ರಷ್ಟು ಹಾಸಿಗೆಗಳನ್ನು ಸರ್ಕಾರಿ ಕೋಟಾದಡಿ ಚಿಕಿತ್ಸೆಗೆ ಮೀಸಲಿಡಬೇಕಿದೆ. ಇದರ ಉಸ್ತುವಾರಿಗೆ ವಲಯವಾರು ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ 9 ತಂಡಗಳನ್ನು ರಚಿಸಲಾಗಿದೆ. 50 ಆಸ್ಪತ್ರೆಗಳಿಗೆ ನೋಡಲ್ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಿಂದ ಆಪ್ತಮಿತ್ರ ಸಿಬ್ಬಂದಿಯನ್ನೂ ನೇಮಿಸಲಾಗಿದೆ' ಎಂದರು.

ಬಿಬಿಎಂಪಿಯು ಮುಖ್ಯ ಆಯುಕ್ತ ಗೌರವ್ ಗುಪ್ತ, 'ಕೆಲ ಖಾಸಗಿ ಆಸ್ಪತ್ರೆಗಳಿಗೆ ಈಗಾಗಲೇ ಭೇಟಿ ಪರಿಶೀಲನೆ ನಡೆಸಿದ್ದೇವೆ. ನಿಯಮಾನುಸಾರ ನಡೆದುಕೊಳ್ಳದ ಆಸ್ಪತ್ರೆಗಳಿಗೆ ನೋಟಿಸ್ ಜಾರಿಮಾಡಿದ್ದು, ಹಾಸಿಗೆಗಳನ್ನು ವಶಪಡಿಸಿಕೊಳ್ಳಲಾಗಿದೆ. ನೋಡಲ್ ಅಧಿಕಾರಿಗಳು ಆಸ್ಪತ್ರೆಗಳನ್ನು ಪರಿಶೀಲನೆ ನಡೆಸಲಿದ್ದು, ಆ ಬಳಿಕ ಇನ್ನಷ್ಟು ಹಾಸಿಗೆಗಳು ಲಭ್ಯವಾಗುವ ನಿರೀಕ್ಷೆ ಇದೆ' ಎಂದರು.

ಸಹಾಯ ಕೇಂದ್ರ

ನಗರದ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಡಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ ರೋಗಿಗಳ ಆರೋಗ್ಯ ಸ್ಥಿತಿ ಬಗ್ಗೆ ಸಂಬಂಧಿಕರಿಗೆ ಮಾಹಿತಿ ನೀಡಲು ಸಹಾಯ ಕೇಂದ್ರ ಆರಂಭಿಸಲು ಬಿಬಿಎಂಪಿ ಕ್ರಮ ಕೈಗೊಂಡಿದೆ.

ಪ್ರತಿ ಆಸ್ಪತ್ರೆಗೂ ಜಲಮಂಡಳಿ ಹಾಗೂ ಬಿಬಿಎಂಪಿ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಆದೇಶ ಹೊರಡಿಸಿದ್ದಾರೆ. ಸಹಾಯಕೇಂದ್ರಗಳನ್ನು ಆರಂಭಿಸುವ ಹೊಣೆಯನ್ನು ಅವರಿಗೆ ವಹಿಸಲಾಗಿದೆ.

ಸುವರ್ಣ ಆರೋಗ್ಯ ಟ್ರಸ್ಟ್ ಮೂಲಕ ಸರ್ಕಾರಿ ಕೋಟಾಕ್ಕೆ ಹಂಚಿಕೆ ಆಗಿರುವ ಆಸ್ಪತ್ರೆಗಳಲ್ಲಿ ಬಿಬಿಎಂಪಿ ಸೂಚಿಸಿದ ರೋಗಿಗಳೇ ದಾಖಲಾಗುವುದನ್ನು ಖಚಿತಪಡಿಸಿಕೊಳ್ಳಬೇಕು. ಅವರಿಗೆ ಸರಿಯಾದ ಚಿಕಿತ್ಸೆ ದೊರಕುವಂತೆ ನೋಡಿಕೊಂಡು ಮೇಲಧಿಕಾರಿಗಳಿಗೆ ವರದಿ ಸಲ್ಲಿಸಬೇಕು ಎಂದೂ ಮುಖ್ಯ ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

'ರೋಗಿ ಬಿಡುಗಡೆಯಾದ ತಕ್ಷಣವೇ ಮಾಹಿತಿ ನೀಡಿ'

ಕೋವಿಡ್ ಚಿಕಿತ್ಸೆಗಾಗಿ ಸರ್ಕಾರಿ ಕೋಟಾದಡಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುವವರು ಗುಣಮುಖರಾಗಿ ಬಿಡುಗಡೆಯಾದ ಕೂಡಲೇ ಆ ಮಾಹಿತಿಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಪೋರ್ಟಲ್‌ನಲ್ಲಿ ದಾಖಲಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಮಂಗಳವಾರ ಆದೇಶ ಮಾಡಿದ್ದಾರೆ.

ಸರ್ಕಾರಿ ಕೋಟಾದಡಿ ದಾಖಲಾದ ರೋಗಿಗಳು ಕಾಯಿಲೆ ವಾಸಿಯಾಗಿ ಮನೆಗೆ ಮರಳಿದ ಬಳಿಕವೂ, ಬಿಬಿಎಂಪಿ ವ್ಯಾಪ್ತಿಯ ಕೆಲವು ಖಾಸಗಿ ಆಸ್ಪತ್ರೆಗಳು ಈ ಕುರಿತ ನಿಖರ ಮಾಹಿತಿ ನೀಡುತ್ತಿಲ್ಲ. ಈ ಬಗ್ಗೆ ಆಯಾ ಆಸ್ಪತ್ರೆಗಳ ನೋಡಲ್ ಅಧಿಕಾರಿಗಳು ಮತ್ತು ಆರೋಗ್ಯ ಮಿತ್ರ ಸಿಬ್ಬಂದಿ ಮೇಲ್ವಿಚಾರಣೆ ನೋಡಿಕೊಳ್ಳಬೇಕು ಎಂದು ಮುಖ್ಯ ಆಯುಕ್ತರು ಆದೇಶದಲ್ಲಿ ತಿಳಿಸಿರುತ್ತಾರೆ.

'ಸರಿಗಮಪ' ಸ್ಪರ್ಧಿ ಸುಬ್ರಮಣಿ ಪತ್ನಿ ಆತ್ಮಹತ್ಯೆ

ಕೋಲಾರ: ಸರಿಗಮಪ ರಿಯಾಲಿಟಿ ಶೋ ಸ್ಪರ್ಧಿಯಾಗಿದ್ದ ಪೊಲೀಸ್ ಕಾನ್‌ಸ್ಟೆಬಲ್ ಸುಬ್ರಮಣಿ ಅವರ ಪತ್ನಿ ಜ್ಯೋತಿ (30) ಅವರು ಖಿನ್ನತೆಯಿಂದ ನಗರದ ಧರ್ಮರಾಯನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಂಗಳೂರಿನ ಕೆ.ಆರ್.ಪುರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸುಬ್ರಮಣಿ ಅವರು ಪತ್ನಿ ಮತ್ತು ಮಕ್ಕಳೊಂದಿಗೆ ಮೇಡಿಹಳ್ಳಿಯಲ್ಲಿ ವಾಸವಾಗಿದ್ದರು.

ಜ್ಯೋತಿ ಅವರಿಗೆ ಕೊರೊನಾ ಸೋಂಕು ತಗುಲಿರುವುದು ಏಪ್ರಿಲ್‌ನಲ್ಲಿ ದೃಢಪಟ್ಟಿತ್ತು. ನಂತರ ಅವರು ಬೆಂಗಳೂರಿನ ಮೇಡಿಹಳ್ಳಿಯ ಮನೆಯಲ್ಲೇ ಕ್ವಾರಂಟೈನ್ ಆಗಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. ಬಳಿಕ ಅವರು ಏ.25ರಂದು ಇಬ್ಬರು ಮಕ್ಕಳೊಂದಿಗೆ ಕೋಲಾರದ ಧರ್ಮರಾಯನಗರದಲ್ಲಿನ ತವರು ಮನೆಗೆ ಬಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕೊರೊನಾ ಸೋಂಕಿನಿಂದ ತೀವ್ರ ಖಿನ್ನತೆಗೆ ಒಳಗಾಗಿದ್ದ ಜ್ಯೋತಿ ಅವರು ಮೇ 8ರಂದು ತಂದೆಯ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಬಳಿಕ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದ ಅವರು ಸೋಮವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಸಂಸದ ಪ್ರತಾಪಸಿಂಹಗೆ ಕೋವಿಡ್ ದೃಢ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಜಿಲ್ಲೆಯ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಕೆ ಉಸ್ತುವಾರಿ ಹೊತ್ತಿರುವ ಸಂಸದ ಪ್ರತಾಪಸಿಂಹ ಅವರಿಗೆ ಕೋವಿಡ್–19 ಇರುವುದು ಮಂಗಳವಾರ ದೃಢಪಟ್ಟಿದೆ.

'ಮೈಸೂರಿನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯಲ್ಲಿ ರೋಗಿಯೊಬ್ಬರನ್ನು ನೋಡಲು ಹೋಗಿದ್ದೆ. ಬಳಿಕ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಮಾಡಿಸಿಕೊಂಡೆ. ಅದರಲ್ಲಿ ನೆಗೆಟಿವ್ ಇರುವುದು ಗೊತ್ತಾಯಿತು. ತಕ್ಷಣವೇ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡಿದ್ದು, ಪಾಸಿಟಿವ್ ಆಗಿದೆ. ಆದರೆ, ಯಾವುದೇ ರೋಗ ಲಕ್ಷಣಗಳು ಇಲ್ಲ' ಎಂದು ಹೇಳಿದ್ದಾರೆ.

200 ಹಾಸಿಗೆ ಸಾಮರ್ಥ್ಯದ ಕೇಂದ್ರ ಇಂದಿನಿಂದ ಕಾರ್ಯಾರಂಭ

ಸಾ.ರಾ. ಸ್ನೇಹ ಬಳಗದಿಂದ ಕೋವಿಡ್ ಆರೈಕೆ ಕೇಂದ್ರ

• ಪಂಡಿತ್ ನಾಟೀಕರ್

ಕೆ.ಆರ್.ನಗರ: ತಾಲ್ಲೂಕಿನ ಕಗ್ಗೆರೆ ಬಳಿ ಸಾ.ರಾ.ಸ್ನೇಹ ಬಳಗವು 200 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ಆರಂಭಿಸಿದ್ದು, ಜೆಡಿಎಸ್ ಶಾಸಕ ಸಾ.ರಾ.ಮಹೇಶ್, ಬುಧವಾರ ಆರೋಗ್ಯ ಇಲಾಖೆಗೆ ಇದನ್ನು ಹಸ್ತಾಂತರಿಸಲಿದ್ದಾರೆ.

ಪಟ್ಟಣದಿಂದ 8 ಕಿ.ಮೀ. ದೂರದ ಕಗ್ಗೆರೆ ಗ್ರಾಮದ ಹೊರವಲಯದಲ್ಲಿನ ಮೂರು ಎಕರೆ ಜಾಗದಲ್ಲಿ, 16 ಸಾವಿರ ಚದರ ಅಡಿಯಲ್ಲಿ ನಿರ್ಮಿಸಲಾದ ನೆಲ ಮತ್ತು ಮೊದಲ ಮಹಡಿಯ ಕಟ್ಟಡವನ್ನು ಕೋವಿಡ್ ಆರೈಕೆ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ.

ಗಾರ್ಮೆಂಟ್ಸ್ ಆರಂಭಿಸಲಿಕ್ಕಾಗಿ ಸಾ.ರಾ.ಸ್ನೇಹ ಬಳಗದಿಂದ ಈ ಕಟ್ಟಡ ನಿರ್ಮಿಸಲಾಗಿತ್ತು. ಅದಕ್ಕಾಗಿ ಯಂತ್ರೋಪಕರಣಗಳನ್ನೂ ಇಲ್ಲಿ ಅಳವಡಿಸಲಾಗಿತ್ತು. ಕೋವಿಡ್ ವ್ಯಾಪಕವಾಗಿ ಹರಡುತ್ತಿರುವ ಹೊತ್ತಿನಲ್ಲಿ ಎಲ್ಲ ಯಂತ್ರಗಳನ್ನು ತೆರವುಗೊಳಿಸಲಾಗಿದೆ. ಕೊರೊನಾ ಸೋಂಕಿತರು ಹಾಗೂ ಆಮ್ಲಜನಕದ ಅಗತ್ಯವಿರುವವರಿಗಾಗಿ ನೂತನ ಕಟ್ಟಡವನ್ನೇ ಕೋವಿಡ್ ಆರೈಕೆ ಕೇಂದ್ರವನ್ನಾಗಿ ಮಾರ್ಪಡಿಸಲಾಗಿದೆ.



ಸಾ.ರಾ.ಸ್ನೇಹ ಬಳಗದ ಸದಸ್ಯರಿಂದ ಆರೈಕೆ ಕೇಂದ್ರದಲ್ಲಿ ಸಿದ್ಧತೆ ನಡೆಯಿತು

'200 ಸಾಮಾನ್ಯ ಹಾಸಿಗೆ, ಆಮ್ಲಜನಕ ಸಹಿತ 10 ಹಾಸಿಗೆ ಕೇಂದ್ರದಲ್ಲಿವೆ. ರೋಗಿಗಳ ಆರೈಕೆಗಾಗಿ ಮೂವರು ವೈದ್ಯರು, 10 ಜನ ನರ್ಸ್, ಐವರು ಡಿ.ಗ್ರೂಪ್ ನೌಕರರು ಇಲ್ಲಿ ಕೆಲಸ ಮಾಡಲಿದ್ದಾರೆ. ವೈದ್ಯರು ಉಳಿದುಕೊಳ್ಳಲು ಕೊಠಡಿ, ಹೈಟೆಕ್ ಶೌಚಾಲಯ, ಜನರೇಟರ್, ಎರಡು ಆಂಬುಲೆನ್ಸ್, ಊಟದ ವ್ಯವಸ್ಥೆಯೂ ಇಲ್ಲಿರಲಿದೆ' ಎಂದು ಶಾಸಕ ಸಾ.ರಾ. ಮಹೇಶ್ ತಿಳಿಸಿದರು.

'ನಿಮಿಷಕ್ಕೆ 5 ಲೀಟರ್ ಆಮ್ಲಜನಕವನ್ನು ಉತ್ಪಾದಿಸುವ ತಲಾ ₹ 1.10 ಲಕ್ಷ ವೆಚ್ಚದ ನಾಲ್ಕು ಯಂತ್ರಗಳು ಕೇಂದ್ರದಲ್ಲಿವೆ. ಸೇವೆಗೆ ಯಾವೊಬ್ಬ ವೈದ್ಯರು ಮುಂದಾಗದಿದ್ದರಿಂದ ಸರ್ಕಾರ ₹ 60 ಸಾವಿರ ಸಂಬಳ ನೀಡಿದರೆ, ನಾವು ಒಬ್ಬೊಬ್ಬರಿಗೆ ತಲಾ ₹ 40 ಸಾವಿರ ಸಂಬಳ ನೀಡುತ್ತೇವೆ. ತಾಲ್ಲೂಕಿನಲ್ಲಿ ಈ ರೀತಿ ಒಟ್ಟು 7 ವೈದ್ಯರನ್ನು ನೇಮಿಸಿಕೊಳ್ಳಲಾಗಿದೆ' ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಕೆ.ಆರ್.ನಗರದಲ್ಲಿನ ತಾಲ್ಲೂಕು ಕೋವಿಡ್ ಆರೈಕೆ ಕೇಂದ್ರಕ್ಕೆ ಸೋಂಕಿತರನ್ನು ಕರೆತರಲು ಹಾಗೂ ಮೃತಪಟ್ಟವರ ಶವ ಸಾಗಿಸಲು ಎರಡು ಆಂಬುಲೆನ್ಸ್ ಪ್ರತ್ಯೇಕವಾಗಿ ನೀಡಲಾಗಿದೆ' ಎಂದು ಸಾ.ರಾ.ಸ್ನೇಹ ಬಳಗದ ಕಾರ್ಯದರ್ಶಿ ಸಿ.ಜೆ.ಆನಂದ ತಿಳಿಸಿದರು.

> **ಜನರ ಆರೋಗ್ಯದ ಕಾಳಜಿಯಿಂದ ಶಾಸಕ ಸಾ.ರಾ. ಮಹೇಶ್ ಕೋವಿಡ್ ಆರೈಕೆ ಕೇಂದ್ರ ಆರಂಭಿಸುತ್ತಿದ್ದಾರೆ. ಸರ್ಕಾರದ ಕೆಲಸಕ್ಕೆ ತಾವೂ ಕೈ ಜೋಡಿಸಿದ್ದಾರೆ**
> **ಡಾ.ಕೆ.ಆರ್.ಮಹೇಂದ್ರಪ್ಪ,** ತಾಲ್ಲೂಕು ಆರೋಗ್ಯಾಧಿಕಾರಿ

> **ಕೇಂದ್ರದ ವೆಚ್ಚವನ್ನು ಸಾ.ರಾ. ಸ್ನೇಹ ಬಳಗವೇ ನೋಡಿಕೊಳ್ಳಲಿದೆ. ಔಷಧೋಪಚಾರದ ಹೊಣೆ ತಾಲ್ಲೂಕು ಆಡಳಿತದ್ದು. ₹ 1 ಕೋಟಿಗೂ ಹೆಚ್ಚು ವೆಚ್ಚವಾಗಲಿದೆ**
> **ಸಾ.ರಾ.ಮಹೇಶ್,** ಶಾಸಕ



ಚಿತ್ರನಟ ದರ್ಶನ್‌ಗೆ, ಗಿಳಿಯನ್ನು ಕೊಡುಗೆಯಾಗಿ ನೀಡಿದ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಗಣಪತಿ ಸಚ್ಚಿದಾನಂದ ಆಶ್ರಮದ ಗಿಳಿ ನಟ ದರ್ಶನ್ ತೋಟಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಗಣಪತಿ ಸಚ್ಚಿದಾನಂದ ಆಶ್ರಮದ 'ಶುಕವನ'ದಗಿಳಿಯೊಂದನ್ನು, ಚಿತ್ರನಟ ದರ್ಶನ್ ಕೊಡುಗೆಯಾಗಿ ಪಡೆದಿದ್ದಾರೆ.

ಸೋಮವಾರ ಆಶ್ರಮಕ್ಕೆ ಭೇಟಿ ನೀಡಿದ್ದ ದರ್ಶನ್, ಸ್ವಾಮೀಜಿಯ ದರ್ಶನ ಪಡೆದು, ಕೆಲ ಹೊತ್ತು ಮಾತುಕತೆ ನಡೆಸಿದರು. ನಂತರ ಶುಕವನವನ್ನೂ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಅವರಿಗೆ ರೆಡ್ ಹೆಡೆಡ್ ಅಮೆಜಾನ್ ಗಿಳಿಯೊಂದು ಇಷ್ಟವಾಗಿದ್ದು, ಅದನ್ನು ತಮಗೆ ನೀಡುವಂತೆ ಸ್ವಾಮೀಜಿಯನ್ನು ಕೋರಿದ್ದಾರೆ. ದರ್ಶನ್ ಅಪೇಕ್ಷೆಗೆ ಸ್ಪಂದಿಸಿದ ಸ್ವಾಮೀಜಿ, ಗಿಳಿಯೊಂದನ್ನು ಕೊಡುಗೆಯಾಗಿ ನೀಡಿ ಆಶೀರ್ವದಿಸಿದರು ಎಂದು ಮಠದ ಮೂಲಗಳು ತಿಳಿಸಿವೆ.

ಸೋಂಕಿತರ ಪರೋಕ್ಷ ಸಂಪರ್ಕಕ್ಕೆ ಬಂದವರ ಪರೀಕ್ಷೆಗೆ ಕೊಕ್ • ವಾಮಮಾರ್ಗ ಅನುಸರಿಸಲು ಮುಂದಾಯಿತೇ ಸರ್ಕಾರ ಎನ್ನುವ ಅನುಮಾನ

ಕೋವಿಡ್ ಪರೀಕ್ಷೆ ಪ್ರಮಾಣ ಕಡಿತಗೊಳಿಸಿದ ಬಿಬಿಎಂಪಿ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ದೇಶದಲ್ಲೇ ಅತಿ ಹೆಚ್ಚು ಕೋವಿಡ್ ಸಕ್ರಿಯ ಪ್ರಕರಣಗಳನ್ನು ಹೊಂದಿರುವ ರಾಜ್ಯ ಕರ್ನಾಟಕ. ಈ ಹಣೆಪಟ್ಟಿ ಅಂಟಿಕೊಂಡ ಬಳಿಕ ನಗರದಲ್ಲಿ ಸೋಂಕು ಪತ್ತೆ ಪ್ರಮಾಣ ತಗ್ಗಿಸಲು ವಾಮಮಾರ್ಗ ಅನುಸರಿಸಲಾಗುತ್ತಿದೆಯೇ? ಕೋವಿಡ್ ಪರೀಕ್ಷೆಗಳ ಪ್ರಮಾಣವನ್ನು ಏಕಾಏಕಿ ಕಡಿಮೆ ಮಾಡಿರುವ ಕ್ರಮ ಇಂತಹದ್ದೊಂದು ಅನುಮಾನಕ್ಕೆ ಕಾರಣವಾಗಿದೆ.

ಇದುವರೆಗೂ ಯಾವುದೇ ವ್ಯಕ್ತಿಯಲ್ಲಿ ಸೋಂಕು ಪತ್ತೆಯಾದರೂ ಅವರ ನೇರ ಸಂಪರ್ಕಕ್ಕೆ ಬಂದವರನ್ನು ಹಾಗೂ ಪರೋಕ್ಷವಾಗಿ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚಿ ಅವರಿಗೂ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿತ್ತು. ಒಬ್ಬ ಸೋಂಕಿತ ಪತ್ತೆಯಾದರೆ ಕನಿಷ್ಠ ಪಕ್ಷ 20 ಮಂದಿಯನ್ನಾದರೂ ಪರೀಕ್ಷೆ ನಡೆಸಬೇಕು ಎಂಬ ತಂತ್ರವನ್ನು ಬಿಬಿಎಂಪಿ ಅನುಸರಿಸುತ್ತಿತ್ತು. ಪರೀಕ್ಷಾ ಫಲಿತಾಂಶ ಬರುವವರೆಗೂ ಅವರು ಹೊರಗಡೆ ಅಡ್ಡಾಡದಂತೆ ಹಾಗೂ ಮನೆಯಲ್ಲೇ ಪ್ರತ್ಯೇಕವಾಸದಲ್ಲಿ ಇರುವಂತೆ ಸೂಚನೆ ನೀಡಲಾಗುತ್ತಿತ್ತು. ಕೋವಿಡ್ ರೋಗಿಯ ಸಂಪರ್ಕಕ್ಕೆ ಬಂದು ಸೋಂಕು ಅಂಟಿಸಿಕೊಂಡವರು ಮತ್ತಷ್ಟು ಮಂದಿಗೆ ಸೋಂಕು ಹರಡುವುದನ್ನು ತಡೆಯಲಾಗುತ್ತಿತ್ತು. ಈ ವಿಧಾನವನ್ನು ಅನುಸರಿಸಿಯೇ ಕೋವಿಡ್ ಮೊದಲ ಅಲೆಯನ್ನು ನಿಯಂತ್ರಿಸುವಲ್ಲಿ ಬಿಬಿಎಂಪಿ ತಕ್ಕಮಟ್ಟಿನ ಯಶಸ್ಸನ್ನೂ ಗಳಿಸಿತ್ತು.

ನಗರದಲ್ಲಿ ಎರಡನೇ ಅಲೆಯಲ್ಲಿ ಭಾರಿ ಪ್ರಮಾಣದಲ್ಲಿ ಸೋಂಕು ಪತ್ತೆಯಾಗಲು ಆರಂಭವಾದ ಬಳಿಕ ಸೋಂಕಿತರ ಸಂಪರ್ಕಕ್ಕೆ ಬಂದವರನ್ನು 1:20ರ ಅನುಪಾತದಲ್ಲಿ ಪರೀಕ್ಷೆ ನಡೆಸಲು ಸಾಧ್ಯವಾಗಿರಲಿಲ್ಲ. ಆದರೂ ಸೋಂಕಿತರ ಜೊತೆ ನೇರ ಹಾಗೂ



ಸಾಂದರ್ಭಿಕ ಚಿತ್ರ

ಪರೋಕ್ಷ ಸಂಪರ್ಕಕ್ಕೆ ಬಂದವರನ್ನು ಆರೋಗ್ಯ ಕಾರ್ಯಕರ್ತರು ಆದಷ್ಟು ಪ್ರಮಾಣದಲ್ಲಿ ಪತ್ತೆ ಹಚ್ಚಿ ಪರೀಕ್ಷೆಗೆ ಒಳಪಡಿಸುತ್ತಿದ್ದರು. ನಿತ್ಯ ಸರಾಸರಿ 20 ಸಾವಿರದಷ್ಟು ಪ್ರಕರಣಗಳು ಪತ್ತೆಯಾಗುತ್ತಿದ್ದಾಗ 60 ಸಾವಿರಕ್ಕೂ ಅಧಿಕ ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಆದರೆ, ಸೋಂಕಿತರ ಪರೋಕ್ಷ ಸಂಪರ್ಕಕ್ಕೆ ಬಂದವರನ್ನು ಕೋವಿಡ್ ಚಿಕಿತ್ಸೆಗೆ ಒಳಪಡಿಸುವ ಪರಿಪಾಠವನ್ನು ನಾಲ್ಕು ದಿನಗಳಿಂದ ಕೈಬಿಡಲಾಗಿದೆ. ಮೇ 9ರಂದು 20 ಸಾವಿರಕ್ಕೂ ಅಧಿಕ ಕೋವಿಡ್ ಪ್ರಕರಣ ಪತ್ತೆಯಾದರೂ ಮರುದಿನ ಕೇವಲ 32 ಸಾವಿರ ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಇದರಿಂದಾಗಿ ಸೋಂಕು ಪತ್ತೆ ಪ್ರಮಾಣ ಈಗ 15 ಸಾವಿರಕ್ಕೆ ಇಳಿದಿದೆ.

‘ಸದ್ಯಕ್ಕೆ ನಾವು ಸೋಂಕಿತರ ಹಾಗೂ ಸೋಂಕಿನ ಲಕ್ಷಣ ಇರುವವರನ್ನು ಮಾತ್ರ ಪರೀಕ್ಷೆಗೆ ಒಳಪಡಿಸುತ್ತಿದ್ದೇವೆ. ಸೋಂಕಿತರ ಪರೋಕ್ಷ ಸಂಪರ್ಕಕ್ಕೆ ಬಂದವರನ್ನು ಪರೀಕ್ಷೆಗೆ ಒಳಪಡಿಸುತ್ತಿಲ್ಲ. ಈ ಬಗ್ಗೆ ಹಿರಿಯ ಅಧಿಕಾರಿಗಳಿಂದ ಸ್ಪಷ್ಟ ಸೂಚನೆ ಇದೆ’ ಎಂದು ಪ್ರಾಥಮಿಕ ಆರೋಗ್ಯ ಕೇಂದ್ರವೊಂದರ (ಪಿಎಚ್‌ಸಿ) ವೈದ್ಯರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಈಗ ಕೋವಿಡ್ ಲಸಿಕೆ ಪಡೆಯಲು ನಿತ್ಯ ನೂರಾರು ಜನ ಪಿಎಚ್‌ಸಿಗಳಿಗೆ ಬರುತ್ತಾರೆ. ಲಸಿಕೆ ನೀಡುವುದು ಹಾಗೂ ಕೋವಿಡ್ ಪರೀಕ್ಷೆ ನಡೆಸುವುದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಸಿಬ್ಬಂದಿ ಲಭ್ಯ ಇಲ್ಲ. ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಕಡಿತಗೊಳಿಸಲು ಇದು ಕೂಡಾ ಕಾರಣ’ ಎಂದು ಅವರು ವಿವರಿಸಿದರು.

‘ಈ ಹಿಂದೆ ಸೋಂಕು ಲಕ್ಷಣ ಇದೆ ಎಂದ ತಕ್ಷಣ ಪಿಎಚ್‌ಸಿಗಳಲ್ಲಿ ನೇರವಾಗಿ ಕೋವಿಡ್ ಪರೀಕ್ಷೆ ಮಾಡುತ್ತಿದ್ದರು. ಈಗ ವೈದ್ಯರ ಶಿಫಾರಸು ಪತ್ರ ತನ್ನಿ ಎನ್ನುತ್ತಿದ್ದಾರೆ. ಸೋಂಕಿನ ಎಲ್ಲ ಲಕ್ಷಣಗಳಿದ್ದರೂ ಪರೀಕ್ಷೆ ಮಾಡಲು ಹಿಂದೇಟು ಹಾಕುತ್ತಿದ್ದಾರೆ’ ಎಂದು ಸಂಜಯ ನಗರದ ನಿವಾಸಿ ಕೃಷ್ಣ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಅಷ್ಟೇ ಅಲ್ಲ, ಈ ಹಿಂದೆ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದ (ಪಿಎಚ್‌ಸಿ) ವ್ಯಾಪ್ತಿಯಲ್ಲಿ ಸಂಪರ್ಕ ಕಾರ್ಯಕರ್ತೆಯರು ಹಾಗೂ ಆರೋಗ್ಯ ಸಹಾಯಕಿಯರ ನಾಲ್ಕೈದು ತಂಡಗಳು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಮಾರುಕಟ್ಟೆಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳು ಸೇರಿದಂತೆ ಜನ ಜಂಗುಳಿ ಹೆಚ್ಚು ಇರುವ ಪ್ರದೇಶಗಳಿಗೆ ತೆರಳಿ ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸುತ್ತಿದ್ದರು. ಸಂಚಾರ ನಿರ್ಬಂಧ ಕ್ರಮಗಳು ಜಾರಿಯಾದ ಬಳಿಕ ಇದನ್ನೂ ಕೈಬಿಡಲಾಗಿದೆ.

ಸೋಂಕು ಪತ್ತೆ–ಕೋವಿಡ್ ಪರೀಕ್ಷೆ ವಿವರ

ದಿನಾಂಕ	ಸೋಂಕು ಪತ್ತೆ	ಪರೀಕ್ಷೆ ಸಂಖ್ಯೆ
ಮೇ 11	15,879	48,469
ಮೇ 10	16,747	32,862
ಮೇ 09	20,897	51,772
ಮೇ 08	21,534	57,460
ಮೇ 07	21,376	60,924
ಮೇ 06	23,706	60,944
ಮೇ 05	23,106	59,368
ಮೇ 04	20,870	63,506
ಮೇ 03	22,112	40,128
ಮೇ 02	21,199	55,709
ಮೇ 01	19,353	62,004

ಸರ್ಕಾರದಿಂದಲೇ ಸೂಚನೆ?

‘ಕೋವಿಡ್ ಪರೀಕ್ಷೆ ಪ್ರಮಾಣವನ್ನು ಕಡಿಮೆ ಮಾಡುವಂತೆ ಸರ್ಕಾರದಿಂದಲೇ ಸೂಚನೆ ಇದೆ. ಹಾಗಾಗಿ ಪರೀಕ್ಷೆಗಳ ಪ್ರಮಾಣವನ್ನು ಕಡಿತಗೊಳಿಸಿದ್ದೇವೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಪರೀಕ್ಷೆ ಪ್ರಮಾಣ ಕಡಿಮೆ ಮಾಡುವಂತೆ ಸಚಿವರು ಸೂಚನೆ ನೀಡಿದ್ದಾರೆ ಎಂದು ಬಿಜೆಪಿ ಶಾಸಕರೊಬ್ಬರು ತಿಳಿಸಿದರು.


‘ಕೋವಿಡ್ ದೃಢಪಟ್ಟ ವ್ಯಕ್ತಿಗಳ ಜೊತೆ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದವರನ್ನು ಗುರುತಿಸಿ, ಪ್ರತ್ಯೇಕಿಸುವ ಮೂಲಕ ಅವು ಇನ್ನಷ್ಟು ಮಂದಿಗೆ ಸೋಂಕು ಹರಡದಂತೆ ತಡೆಯುವುದು ಈ ಕಾಯಿಲೆಯ ನಿಯಂತ್ರಣಕ್ಕೆ ಇರುವ ಅತ್ಯಂತ ವೈಜ್ಞಾನಿಕ ಮಾರ್ಗ. ಪರೀಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಿದರೆ ಈ ರೋಗ ನಿಯಂತ್ರಣ ಕಷ್ಟಸಾಧ್ಯ’ ಎಂದು ಅಧಿಕಾರಿ ಅಭಿಪ್ರಾಯಪಟ್ಟರು.

ಆಮ್ಲಜನಕ ಸಾಧನ ಹೆಸರಿನಲ್ಲಿ ₹ 12.59 ಲಕ್ಷ ವಂಚನೆ

ಬೆಂಗಳೂರು: ಆಮ್ಲಜನಕ ಸಾಂದ್ರೀಕರಣ ಸಾಧನಗಳನ್ನು ಮಾರಾಟ ಮಾಡುವುದಾಗಿ ಹೇಳಿ ನಗರದ ಉದ್ಯಮಿಯೊಬ್ಬರಿಂದ ₹ 12.59 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಉತ್ತರ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಭೂಪಸಂದ್ರದ ನಿವಾಸಿಯಾಗಿರುವ ಉದ್ಯಮಿ ದೂರು ನೀಡಿದ್ದಾರೆ. ಸುರಭಿ ಎಂಟರ್‌ಪ್ರೈಸಸ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆಮ್ಲಜನಕ ಸಾಂದ್ರೀಕರಣ ಸಾಧನಗಳಿಗಾಗಿ ದೂರುದಾರ ಹುಡುಕಾಟ ನಡೆಸುತ್ತಿದ್ದರು. ಸುರಭಿ ಎಂಟರ್‌ಪ್ರೈಸಸ್ ಕಂಪನಿಯೊಂದರ ಜಾಹೀರಾತು ನೋಡಿ ಪ್ರತಿನಿಧಿಯನ್ನು ಸಂಪರ್ಕಿಸಿದ್ದರು. ಅಗತ್ಯವಿರುವಷ್ಟು ಸಾಧನ ನೀಡಲು ಒಪ್ಪಿದ್ದ ಪ್ರತಿನಿಧಿ, ಹಂತಹಂತವಾಗಿ ₹ 12.59 ಲಕ್ಷ ಪಡೆದಿದ್ದ’ ಎಂದು ಮೂಲಗಳು ಹೇಳಿವೆ.



‘ಸರ್ಕಾರದ ಕೆಲಸ ಭಯೋತ್ಪಾದಕರ ರೀತಿ ಅಲ್ಲ’


ನವದೆಹಲಿ(ಪಿಟಿಐ): ‘ಸರ್ಕಾರದ ಕೆಲಸ ಭಯೋತ್ಪಾದಕರ ರೀತಿ ಅಲ್ಲ. ನಿಮ್ಮ ವೈಫಲ್ಯಗಳನ್ನು ಮರೆಮಾಚಿಕೊಳ್ಳಿ, ಆದರೆ ಜನರ ಬಳಿಕ ನೀವು ಇದ್ದೀರಿ ಎಂಬುದನ್ನು ತಿಳಿದುಕೊಳ್ಳಿ’ ಎಂದು ದೆಹಲಿಯ ನ್ಯಾಯಾಲಯ ಮಂಗಳವಾರ ಹೇಳಿದೆ.

ಕೋವಿಡ್ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿಯೂ ವೈದ್ಯಕೀಯ ಉಪಕರಣಗಳ ಬೆಲೆಯನ್ನು ಸರ್ಕಾರ ನಿಯಂತ್ರಿಸಿಲ್ಲ ಎಂದು ನ್ಯಾಯಾಲಯವು ಅಸಮಾಧಾನ ವ್ಯಕ್ತಪಡಿಸಿದೆ.

ಆಮ್ಲಜನಕ ಸಾಂದ್ರೀಕರಣ ಸಾಧನಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿರುವ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು ‘ಇಂತಹ ವ್ಯಾಪಾರ ಮಾಡುವುದು ಈ ದೇಶದಲ್ಲಿ ಅಪರಾಧ’ ಎಂದು ಹೇಳಿದೆ.

ಮ್ಯಾಟ್ರಿಕ್ಸ್ ಸೆಲ್ಯುಲರ್ ಸರ್ವೀಸಸ್ ಕಂಪನಿಯ ಸಿಇಒ, ಉಪಾಧ್ಯಕ್ಷ ಸೇರಿದಂತೆ ನೌಕರರ ಜಾಮೀನು ಅರ್ಜಿ ವಿಚಾರಣೆ ವೇಳೆ ಮುಖ್ಯ ಮೆಟ್ರೊಪಾಲಿಟನ್ ನ್ಯಾಯಾಧೀಶರಾದ ಅರುಣ್ ಕುಮಾರ್ ಗರ್ಗ್ ಮೌಖಿಕವಾಗಿ ಈ ವಿಚಾರಗಳನ್ನು ಹೇಳಿದ್ದಾರೆ.

ವೈದ್ಯಕೀಯ ಉಪಕರಣಗಳನ್ನು ಸಂಗ್ರಹಿಸಿಟ್ಟು ಹೆಚ್ಚು ಬೆಲೆಗೆ ಮಾರಾಟ ಮಾಡಿದ ಆರೋಪದಲ್ಲಿ ಇವರನ್ನು ದೆಹಲಿ ಪೊಲೀಸರು ಬಂಧಿಸಿದ್ದರು.



ವಿರಳ ಸಂಚಾರ... ಲಾಕ್‌ಡೌನ್ ಕಾರಣ ವಾಹನಗಳ ಸಂಚಾರ ಸ್ತಬ್ಧವಾಗಿದ್ದು, ನೈಸ್ ರಸ್ತೆ ಬಿಕೊ ಎನ್ನುತ್ತಿದ್ದ ದೃಶ್ಯ ಮಂಗಳವಾರ ಕಂಡುಬಂತು –ಪ್ರಜಾವಾಣಿ ಚಿತ್ರ

ಕೋವಿಡ್–19: 24 ಗಂಟೆಗಳಲ್ಲಿ 39,510 ಮಂದಿಗೆ ಸೋಂಕು ದೃಢ

ಪರೀಕ್ಷೆ ಇಳಿಕೆ, ಸೋಂಕು ದೃಢ ಪ್ರಮಾಣ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ ನಡೆಸಲಾದ ಕೋವಿಡ್ ಪರೀಕ್ಷೆಗಳ ಸಂಖ್ಯೆ 1.16 ಲಕ್ಷಕ್ಕೆ ಇಳಿಕೆಯಾಗಿದೆ. ಇದೇ ವೇಳೆ ಸೋಂಕು ದೃಢ ಪ್ರಮಾಣ ಶೇ 33.99ಕ್ಕೆ ಏರಿಕೆಯಾಗಿದೆ.

ಕಳೆದೊಂದು ತಿಂಗಳಿನಿಂದ ರಾಜ್ಯದಲ್ಲಿ ಅಧಿಕ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವ ಕಾರಣ ಅಧಿಕ ಸಂಖ್ಯೆಯಲ್ಲಿ ಕೋವಿಡ್ ಪರೀಕ್ಷೆಗಳನ್ನು ನಡೆಸಲು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಸರ್ಕಾರಕ್ಕೆ ಸೂಚಿಸಿತ್ತು.

ಅದರಂತೆ ಕಳೆದ ತಿಂಗಳ ಅಂತ್ಯಕ್ಕೆ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ದಿನವೊಂದಕ್ಕೆ 1.90 ಲಕ್ಷದವರೆಗೂ ಏರಿಕೆ ಮಾಡಲಾಗಿತ್ತು.

ಇದರಿಂದಾಗಿ 50 ಸಾವಿರಕ್ಕೂ ಅಧಿಕ ಪ್ರಕರಣಗಳು 24 ಗಂಟೆಗಳ ಅವಧಿಯಲ್ಲಿ ದೃಢಪಟ್ಟಿದ್ದವು. ಆದರೆ, ಕಳೆದ ಒಂದು ವಾರದಿಂದ ಪರೀಕ್ಷೆಗಳ ಸಂಖ್ಯೆ ಇಳಿಮುಖ ಕಂಡಿದೆ.

ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 39,510 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 20.13ಲಕ್ಷಕ್ಕೆ ಏರಿಕೆಯಾಗಿದೆ.


ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಸದ್ಯ 5.87 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 22,584 ಮಂದಿ ಚೇತರಿಸಿಕೊಂಡಿದ್ದಾರೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 259 ಮಂದಿ ಸೇರಿದಂತೆ ರಾಜ್ಯದಲ್ಲಿ 480 ಮಂದಿ ಸಾವಿಗೀಡಾಗಿದ್ದಾರೆ.

ಬಳ್ಳಾರಿಯಲ್ಲಿ 28 ಮಂದಿ, ಉತ್ತರ ಕನ್ನಡದಲ್ಲಿ 18 ಮಂದಿ, ತುಮಕೂರು ಹಾಗೂ ಹಾಸನದಲ್ಲಿ ತಲಾ 16 ಮಂದಿ, ಚಾಮರಾಜನಗರ ಹಾಗೂ ಮೈಸೂರಿನಲ್ಲಿ ತಲಾ 12 ಮಂದಿ, ಶಿವಮೊಗ್ಗದಲ್ಲಿ 10 ಮಂದಿ ಮೃತಪಟ್ಟಿದ್ದಾರೆ. ಮರಣ ಹೊಂದಿದವರಲ್ಲಿ ಬಹುತೇಕರು ಉಸಿರಾಟದ ಸಮಸ್ಯೆ ಎದುರಿಸಿದ್ದಾರೆ.

ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 20 ಸಾವಿರದ ಗಡಿ (19,852) ಸಮೀಪಿಸಿದೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ 15,879ಕ್ಕೆ ಇಳಿಕೆಯಾಗಿದೆ. ತುಮಕೂರು (2,496), ಮೈಸೂರು (2,170), ಬಳ್ಳಾರಿ (1,558), ಮಂಡ್ಯ (1,354), ಶಿವಮೊಗ್ಗ (1,108), ಉತ್ತರ ಕನ್ನಡ (1,084), ಉಡುಪಿ (1,083) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ.



ಟಾಟಾ ನಗರದಿಂದ ರಾಜ್ಯಕ್ಕೆ 120 ಟನ್ ಆಮ್ಲಜನಕ

ಬೆಂಗಳೂರು: ರಾಜ್ಯದಲ್ಲಿ ಆಮ್ಲಜನಕ ಸಿಗದೆ ಕೋವಿಡ್ ರೋಗಿಗಳು ಸಾವಿನ ಕದ ತಟ್ಟುತ್ತಿರುವ ಮಧ್ಯೆಯೇ, ಸೋಮವಾರ (ಮೇ 10) ನಸುಕಿನ 3 ಗಂಟೆಗೆ ಟಾಟಾನಗರದಿಂದ (ಜಮ್‌ಶೆಡ್‌ಪುರ್) ಹೊರಟ 120 ಟನ್ ದ್ರವೀಕೃತ ವೈದ್ಯಕೀಯ ಆಮ್ಲಜನಕದ ಕಂಟೇನರ್‌ಗಳನ್ನು ಹೊತ್ತ ‘ಆಕ್ಸಿಜನ್ ಎಕ್ಸ್‌ಪ್ರೆಸ್’ ರೈಲು ಮಂಗಳವಾರ ಬೆಳಿಗ್ಗೆ ವೈಟ್‌ಫೀಲ್ಡ್ ತಲುಪಿದೆ.

ರೈಲು ಅತ್ಯಂತ ತುರ್ತಾಗಿ ತಲುಪಬೇಕೆಂಬ ಉದ್ದೇಶದಿಂದ ಗ್ರೀನ್ ಕಾರಿಡಾರ್ ಕಲ್ಪಿಸಲಾಗಿತ್ತು. ಹೀಗಾಗಿ, 1,833 ಕಿಮೀ ದೂರವನ್ನು 29 ಗಂಟೆ 35 ನಿಮಿಷಗಳಲ್ಲಿ ರೈಲು ತಲುಪಿದೆ. ತಲಾ 20 ಟನ್‌ನಂತೆ ಆಮ್ಲಜನಕ ತುಂಬಿದ ಆರು ಕಂಟೈನರ್‌ಗಳ ಈ ರೈಲು ವೈಟ್‌ಫೀಲ್ಡ್‌ನಲ್ಲಿರುವ ಇನ್‌ಲ್ಯಾಂಡ್ ಕಂಟೇನರ್ ಡಿಪೋಗೆ (ಐಸಿಡಿ) ಬಂದಿದೆ.

ಆಮ್ಲಜನಕ ಸಾಗಣೆಗೆ ನೆರವು ನೀಡುವಂತೆ ಭಾರತೀಯ ರೈಲ್ವೆಗೆ ಮೇ 1ರಂದು ರಾಜ್ಯ ಸರ್ಕಾರ ಮನವಿ ಮಾಡಿತ್ತು. ಮಹಾರಾಷ್ಟ್ರ, ಮಧ್ಯಪ್ರದೇಶ, ಹರಿಯಾಣ, ತೆಲಂಗಾಣ, ರಾಜಸ್ಥಾನ, ದೆಹಲಿ, ಉತ್ತರ ಪ್ರದೇಶಗಳಿಗೂ ‘ಆಕ್ಸಿಜನ್ ಎಕ್ಸ್‌ಪ್ರೆಸ್’ ರೈಲು ಆಮ್ಲಜನಕವನ್ನು ಸಾಗಿಸಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ರೈಲ್ವೆ ಸಚಿವ ಪೀಯೂಷ್ ಗೋಯೆಲ್, ‘ಕೋವಿಡ್ ರೋಗಿಗಳ ಚಿಕಿತ್ಸೆಗೆ ಇದರಿಂದ ಅನುಕೂಲ ಆಗಲಿದೆ’ ಎಂದಿದ್ದಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೂಡ ಟ್ವೀಟ್ ಮಾಡಿ, ಸಕಾಲಿಕ ನೆರವಿಗೆ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ರೆಮ್‌ಡಿಸಿವಿರ್ ಪೂರೈಸದ ಎರಡು ಕಂಪನಿಗೆ ನೋಟಿಸ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕೇಂದ್ರ ಸರ್ಕಾರದ ಸೂಚನೆಯಂತೆ ರಾಜ್ಯಕ್ಕೆ ಅಗತ್ಯ ಪ್ರಮಾಣದ ರೆಮ್‌ಡಿಸಿವಿರ್ ಚುಚ್ಚುಮದ್ದು ಸರಬರಾಜು ಮಾಡದ ಸಿಪ್ಲಾ ಮತ್ತು ಜುಬಿಲಿಯೆಂಟ್ ಔಷಧ ಕಂಪನಿಗಳಿಗೆ ರಾಜ್ಯ ಸರ್ಕಾರ ಮಂಗಳವಾರ ನೋಟಿಸ್ ನೀಡಿದೆ.

‘ನೋಟಿಸ್ ಸಿಕ್ಕಿದ 24 ಗಂಟೆಗಳಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಸಬೇಕು. ಪೂರೈಸದೇ ಇದ್ದರೆ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ನೋಟಿಸ್‌ನಲ್ಲಿ ಎಚ್ಚರಿಕೆ ನೀಡಲಾಗಿದೆ.

ಮೇ 9ರ ಒಳಗೆ ಕರ್ನಾಟಕಕ್ಕೆ 30 ಸಾವಿರ ವೈಯಲ್ಸ್ ರೆಮ್‌ಡಿಸಿವಿರ್ ಪೂರೈಸುವಂತೆ ಸಿಪ್ಲಾ ಕಂಪನಿಗೆ ಹಾಗೂ 32 ಸಾವಿರ ವೈಯಲ್ಸ್ ಪೂರೈಸುವಂತೆ ಜುಬಿಲಿಯೆಂಟ್ ಕಂಪನಿಗಳಿಗೆ ಮೇ 1 ರಂದು ಸೂಚಿಸಲಾಗಿತ್ತು. ಆದರೆ, ಮೇ 8ರವರೆಗೆ ಸಿಪ್ಲಾ ಕಂಪನಿ 10,840 ಮತ್ತು ಜುಬಿಲಿಯೆಂಟ್ ಕಂಪನಿ 17,601 ವೈಯಲ್ಸ್ ಮಾತ್ರ ಸರಬರಾಜು ಮಾಡಿದೆ.

‘ಕೇಂದ್ರ ಸೂಚಿಸಿದರೂ ರಾಜ್ಯಕ್ಕೆ ಸಕಾಲದಲ್ಲಿ ರೆಮ್‌ಡಿಸಿವಿರ್ ಪೂರೈಸದೇ ಇರುವುದರಿಂದ ಕೋವಿಡ್ ರೋಗಿಗಳ ಚಿಕಿತ್ಸೆ ಮೇಲೆ ಗಂಭೀರ ಪರಿಣಾಮ ಬೀರಿದೆ. ಹೀಗಾಗಿ, ನೋಟಿಸ್ ತಲುಪಿದ 24 ಗಂಟೆಯ ಒಳಗೆ ಬಾಕಿ ವೈಯಲ್ಸ್‌ಗಳನ್ನು ಪೂರೈಸಬೇಕು’ ಎಂದು ನೋಟಿಸ್‌ನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಶ್ರೀಧರ ಚಪ್ಪರಮನೆಗೆ ‘ಎಂ.ರಮೇಶ ಪ್ರಶಸ್ತಿ’



ಶಿರಸಿ: ಯಕ್ಷಗಾನ ಹಾಸ್ಯ ಕಲಾವಿದ ಶ್ರೀಧರ ಹೆಗಡೆ ಚಪ್ಪರಮನೆ ಅವರಿಗೆ ನಿವೃತ್ತ ಉಪನ್ಯಾಸಕ ದಿ.ಎಂ. ರಮೇಶ ಹೆಸರಿನಲ್ಲಿ ಕೊಡುವ ರಾಜ್ಯಮಟ್ಟದ ಚೊಚ್ಚಲ ಪ್ರಶಸ್ತಿಯನ್ನು ಘೋಷಿಸಲಾಗಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ವಿಜಯನಳಿನಿ ರಮೇಶ, ‘ಎಂ.ರಮೇಶ ಅವರ ನೆನಪಿಗೆ ಈ ವರ್ಷದಿಂದ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ. ಪ್ರಶಸ್ತಿಯು ₹25 ಸಾವಿರ ನಗದು, ಫಲಕ ಒಳಗೊಂಡಿರಲಿದೆ. ಯಕ್ಷಗಾನ, ನಾಟಕ, ಸಾಹಿತ್ಯ ಕ್ಷೇತ್ರದ ಪೈಕಿ ಯಾವುದೇ ಒಂದು ಕ್ಷೇತ್ರದ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುವುದು’ ಎಂದು ತಿಳಿಸಿದ್ದಾರೆ.

ನಾಡಿನ ಧಣಿ ನೀವು, ನನಗೆ ದಾರಿ ತೋರಿಸಿ

ಈರುಳ್ಳಿ ಬೆಲೆ ಕುಸಿತ: ಮುಖ್ಯಮಂತ್ರಿ ಬಿಎಸ್‌ವೈಗೆ ಮೊರೆ ಹೋದ ರೈತ ಮಹಿಳೆ

ಪ್ರಜಾವಾಣಿ ವಾರ್ತೆ

ಕೂಡ್ಲಹಳ್ಳಿ (ಹಿರಿಯೂರು): ‘ನನಗೆ ಇರೋದೆ ಎರಡೂವರೆ ಎಕರೆ ಜಮೀನು. ₹ 1.50 ಲಕ್ಷ ಖರ್ಚು ಮಾಡಿ ಈರುಳ್ಳಿ ಬೆಳೆದಿದ್ದೆ. ಲಾಕ್‌ಡೌನ್ ಕಾರಣದಿಂದಾಗಿ ಬೆಳೆಯನ್ನು ಬೆಂಗಳೂರಿಗೆ ಒಯ್ಯುವಂತಿಲ್ಲ. ಸ್ಥಳೀಯವಾಗಿ ಕಡಿಮೆ ಬೆಲೆಗೆ ಕೇಳುತ್ತಿದ್ದಾರೆ. ನಾಡಿನ ಧಣಿ ನೀವು. ನೀವೇ ನನಗೆ ದಾರಿ ತೋರಿಸಬೇಕು...’

ಹಿರಿಯೂರು ತಾಲ್ಲೂಕಿನ ಕೂಡ್ಲಹಳ್ಳಿಯ ರೈತ ಮಹಿಳೆ ಲಕ್ಷ್ಮಕ್ಕ ಮಂಗಳವಾರ ಮುಖ್ಯಮಂತ್ರಿಗೆ ಮಾಡಿರುವ ಮನವಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

‘ಪರಿಚಯದವರ ಬಳಿ ಒಂದಿಷ್ಟು ಸಾಲ ಮಾಡಿ ಎರಡೂವರೆ ಎಕರೆಯಲ್ಲಿ ಈರುಳ್ಳಿ ಹಾಕಿದ್ದೆ. ಬೆಳೆ ಚೆನ್ನಾಗಿ ಬಂದಿದ್ದರಿಂದ 150 ಪ್ಯಾಕೆಟ್ (ತಲಾ 60 ಕೆ.ಜಿ. ತೂಕ) ಇಳುವರಿ ಬಂದಿತ್ತು. ನನ್ನ ದುರದೃಷ್ಟವೋ ಎಂಬಂತೆ ಹಿಂದಿನ ವಾರ ಸುರಿದ ಮಳೆಗೆ 80 ಪ್ಯಾಕೆಟ್ ಈರುಳ್ಳಿ ಹಾಳಾಗಿದೆ. ಮನೆಯಲ್ಲಿ 75 ಪ್ಯಾಕೆಟ್ ಈರುಳ್ಳಿ ಉಳಿದಿದೆ. ಸ್ಥಳೀಯ ವರ್ತಕರು ಚೀಲಕ್ಕೆ ₹300ರಿಂದ ₹400ಕ್ಕೆ ಕೇಳುತ್ತಿದ್ದಾರೆ. ಅಷ್ಟು ಕಡಿಮೆ ದರಕ್ಕೆ ಮಾರಿದರೆ ಬಿತ್ತನೆ ಬೀಜ, ಗೊಬ್ಬರದ ಖರ್ಚೂ ಸಿಗುವುದಿಲ್ಲ. ಇನ್ನು ಕೈಗಡ ತೀರಿಸುವುದು ಹೇಗೆ’ ಎಂದು 70 ವರ್ಷದ ಲಕ್ಷ್ಮಕ್ಕ ಪ್ರಶ್ನಿಸುತ್ತಾರೆ.



ತಾವು ಬೆಳೆದ ಈರುಳ್ಳಿ ಬೆಳೆಯೊಂದಿಗೆ ಕೂಡ್ಲಹಳ್ಳಿ ಲಕ್ಷ್ಮಕ್ಕ

‘ನಮ್ಮೂರಿನಲ್ಲಿ ಇನ್ನೊಬ್ಬ ರೈತರು ಈರುಳ್ಳಿ ಬೆಳೆದಿದ್ದು, ಅವರದ್ದೂ ಇದೇ ಪರಿಸ್ಥಿತಿ ಆಗಿದೆ. ಲಾಕ್‌ಡೌನ್ ಇಲ್ಲದಿದ್ದರೆ, ಮಳೆಗೆ ಗಡ್ಡೆ ಕೊಳೆಯದಿದ್ದರೆ, ಬೆಂಗಳೂರಿಗೆ ಒಯ್ದು ಅಸಲನ್ನಾದರೂ ಪಡೆಯುತ್ತಿದ್ದೆ. ಕೊರೊನಾ ಮತ್ತು ಮಳೆ ನನ್ನ ಬದುಕನ್ನು ಕಿತ್ತುಕೊಂಡಿವೆ. ನನ್ನ ಮಕ್ಕಳಿಬ್ಬರು ಡಾಬಾ ನಡೆಸುತ್ತಿದ್ದಾರೆ. ಹಿಂದಿನ ವರ್ಷ ಐದಾರು ತಿಂಗಳು ಡಾಬಾ ಬಂದ್ ಮಾಡಿದ್ದರು. ಈ ವರ್ಷ ಯುಗಾದಿಯಿಂದ ಬಂದ್ ಮಾಡಿದ್ದಾರೆ. ಅವರೂ ಕಷ್ಟಕ್ಕೆ ಸಿಲುಕಿದ್ದಾರೆ. ಬದುಕಿನ ಬಂಡಿ ಸಾಗಿಸಲು ನೀವು ನೆರವಿಗೆ ಬರಬೇಕು’ ಎಂದು ಮನವಿ ಮಾಡಿದ್ದಾರೆ.

‘ವರ್ಷದ ಹಿಂದೆ ಈರುಳ್ಳಿ ಬೆಳೆದು ಸಂಕಷ್ಟಕ್ಕೆ ಸಿಲುಕಿದ್ದ ಕಾಟನಾಯಕನಹಳ್ಳಿಯ ರೈತ ಮಹಿಳೆಗೆ ನೀವು ನೆರವು ನೀಡಿದ್ದೀರಿ. ಇಳಿ ವಯಸ್ಸಿನಲ್ಲೂ ಕೃಷಿ ಮಾಡುತ್ತಿರುವ ನನಗೆ ನಿಮ್ಮ ನೆರವಿನ ಅಗತ್ಯ ತುಂಬ ಇದೆ. ಒಂದು ಪ್ಯಾಕೆಟ್ ಈರುಳ್ಳಿಗೆ ₹ 900ರಿಂದ ₹ 1000 (ಕೆ.ಜಿಗೆ ₹15 ರಿಂದ ₹18) ದರ ಸಿಕ್ಕರೂ ನಾನು ಮಾಡಿರುವ ಖರ್ಚು ಬರುತ್ತದೆ. ಮುಂಗಾರು ಮಳೆ ಆರಂಭವಾಗಿದ್ದು, ಬಿತ್ತನೆಗೆ ಅನುಕೂಲ ಆಗುತ್ತದೆ’ ಎಂದು ಲಕ್ಷ್ಮಕ್ಕ ಅವರು ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಒತ್ತಾಯಿಸಿದ್ದಾರೆ.

ಮನೆ ತಪಾಸಣೆ ವೈದ್ಯಕೀಯ ಉಪಕರಣಗಳಿಗೆ ಹೆಚ್ಚಿದ ಬೇಡಿಕೆ • ದುಪ್ಪಟ್ಟು ದರಕ್ಕೆ ಔಷಧ ಮಳಿಗೆಗಳಿಂದ ಮಾರಾಟ

ನಾಡಿಮಿಡಿತ ಹೆಚ್ಚಿಸುತ್ತಿರುವ ‘ಆಕ್ಸಿಮೀಟರ್’

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್ ಮೊದಲನೇ ಅಲೆ ಕಾಣಿಸಿಕೊಂಡಾಗ ಮನೆ ಆರೈಕೆಗೆ ಒಳಗಾದವರಿಗೆ ಪಲ್ಸ್ ಆಕ್ಸಿಮೀಟರ್, ಥರ್ಮಾಮೀಟರ್ ಒಳಗೊಂಡ ಕಿಟ್‌ಗಳನ್ನು ವಿತರಿಸಲಾಗುತ್ತಿತ್ತು. ಆದರೆ, ಎರಡನೇ ಅಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗುತ್ತಿರುವುದರಿಂದ ಈ ಕಿಟ್‌ಗಳ ವಿತರಣೆ ನಡೆಯುತ್ತಿಲ್ಲ. ಇದರಿಂದಾಗಿ ಪಲ್ಸ್ ಆಕ್ಸಿಮೀಟರ್‌ಗೆ ಬೇಡಿಕೆ ಹೆಚ್ಚಾಗಿದ್ದು, ಔಷಧ ಮಳಿಗೆಗಳಲ್ಲಿ ₹ 5 ಸಾವಿರದವರೆಗೂ ಮಾರಾಟ ಮಾಡಲಾಗುತ್ತಿದೆ.

ಎರಡನೇ ಅಲೆ ಕಾಣಿಸಿಕೊಂಡ ಬಳಿಕ ವೈರಾಣುವಿನ ತೀವ್ರತೆಗೆ ಗಂಭೀರವಾಗಿ ಅಸ್ವಸ್ಥರಾಗುವವರ ಸಂಖ್ಯೆ ಏರಿಕೆ ಕಂಡಿದೆ. ಸೋಂಕು ದೃಢ ಪ್ರಮಾಣವು ಶೇ 30ರ ಗಡಿ ದಾಟಿದೆ. ಇನ್ನೊಂದೆಡೆ, ಆಮ್ಲಜನಕದ ಕೊರತೆ ಮುಂದುವರೆದಿದ್ದು, ರೋಗಿಗಳು ಸಂಕಷ್ಟ ಎದುರಿಸಲಾರಂಭಿಸಿದ್ದಾರೆ. ಇದರಿಂದಾಗಿ ಮನೆಯಲ್ಲಿಯೇ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಪರೀಕ್ಷೆ ಮಾಡಿಕೊಳ್ಳುವ ಪಲ್ಸ್ ಆಕ್ಸಿಮೀಟರ್‌ಗೆ ಬೇಡಿಕೆ ಹೆಚ್ಚಿದೆ. ಆರೋಗ್ಯವಂತ ವ್ಯಕ್ತಿಗಳು ಕೂಡ ಮುನ್ನೆಚ್ಚರಿಕೆ ಕ್ರಮವಾಗಿ ಔಷಧ ಮಳಿಗೆಗಳಿಗೆ ತೆರಳಿ, ಖರೀದಿಸುತ್ತಿದ್ದಾರೆ.

ಕೋವಿಡ್ ಕಾಯಿಲೆ ಕಾಣಿಸಿಕೊಳ್ಳುವ ಪೂರ್ವದಲ್ಲಿ ಉತ್ತಮ ಗುಣ ಮಟ್ಟದ ಪಲ್ಸ್ ಆಕ್ಸಿಮೀಟರ್ ₹ 1,000ಕ್ಕೆ ದೊರೆಯುತ್ತಿತ್ತು. ಈಗ ಅದೇ ಸಾಧನವನ್ನು ಕೆಲವೆಡೆ ₹ 5 ಸಾವಿರದವರೆಗೂ ಮಾರಾಟ ಮಾಡಲಾಗುತ್ತದೆ. ಆನ್‌ಲೈನ್ ವೇದಿಕೆಗಳಲ್ಲಿ ₹ 1,200 ಹಾಗೂ ಅದಕ್ಕಿಂತ ಹೆಚ್ಚಿನ ದರದ ವಿವಿಧ ಕಂಪನಿಗಳ ಪಲ್ಸ್ ಆಕ್ಸಿಮೀಟರ್‌ಗಳ ಲಭ್ಯವಿದೆ. ಆದರೆ, ಲಾಕ್‌ಡೌನ್ ಜಾರಿಯಲ್ಲಿರುವ ಕಾರಣ ಅವು ನಿಗದಿತ ವಿಳಾಸ ತಲುಪುವುದು ವಿಳಂಬವಾಗುತ್ತಿದೆ. ಹೀಗಾಗಿ, ಅಗತ್ಯ ಇರುವವರು ಔಷಧ ಮಳಿಗೆಗಳಲ್ಲಿಯೇ ದುಬಾರಿ ಹಣವನ್ನು ಪಾವತಿಸಿ, ಖರೀದಿಸುತ್ತಿದ್ದಾರೆ.

ಪೂರೈಕೆಯಲ್ಲಿ ವ್ಯತ್ಯಯ: ಪಲ್ಸ್ ಆಕ್ಸಿಮೀಟರ್, ಥರ್ಮಾಮೀಟರ್ (ಉಷ್ಣಮಾಪನ) ಸೇರಿದಂತೆ ಮನೆ ಆರೈಕೆಗೆ ಒಳಗಾದವರಿಗೆ ಅಗತ್ಯವಿರುವ ಕಿಟ್‌ನ ಸಾಧನಗಳು ಔಷಧ ಮಳಿಗೆಗಳಿಗೆ ಲಾಕ್‌ಡೌನ್ ಬಳಿಕ ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ. ಮೆಡ್ ಪ್ಲಸ್ ಸೇರಿದಂತೆ ಪ್ರಮುಖ ಔಷಧ ಮಳಿಗೆಗಳಲ್ಲಿಯೇ ಇದು ದೊರೆಯುತ್ತಿಲ್ಲ. ಕೆಲ ಔಷಧ ಮಳಿಗೆಗಳಲ್ಲಿ ಎರಡರಿಂದ ಮೂರು ಪಲ್ಸ್ ಆಕ್ಸಿಮೀಟರ್‌ಗಳು ಮಾತ್ರ ಇವೆ. ಇದರಿಂದಾಗಿ ಮಳಿಗೆಗಳು ದುಬಾರಿ ದರಕ್ಕೆ ಮಾರಾಟ ಮಾಡುತ್ತಿವೆ. ಅದೇ ರೀತಿ, ₹ 200ಗೆ ಸಿಗುತ್ತಿದ್ದ ಥರ್ಮಾಮೀಟರ್‌ಗಳನ್ನು ₹ 500ರವರೆಗೂ ಮಾರಾಟ ಮಾಡಲಾಗುತ್ತಿದೆ.

‘ಪಲ್ಸ್ ಆಕ್ಸಿಮೀಟರ್‌ಗಳನ್ನು ಔಷಧ ಮಳಿಗೆಗಳು ದುಬಾರಿ ಹಣಕ್ಕೆ ಮಾರುತ್ತಿವೆ. ಐದು ಮಳಿಗೆಗಳಲ್ಲಿ ವಿಚಾರಿಸಿ, ಅಂತಿಮವಾಗಿ ₹ 4 ಸಾವಿರಕ್ಕೆ ಖರೀದಿಸಿದೆ. ಸರ್ಕಾರವು ಇದಕ್ಕೆ ಕಡಿವಾಣ ಹಾಕಿ, ಜನೌಷಧ ಮಳಿಗೆಗಳಲ್ಲಿ ಒದಗಿಸಲು ಕ್ರಮಕೈಗೊಳ್ಳಬೇಕು’ ಎಂದು ಶ್ರೀರಾಮನಗರದ ನಿವಾಸಿ ರಾಮಕೃಷ್ಣ ತಿಳಿಸಿದರು.

‘ಪ್ರತಿನಿತ್ಯ ಸರಾಸರಿ 10ರಿಂದ 15 ಮಂದಿ ಪಲ್ಸ್ ಆಕ್ಸಿಮೀಟರ್ ಬಗ್ಗೆ ವಿಚಾರಿಸುತ್ತಾರೆ. ಆದರೆ, ಬೇಡಿಕೆ ಸಲ್ಲಿಸಿದರೂ ಎರಡು ವಾರಗಳಿಂದ ಪೂರೈಕೆಯಾಗಿಲ್ಲ. ಮೊದಲು ₹ 1,500ರಿಂದ ₹ 2,000ವರೆಗೆ ಮಾರಾಟ ಮಾಡಲಾಗುತ್ತಿತ್ತು’ ಎಂದು ಭುವನೇಶ್ವರಿನಗರದಲ್ಲಿರುವ ಮೆಡ್ ಪ್ಲಸ್ ಮಳಿಗೆಯ ಔಷಧ ವಿತರಕ ಆನಂದ್ ವಿವರಿಸಿದರು.

‘ಕೋವಿಡ್ ಕಾಣಿಸಿಕೊಳ್ಳುವ ಪೂರ್ವದಲ್ಲಿ ತಿಂಗಳಿಗೆ ಒಂದು ಪಲ್ಸ್ ಆಕ್ಸಿಮೀಟರ್ ಮಾರಾಟವಾಗುವುದು ಕಷ್ಟವಿತ್ತು. ಆಗ ₹ 1,000ಕ್ಕೆ ದೊರೆಯುತ್ತಿತ್ತು. ಈಗ ಬೇಡಿಕೆ ಹೆಚ್ಚಿರುವ ಕಾರಣ ತಯಾರಿಕಾ ಕಂಪನಿಗಳು ಕೂಡ ದರ ಹೆಚ್ಚಳ ಮಾಡಿವೆ. ಈಗ ₹ 2,000ಕ್ಕೆ ಮಾರುತ್ತಿದ್ದೇವೆ’ ಎಂದು ಬ್ಯಾಂಕ್ ಕಾಲೋನಿಯಲ್ಲಿರುವ ಮನೋಜ್ ಮೆಡಿಕ್ಸ್‌ನ ಔಷಧ ವಿತರಕ ದಿನೇಶ್ ಹೇಳಿದರು.

ಔಷಧ ನಿಯಂತ್ರಕ ಅಮರೇಶ್ ತುಂಬಗಿ ಅವರು ಸಂಪರ್ಕಕ್ಕೆ ಲಭ್ಯರಿರುವುದಿಲ್ಲ.

ಜನೌಷಧ ಮಳಿಗೆಗಳಲ್ಲಿ ಲಭ್ಯವಿಲ್ಲ

ಮಾರುಕಟ್ಟೆ ದರಕ್ಕಿಂತ ಶೇ 30 ರಿಂದ ಶೇ 80 ರವರೆಗೆ ರಿಯಾಯಿತಿ ದರದಲ್ಲಿ ಔಷಧ ಒದಗಿಸುವ ಪ್ರಧಾನಮಂತ್ರಿ ಜನೌಷಧ ಮಳಿಗೆಗಳಲ್ಲಿ ಪಲ್ಸ್ ಆಕ್ಸಿಮೀಟರ್ ಮತ್ತು ಥರ್ಮಾಮೀಟರ್ ದೊರೆಯುತ್ತಿಲ್ಲ. ಅದೇ ರೀತಿ, ಈ ಮಳಿಗೆಗಳಿಗೆ ಎನ್–95 ಮುಖಗವಸುಗಳು ಕೂಡ ಪೂರೈಕೆಯಾಗುತ್ತಿಲ್ಲ. ಈ ನಡುವೆ, ಖಾಸಗಿ ಆಸ್ಪತ್ರೆಗಳು ಮನೆ ಆರೈಕೆ ಕಿಟ್‌ಗಳನ್ನು ಒದಗಿಸುತ್ತಿದ್ದು, ಇದಕ್ಕೆ ₹ 6 ಸಾವಿರದವರೆಗೆ ಪಡೆಯುತ್ತಿವೆ. ಕಿಟ್‌ನಲ್ಲಿ ಪಲ್ಸ್ ಆಕ್ಸಿಮೀಟರ್, ಥರ್ಮಾಮೀಟರ್, ಮಾಸ್ಕ್ ಮತ್ತು ಸ್ಯಾನಿಟೈಸರ್ ಇರಲಿದೆ.

‘ಪಲ್ಸ್ ಆಕ್ಸಿಮೀಟರ್ ಬಗ್ಗೆ ಪ್ರತಿನಿತ್ಯ ಹಲವಾರು ಮಂದಿ ವಿಚಾರಿಸುತ್ತಾರೆ. ಆದರೆ, ಅದು ನಮಗೆ ಪೂರೈಕೆಯಾಗುತ್ತಿಲ್ಲ. ಇದರಿಂದಾಗಿ ಖಾಸಗಿ ಔಷಧ ಮಾರಾಟ ಮಳಿಗೆಗಳಲ್ಲಿ ಈ ಸಾಧನಗಳಿಗೆ ಬೇಡಿಕೆ ಹೆಚ್ಚಿದೆ. ನಮಗೆ ಪೂರೈಕೆಯಾಗಿದ್ದಲ್ಲಿ ಗ್ರಾಹಕರಿಗೆ ಕೇವಲ ₹ 500ಕ್ಕೆ ಒದಗಿಸಲಾಗುತ್ತಿತ್ತು’ ಎಂದು ಬನಶಂಕರಿ ಮೂರನೇ ಹಂತದಲ್ಲಿರುವ ಪ್ರಧಾನ ಮಂತ್ರಿ ಜನೌಷಧ ಮಳಿಗೆಯ ಔಷಧ ವಿತರಕರೊಬ್ಬರು ತಿಳಿಸಿದರು.

ಪಲ್ಸ್ ಆಕ್ಸಿಮೀಟರ್ ಬಳಕೆ ಹೇಗೆ?



ಡಾ.ಸಿ. ನಾಗರಾಜ್

‘ಮಾರುಕಟ್ಟೆಯಲ್ಲಿ ಈಗ ಹಲವು ಕಂಪನಿಗಳ ಪಲ್ಸ್ ಆಕ್ಸಿಮೀಟರ್ ದೊರೆಯುತ್ತವೆ. ಅವುಗಳ ಗುಣಮಟ್ಟವನ್ನು ಪರಿಶೀಲಿಸಿ ಖರೀದಿಸಬೇಕು. ಸಾಮಾನ್ಯವಾಗಿ ರಕ್ತದಲ್ಲಿನ ಆಮ್ಲಜನಕ ಪ್ರಮಾಣ 95ರಿಂದ 100ರವರೆಗೆ ಇರುತ್ತದೆ. ಇದು ಎಷ್ಟಿದೆ ಎಂಬುದನ್ನು ತಿಳಿಯಲು ಪಲ್ಸ್ ಆಕ್ಸಿಮೀಟರ್ ಸಹಾಯಕ. 94 ಅಥವಾ ಅದಕ್ಕಿಂತ ಕಡಿಮೆ ಆದಲ್ಲಿ ಆಸ್ಪತ್ರೆಗೆ ತೆರಳಿ, ತಪಾಸಣೆ ಮಾಡಿಸಿಕೊಳ್ಳಬೇಕು’ ಎಂದು ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

‘ದಿನಕ್ಕೆ ಮೂರು ಬಾರಿ ಪಲ್ಸ್ ಆಕ್ಸಿಮೀಟರ್‌ನಿಂದ ಪರೀಕ್ಷೆ ಮಾಡಿಕೊಳ್ಳಬೇಕು. ಈ ಪರೀಕ್ಷೆ ಮಾಡಿಕೊಳ್ಳುವ ಮೊದಲು ಯುವಜನತೆ ಆರು ನಿಮಿಷ ಹಾಗೂ ವೃದ್ಧರು ಮೂರು ನಿಮಿಷ ಓಡಾಡಬೇಕು. ಮನೆಯಲ್ಲಿ ಯಾರಾದರೂ ಕೋವಿಡ್ ಪೀಡಿತರಾದರೆ ಉಳಿದ ಸದಸ್ಯರು ಕೂಡ ಲಕ್ಷಣಗಳು ಇರದಿದ್ದರೂ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಪರೀಕ್ಷೆ ಮಾಡಿಕೊಳ್ಳುತ್ತಿರುವುದು ಒಳ್ಳೆಯದು’ ಎಂದು ಹೇಳಿದರು.

‘ಸಂಕಷ್ಟದಲ್ಲಿ ಸೇವೆ ಒದಗಿಸಿದ ಸಮಾಧಾನ’

ಪ್ರಜಾವಾಣಿ ವಾರ್ತೆ

ಶುಶ್ರೂಷಕರ ಅಂತರಂಗ

ಬೆಂಗಳೂರು: ‘ಕೋವಿಡ್ ಪೂರ್ವದ ಪರಿಸ್ಥಿತಿಗೆ ಹೋಲಿಸಿದಲ್ಲಿ ಈಗ ವಿವಿಧ ಸವಾಲುಗಳು ಮತ್ತು ಸಮಸ್ಯೆಗಳನ್ನು ಎದುರಿಸಿ ಸೇವೆ ನೀಡಬೇಕಾಗಿದೆ. ಈ ಸಂದರ್ಭದಲ್ಲಿ ಭಯಪಟ್ಟು ಹಿಂದೇಟು ಹಾಕಿದರೆ ನಮ್ಮ ವೃತ್ತಿಗೆ ಅರ್ಥ ಇರುವುದಿಲ್ಲ. ಪ್ರತಿಯೊಬ್ಬರಿಗೂ ಕುಟುಂಬ ಇರುತ್ತದೆ. ಆದರೆ, ಈಗ ರೋಗಿಗಳಿಗೆ ಉತ್ತಮ ಆರೈಕೆ ಹಾಗೂ ರೋಗದ ವಿರುದ್ಧದ ಹೋರಾಟ ನಮ್ಮ ಆದ್ಯತೆಯಾಗಿದೆ.’

‘ಕೋವಿಡ್ ಮೊದಲನೇ ಅಲೆಗೆ ಹೋಲಿಸಿದರೆ ಎರಡನೇ ಅಲೆ ಹೆಚ್ಚಿನ ತೀವ್ರತೆ ಹೊಂದಿದೆ. ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ನಮ್ಮ ಜತೆಗೆ ಕುಟುಂಬದ ಸದಸ್ಯರಿಗೆ ಕೂಡ ಅಪಾಯ ಇರಲಿದೆ. ಆರು ಗಂಟೆಗೂ ಅಧಿಕ ಅವಧಿ ವೈಯಕ್ತಿಕ ಸುರಕ್ಷಾ ಸಾಧನಗಳನ್ನು (ಪಿಪಿಇ ಕಿಟ್) ಧರಿಸಿಯೇ ಸೇವೆ ನೀಡಬೇಕಾಗುತ್ತದೆ’

‘ಹಾಗಾಗಿ, ಮನೆಯಿಂದ ಹೊರಡುವಾಗಲೇ ಸಾಕಷ್ಟು ನೀರು ಹಾಗೂ ತಿಂಡಿಯನ್ನು ಸೇವಿಸಿ ಹೊರಡುತ್ತೇವೆ. ಕರ್ತವ್ಯಕ್ಕೆ ಹಾಜರಾದ ಬಳಿಕ ಊಟ–ತಿಂಡಿಗೆ ಸಮಯ ಸಿಗುವುದಿಲ್ಲ. ಆಸ್ಪತ್ರೆಗೆ ದಾಖಲಾದ ಪ್ರತಿಯೊಬ್ಬ ರೋಗಿಯನ್ನೂ ಉಳಿಸಿಕೊಳ್ಳಲು ನಮ್ಮ ಕೈಲಾದ ಪ್ರಯತ್ನವನ್ನು ಮಾಡುತ್ತೇವೆ. ಇದನ್ನು ಸಾರ್ವಜನಿಕರು ಅರ್ಥಮಾಡಿಕೊಳ್ಳಬೇಕು.’



ಗೀತಾ

‘ಕೋವಿಡ್ ವಿರುದ್ಧದ ಹೋರಾಟದಲ್ಲಿ ಹಗಲಿರುಳು ಶ್ರಮಿಸುತ್ತಿದ್ದೇವೆ. ಕುಟುಂಬದ ಜತೆಗೆ ಸಮಯ ಕಳೆಯಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಬೇಸರವಿದೆ. ಆದರೆ, ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದ ಪರಿಸ್ಥಿತಿಯಲ್ಲಿ ಕೆಲವೊಂದು ಹೊಂದಾಣಿಕೆಗಳನ್ನು ಮಾಡಿಕೊಂಡು ಸಾಗಬೇಕಾಗಿದೆ’

ಪರಿಚಯ

ಹೆಸರು: ಗೀತಾ
ಊರು: ಬೆಂಗಳೂರು
ವೃತ್ತಿ: ಶುಶ್ರೂಷಾಧಿಕಾರಿ
ಸೇವೆ: 24 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ಕೆ.ಸಿ.ಜನರಲ್ ಆಸ್ಪತ್ರೆ, ಬೆಂಗಳೂರು

'ಸರ್ಕಾರದ ತನಿಖಾ ಸಮಿತಿಗಳು ರದ್ದಾಗಲಿ'

ಚಾಮರಾಜನಗರ: ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಕೋವಿಡ್ ರೋಗಿಗಳು ಮೃತಪಟ್ಟ ಘಟನೆ ಕುರಿತು, ಹೈಕೋರ್ಟ್ ರಚಿಸಿರುವ ನ್ಯಾಯಮೂರ್ತಿಗಳ ಸಮಿತಿ ತನಿಖೆಯೇ ಸೂಕ್ತ, ಸರ್ಕಾರ, ತಾನು ನೇಮಿಸಿರುವ ಎಲ್ಲ ಸಮಿತಿಗಳನ್ನು ರದ್ದುಗೊಳಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಮಂಗಳವಾರ ಒತ್ತಾಯಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿ, 'ಸರ್ಕಾರ, ಕಾರ್ಯಾಂಗ ಸರಿಯಾಗಿ ಕಾರ್ಯನಿರ್ವಹಿಸಿದ್ದರೆ ನ್ಯಾಯಾಂಗ ಮಧ್ಯ ಬರುತ್ತಿರಲಿಲ್ಲ' ಎಂದರು.

'ರಾಜ್ಯದ ಬಿಜೆಪಿಯ 25 ಸಂಸದರು ದನಿ ಇಲ್ಲದವರಾಗಿದ್ದಾರೆ. ಇವರು ರಾಜ್ಯಕ್ಕೆ ಬೇಕಾದ ಆಮ್ಲಜನಕವನ್ನು ಕೇಂದ್ರದಿಂದ ದೊರಕಿಸಿಕೊಡುವಲ್ಲಿ, ಕೋವಿಡ್ ವ್ಯಾಕ್ಸಿನ್ ವಿಚಾರದಲ್ಲಿ ದನಿ ಎತ್ತಿಲ್ಲ' ಎಂದು ಹರಿಹಾಯ್ದರು.

ಜಿಲ್ಲೆಯಲ್ಲಿ ಇಂತಹ ದುರಂತ ನಡೆದ ಮೇಲೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭೇಟಿ ನೀಡಲಿಲ್ಲ. ಮೃತರ ಕುಟುಂಬಗಳಿಗೆ ಪರಿಹಾರವನ್ನೂ ಘೋಷಿಸಿಲ್ಲ' ಎಂದರು.

ನಿಮಿಷಕ್ಕೆ 500 ಲೀಟರ್ ದ್ರವೀಕೃತ ಆಮ್ಲಜನಕ ಉತ್ಪಾದನೆ ● ಕೆಜಿಎಫ್‌ನಲ್ಲಿ ಸ್ಥಾಪನೆ

ಆಮ್ಲಜನಕ ಘಟಕ ಕಾರ್ಯಾರಂಭಕ್ಕೆ ಸಜ್ಜು

● ಜೆ.ಆರ್.ಗಿರೀಶ್

ಕೋಲಾರ: ಕೋವಿಡ್ ಸ್ಥಿತಿ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮಂಜೂರು ಮಾಡಿರುವ ನೂತನ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕದ ಕಾರ್ಯಾರಂಭಕ್ಕೆ ಜಿಲ್ಲೆಯ ಕೆಜಿಎಫ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಕ್ಷಣಗಣನೆ ಆರಂಭವಾಗಿದೆ.

ಇದಕ್ಕಾಗಿ ಇಸ್ರೇಲ್‌ನಿಂದ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಕೆಜಿಎಫ್ ಆಸ್ಪತ್ರೆಯಲ್ಲಿ ಘಟಕದ ಜೋಡಣೆ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದಿದ್ದು, ಬುಧವಾರ (ಮೇ 12) ಆಮ್ಲಜನಕ ಉತ್ಪಾದನೆ ಕಾರ್ಯವು ಆರಂಭವಾಗುವ ನಿರೀಕ್ಷೆಯಿದೆ.

ವೈದ್ಯಕೀಯ ಆಮ್ಲಜನಕದ ಕೊರತೆಯನ್ನು ನೀಗಿಸಲು ಕೇಂದ್ರ ಸರ್ಕಾರವು ಪ್ರಧಾನಿ ಅವರು ಪ್ರತಿನಿಧಿಸುವ ಉತ್ತರ ಪ್ರದೇಶದ ವಾರಾಣಸಿ ಲೋಕಸಭಾ ಕ್ಷೇತ್ರ ಸೇರಿದಂತೆ 3 ಕಡೆಯಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪನೆಗೆ ಹಸಿರು ನಿಶಾನೆ ತೋರಿತ್ತು. ವಾರಾಣಸಿ ಜತೆಗೆ ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ಮತ್ತು ಕೆಜಿಎಫ್ ಆಸ್ಪತ್ರೆಯಲ್ಲಿ ಘಟಕ ಸ್ಥಾಪನೆಗೆ ಕೇಂದ್ರ ಆರೋಗ್ಯ ಸಚಿವಾಲಯ ಸಮ್ಮತಿಸಿತ್ತು.



ಕೋವಿಡ್ ಪರಿಸ್ಥಿತಿ ಗಂಭೀರವಾಗಿರುವ ಸಂದಿಗ್ಧ ಸ್ಥಿತಿಯಲ್ಲಿ ಕೇಂದ್ರವು ಜಿಲ್ಲೆಯ ಕೆಜಿಎಫ್ ಆಸ್ಪತ್ರೆಗೆ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕ ನೀಡಿರುವುದು ಜಿಲ್ಲೆಯ ಜನರ ಸೌಭಾಗ್ಯ

ಎಸ್. ಮುನಿಸ್ವಾಮಿ, ಸಂಸದ

ಈ ಘಟಕವು ನಿಮಿಷಕ್ಕೆ 500 ಲೀಟರ್ ದ್ರವೀಕೃತ ಆಮ್ಲಜನಕ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಕೆಜಿಎಫ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ವೈದ್ಯಕೀಯ ಆಮ್ಲಜನಕ ಮತ್ತು ವೆಂಟಿಲೇಟರ್ ಸಂಪರ್ಕವುಳ್ಳ 30 ಬೆಡ್, ಆಮ್ಲಜನಕ ಸೌಲಭ್ಯವುಳ್ಳ 70 ಬೆಡ್‌ಗಳಿವೆ. ಈ ಘಟಕದಲ್ಲಿ ಆಸ್ಪತ್ರೆಯ ಅಗತ್ಯತೆಗೂ ಹೆಚ್ಚು ಆಮ್ಲಜನಕ ಉತ್ಪಾದನೆಯಾಗಲಿದೆ.

2 ದಶಕದಿಂದ ಬಂದ್ ಆಗಿರುವ ಕೆಜಿಎಫ್‌ನ ಚಿನ್ನದ ಗಣಿ (ಬಿಜಿಎಂಎಲ್) ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲಾಗುತ್ತಿದೆ. ಅಲ್ಲಿಗೂ ನೂತನ ಘಟಕದಿಂದ ಆಮ್ಲಜನಕ ಪೂರೈಸಲು ಉದ್ದೇಶಿಸಲಾಗಿದೆ. ಜತೆಗೆ, ಜಿಲ್ಲೆಯ ಇತರೆ ಕೋವಿಡ್ ಆಸ್ಪತ್ರೆಗಳಿಗೂ ಸಿಲಿಂಡರ್‌ಗಳಲ್ಲಿ ಆಮ್ಲಜನಕವನ್ನು ರವಾನಿಸುವ ಚಿಂತನೆಯಿದೆ.

ಹೋರಾಟಕ್ಕೆ ಸಿಕ್ಕ ಫಲ: ಕೋಲಾರ ಜಿಲ್ಲೆಗೆ ಹೋಲಿಸಿದರೆ ತುಮಕೂರು ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆ ಮತ್ತು ಸಾವಿನ ಪ್ರಮಾಣ ಹೆಚ್ಚಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಅಂತಿಮ ಕ್ಷಣದಲ್ಲಿ ಆಮ್ಲಜನಕ ಘಟಕವನ್ನು ತುಮಕೂರಿಗೆ ಸ್ಥಳಾಂತರಿಸುವ ನಿರ್ಧಾರ ಕೈಗೊಂಡಿತ್ತು.

ಈ ಸಂಗತಿ ತಿಳಿದು ಸಂಸದ ಎಸ್. ಮುನಿಸ್ವಾಮಿ ಅವರು ಘಟಕವನ್ನು ಜಿಲ್ಲೆಯಲ್ಲೇ ಉಳಿಸಿಕೊಳ್ಳಲು ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಮತ್ತು ರಾಜ್ಯ ಸರ್ಕಾರದ ಮಟ್ಟದಲ್ಲಿ ನಡೆಸಿದ ಹೋರಾಟ ಫಲ ನೀಡಿದೆ.

ಸದ್ಯ ಜಿಲ್ಲೆಗೆ ಬಳ್ಳಾರಿ ಮತ್ತು ಬೆಂಗಳೂರಿನಿಂದ ಆಮ್ಲಜನಕ ತರಿಸಿಕೊಳ್ಳಲಾಗುತ್ತಿದೆ. ಕೆಜಿಎಫ್ ಆಸ್ಪತ್ರೆಯಲ್ಲಿ ನೂತನ ಘಟಕ ಕಾರ್ಯಾರಂಭ ಮಾಡಿದರೆ ಹೊರ ಜಿಲ್ಲೆಗಳ ಮೇಲಿನ ಅವಲಂಬನೆ ಕೊಂಚ ತಗ್ಗಲಿದೆ.



ಇಸ್ರೇಲ್‌ನಿಂದ ಆಮದಾಗಿರುವ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕವನ್ನು ಕೋಲಾರ ಜಿಲ್ಲೆಯ ಕೆಜಿಎಫ್ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಕ್ರೇನ್ ಸಹಾಯದಿಂದ ಕೆಳಗಿಳಿಸಲಾಯಿತು

ಬೀದಿನಾಯಿಗಳು ಕಚ್ಚಿ ಮಹಿಳೆ ಸಾವು

ಚಿಟಗುಪ್ಪ (ಬೀದರ್ ಜಿಲ್ಲೆ): ಹೊಲಕ್ಕೆ ಹೋಗುತ್ತಿದ್ದ ಮಹಿಳೆಯ ಮೇಲೆ ಬೀದಿ ನಾಯಿಗಳು ದಾಳಿ ಮಾಡಿ ಕಚ್ಚಿದ್ದರಿಂದ ಆಕೆ ಮೃತಪಟ್ಟ ಘಟನೆ ಮಂಗಳವಾರ ಮಧ್ಯಾಹ್ನ ಸಂಭವಿಸಿದೆ. ಇಲ್ಲಿಯ ಫಾತ್ಮಾಪುರ ನಿವಾಸಿ ಶಮಿನಾ ಬೇಗಂ ಅಹಮದ್ ಪಾಶಾ (22) ಮೃತರು.

ದಾಳಿಯಾದ ತಕ್ಷಣ ಅವರನ್ನು ಆಸ್ಪತ್ರೆಗೆಸೇರಿಸಿದ್ದು, ಚಿಕಿತ್ಸೆಗೆಸ್ಪಂದಿಸದೇಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ವಾಹನ ಬಳಕೆಗೆ ನಿರ್ಬಂಧ, ಪೊಲೀಸರ ಕಾರ್ಯವೈಖರಿಯಿಂದ ಗ್ರಾಮಸ್ಥರು ಹೈರಾಣ

ಗುಡ್ಡಗಾಡು, ಕುಗ್ರಾಮಗಳಿಗೆ ಸಾಮಗ್ರಿ ಒಯ್ಯುವ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ತಡೆಯಲು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಹನಗಳ ಬಳಕೆಗೆ ನಿರ್ಬಂಧ ಹೇರಿದ್ದು ಇದರಿಂದ ಗುಡ್ಡಗಾಡು ಪ್ರದೇಶಗಳು, ಪಟ್ಟಣಗಳಿಂದ ದೂರ ಇರುವ ಗ್ರಾಮಗಳ ಜನರಿಗೆ ಸಮಸ್ಯೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ನಗರ ಹಾಗೂ ಪಟ್ಟಣ ಪ್ರದೇಶಗಳ ಒಳಗೆ ವಾಹನಗಳ ಪ್ರವೇಶ ನಿರ್ಬಂಧಿಸಿದ್ದರಿಂದ ಜನರು ಸಾಮಗ್ರಿ ಹೊತ್ತೊಯ್ಯುವ ಸಂಕಷ್ಟ ಎದುರಾಗಿದೆ. ಜನರು ಅಕ್ಕಿ ಚೀಲ, ಗ್ಯಾಸ್ ಸಿಲಿಂಡರ್, ತರಕಾರಿ, ಬೇಳೆ–ಕಾಳುಗಳನ್ನು ದೂರದ ಮನೆಗಳಿಗೆ ಕಷ್ಟಪಟ್ಟು ಹೊತ್ತೊಯ್ದರು. ಕಾಫಿ ತೋಟಗಳಲ್ಲಿ ಕಾರ್ಮಿಕರು ಇನ್ನಿಲ್ಲದ ಪಡಿಪಾಟಲು ಪಡುತ್ತಿದ್ದಾರೆ.

'ತೋಟದ ಮಾಲೀಕರ ವಾಹನದಲ್ಲೂ ಪಟ್ಟಣ ಪ್ರದೇಶಕ್ಕೆ ಬರುವಂತಿಲ್ಲ. ಇತ್ತ, ಬಾಡಿಗೆ ಆಟೊಗಳಲ್ಲೂ ಧಾವಿಸುವಂತಿಲ್ಲ. ನಿಗದಿಪಡಿಸಿದ ಬೆಳಿಗ್ಗೆ 6ರಿಂದ 10 ಗಂಟೆಯ ಒಳಗೆ ದೂರದ ಶ್ರೀಮಂಗಲದಿಂದ ಗೋಣಿಕೊಪ್ಪಲಿಗೆ ನಡೆದು ಬರುವುದಾದರೂ ಹೇಗೆ?' ಎಂದು ಕಾರ್ಮಿಕರು ಅಳಲು ತೋಡಿಕೊಳ್ಳುತ್ತಾರೆ.



ಕೊಡಗು ಜಿಲ್ಲೆ ಗೋಣಿಕೊಪ್ಪಲಿನಲ್ಲಿ ಗ್ರಾಹಕರೊಬ್ಬರು ಸೋಮವಾರ ಅಕ್ಕಿ ಚೀಲ, ತರಕಾರಿ ಕಷ್ಟಪಟ್ಟು ಒಯ್ಯುತ್ತಿರುವುದು

'ನಿಯಮದಲ್ಲಿ ಕೆಲವೊಂದು ಮಾರ್ಪಾಡು ಮಾಡಿಕೊಳ್ಳಲಾಗಿದೆ. ವಾಹನಗಳಲ್ಲಿ ಸಾಮಗ್ರಿ ಕೊಂಡೊಯ್ಯಲು ಬುಧವಾರ ಅವಕಾಶ ಕಲ್ಪಿಸಲಾಗುವುದು' ಎಂದು ಜಿಲ್ಲಾಡಳಿತ ತಿಳಿಸಿದೆ.

ಸಾಮಗ್ರಿ ಖರೀದಿಸಲು ಹತ್ತಿಪ್ಪತ್ತು ಕಿ.ಮೀ ನಡಿಗೆ!

ಶಿವಮೊಗ್ಗ: ಲಾಕ್‌ಡೌನ್ ಕಠಿಣ ನಿರ್ಬಂಧಗಳ ಪರಿಣಾಮ ಅರಣ್ಯ ಪ್ರದೇಶಗಳ ಒಳಗೆ ಬದುಕುವ ಮಲೆನಾಡಿಗರು ಹಲವು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅಗತ್ಯ ಸಾಮಗ್ರಿ ಖರೀದಿಗೆ ಹತ್ತಿಪ್ಪತ್ತು ಕಿ.ಮೀ ನಡೆಯಬೇಕಾದ ಸ್ಥಿತಿ ಇದೆ.

ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ, ಸಾಗರದ ಅರಣ್ಯ ಪ್ರದೇಶಗಳ ಒಳಗಿನ ಒಂದು ಊರೆಂದರೆ ಹತ್ತಾರು ಕಿ.ಮೀ. ವಿಸ್ತಾರದಲ್ಲಿ ಇರುವ ಏಳೆಂಟು ಮನೆಗಳ ಸಮೂಹ. ಇಲ್ಲಿ ಸಾಮಗ್ರಿ ಖರೀದಿಸಲು ಹತ್ತಾರು ಕಿ.ಮೀ. ಸಾಗಬೇಕು. ತೀರ್ಥಹಳ್ಳಿ ತಾಲ್ಲೂಕಿನ ಗಾರ್ಡರ ಗದ್ದೆಯ ಜನರು ಜ್ವರದ ಮಾತ್ರೆ ತೆಗೆದುಕೊಳ್ಳಲೂ 10 ಕಿ.ಮೀ. ದೂರದ ನಾಲೂರಿಗೆ, ಮಲ್ಲಂದೂರಿನ ಜನರು ಬೆಂಕಿ ಪೊಟ್ಟಣ ಬೇಕೆಂದರೂ 8 ಕಿ.ಮೀ. ದೂರದ ಆಗುಂಬೆಗೆ ಬರಬೇಕು. ಸಾಗರ ತಾಲ್ಲೂಕಿನ ಜೆನ್ನಿ, ಸುಂಕದ ಮನೆ, ಕುಡುಗುಂಜಿ ಜನರು 18 ಕಿ.ಮೀ. ದೂರದ ಜೋಗ, ಕಾರ್ಗಲ್‌ಗೆ ತೆರಳಬೇಕು. ವಾಹನ ಬಳಕೆ ಇಲ್ಲದೆ ಅಲ್ಲಿನ ಜನರು ಅಷ್ಟು ದೂರ ನಡೆದೇ ಬರುತ್ತಿದ್ದಾರೆ.

'ಮಲ್ಲಂದೂರಿನ ಶೇ 99ರಷ್ಟು ಜನರು ಕೂಲಿ ಕಾರ್ಮಿಕರು. ನಿರ್ಬಂಧಗಳ ಕಾರಣ ಆಗುಂಬೆಗೆ ಬಂದು ಹೋಗಲು ಹೆದರುತ್ತಿದ್ದಾರೆ. ಸರ್ಕಾರದ ನಿಯಮಗಳಿಂದ ಮಲೆನಾಡಿನ ಜನರಿಗೆ ಸಾಕಷ್ಟು ತೊಂದರೆಯಾಗಿದೆ' ಎನ್ನುತ್ತಾರೆ ಆಗುಂಬೆ ಗ್ರಾಮ ಪಂಚಾಯಿತಿ ಸದಸ್ಯ ಗುಡ್ಡೇಕೇರಿ ಶಶಾಂಕ್ ಹೆಗ್ಡೆ.

'ಭಾರತೀಪುರದಲ್ಲಿ ನಮ್ಮ ಮನೆ ಇದೆ. ತೀರ್ಥಹಳ್ಳಿ ಪಟ್ಟಣ ದಾಟಿ, ಮುತ್ತಿಹರಿಹರಪುರದಲ್ಲಿ ತೋಟವಿದೆ. ನಿತ್ಯ ಅಲ್ಲಿಗೆ ಹೋಗಿ ಬರಬೇಕು. ಪೊಲೀಸರಿಗೆ ವಿವರ ನೀಡಿ ಸಾಕಾಗಿದೆ' ಎನ್ನುತ್ತಾರೆ ರೈತ ಕಡಿದಾಳ್ ದಯಾನಂದ್.

ಉತ್ತರಕನ್ನಡ: ಈವರೆಗೆ ಸುಸೂತ್ರ

ಉತ್ತರ ಕನ್ನಡ ಜಿಲ್ಲೆಯಲ್ಲಿ ಈವರೆಗೆ ದಿನಸಿ ಪೂರೈಕೆಯಲ್ಲಿ ಕೊರತೆಯಾಗಿಲ್ಲ. ಬಹುತೇಕ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಸದಸ್ಯರ ಮನೆ ಬಾಗಿಲಿಗೇ ಅಗತ್ಯ ವಸ್ತು ಪೂರೈಸುತ್ತಿವೆ.

ಶಿರಸಿ ತಾಲ್ಲೂಕಿನ ಕುಗ್ರಾಮಗಳಾದ ಮತ್ತಿಘಟ್ಟಾ, ದೇವನಳ್ಳಿ ಭಾಗದಲ್ಲಿ ಈ ಕ್ರಮ ಜಾರಿಯಲ್ಲಿದೆ. ಉಳಿದ ಗ್ರಾಮಗಳಲ್ಲೂ ಇಂತಹ ಪ್ರಯತ್ನ ನಡೆದಿದೆ. ಸಿದ್ದಾಪುರದಲ್ಲಿ ದಿನಸಿ ವಸ್ತುಗಳಿಗೆ ಸಮಸ್ಯೆಯಾದರೆ ಸಹಾಯವಾಣಿ ಸಂಪರ್ಕಿಸಲು ಅಧಿಕಾರಿಗಳು ಸೂಚಿಸಿದ್ದಾರೆ.

ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಗತ್ಯ ಸಾಮಗ್ರಿಗಳ ಖರೀದಿಗೆ ಜನರು ವಾಹನ ಬಳಸಲು ಮಂಗಳವಾರ ಅವಕಾಶ ನೀಡಲಾಗಿತ್ತು. ಎಲ್ಲಿಯೂ ಲಾಠಿ ಪ್ರಹಾರ ನಡೆದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಪೇಟೆಯೊಳಗೆ ವಾಹನ ಸಂಚಾರಕ್ಕೆ ಪೊಲೀಸರು ತಡೆಒಡ್ಡಿದ್ದರು.

ಮಳೆಯಲ್ಲಿ ಬರುವ ಕಷ್ಟ: ಪಶ್ಚಿಮ ಘಟ್ಟಗಳ ಅಂಚಿನಲ್ಲಿರುವ ಹಾಸನ ಸಕಲೇಶಪುರ ತಾಲ್ಲೂಕಿನ ಯಸಳೂರು, ಹೆತ್ತೂರು ಹಾಗೂ ಹಾನುಬಾಳು ಹೋಬಳಿಯು ಗುಡ್ಡಗಾಡು ಪ್ರದೇಶದಿಂದಲೇ ಕೂಡಿದೆ. 20ಕ್ಕೂ ಹೆಚ್ಚು ಹಳ್ಳಿಗಳ ಜನರು ಅಗತ್ಯ ವಸ್ತುಗಳ ಖರೀದಿಗೆ ಸಕಲೇಶಪುರ ಪಟ್ಟಣಕ್ಕೆ ಬರಬೇಕಾದರೆ 10 ರಿಂದ 15 ಕಿ.ಮೀ ಬರಬೇಕು.

ಖರೀದಿಗೆ ನಡೆದು ಹೋಗಬೇಕೆಂಬ ನಿಯಮ, ಪೊಲೀಸರ ಕಾರ್ಯಶೈಲಿಯಿಂದ ಜನರು ಹೈರಾಣಾಗಿದ್ದಾರೆ. ಕೆಲ ದಿನಗಳಿಂದ ಮಲೆನಾಡು ಭಾಗದಲ್ಲಿ ಮಳೆ ಬರುತ್ತಿದ್ದು, ಕೃಷಿ ಚಟುವಟಿಕೆಗೆ ಸಂಬಂಧಿಸಿದ ವಸ್ತುಗಳನ್ನು ಖರೀದಿಸಲು ಕಷ್ಟವಾಗುತ್ತಿದೆ.

'ಲಾಕ್‌ಡೌನ್ ಅವಧಿಯಲ್ಲಿ ಗುಡ್ಡಗಾಡು ಪ್ರದೇಶದ ಜನರು ದಿನಸಿ ಖರೀದಿಸಲು ತೊಂದರೆ ಆಗದಂತೆ ಕ್ರಮ ವಹಿಸಲಾಗುವುದು. ಗ್ರಾಮಗಳ ಸಮೀಪದಲ್ಲೇ ದಿನಸಿ ಖರೀದಿಸಲು ವ್ಯವಸ್ಥೆ ಮಾಡುವ ಕುರಿತು ಹಿರಿಯ ಅಧಿಕಾರಿಗಳ ಜತೆ ಚರ್ಚಿಸಲಾಗುವುದು' ಎಂದು ಸಕಲೇಪುರ ತಾಲ್ಲೂಕಿನ ಉಪ ತಹಶೀಲ್ದಾರ್ ಕೆ.ಆರ್.ಗಂಗಾಧರ್ ತಿಳಿಸಿದರು.

ನಿಧನ ವಾರ್ತೆ

ಚೆನ್ನಬಸವ ಶ್ರೀ

ಕುಂದಗೋಳ (ಧಾರವಾಡ ಜಿಲ್ಲೆ): ನಡೆದಾಡುವ ದೇವರೆಂದೇ ಖ್ಯಾತರಾಗಿದ್ದ ಕುಂದಗೋಳತಾಲ್ಲೂಕಿನ ತೀರ್ಥ ಕಟ್ನೂರ ಗ್ರಾಮಗಳ ಜ್ಞಾನ ಯೋಗಿ ಚೆನ್ನಬಸವ ದೇಶಿಕೇಂದ್ರ ಸ್ವಾಮೀಜಿ (44) ಮಂಗಳವಾರ ಹೃದಯಾಘಾತದಿಂದ ಲಿಂಗೈಕ್ಯರಾದರು. ಕಲಘಟಗಿ ತಾಲ್ಲೂಕಿನ ಮುತ್ತಿಗೆ ಗ್ರಾಮದವರು.



ಬುಧವಾರ ನಸುಕಿನ 4ಕ್ಕೆ ಹುಬ್ಬಳ್ಳಿ ನೇಕಾರ ನಗರದ ಮಠದ ಆವರಣದಲ್ಲಿ ಇವರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ತೀರ್ಥ ಗ್ರಾಮದ ಗುರು ಪಾಟೀಲ ತಿಳಿಸಿದ್ದಾರೆ.

ಮಳೆ: ಸಿಡಿಲು ಬಡಿದು ಬಾಲಕ ಸಾವು

ಬೆಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳು, ಕಲಬುರ್ಗಿ, ಚಿತ್ರದುರ್ಗ, ಕೊಪ್ಪಳಸೇರಿ ವಿವಿಧಜಿಲ್ಲೆಗಳಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ. ಯಾದಗಿರಿ ಜಿಲ್ಲೆಯ ಕಕ್ಕೇರಾದಲ್ಲಿ ಸಿಡಿಲು ಬಡಿದು ಬಾಲಕನೊಬ್ಬ ಮೃತಪಟ್ಟಿದ್ದಾನೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಮುಡಿಪು, ಪುತ್ತೂರು ವಿವಿಧೆಡೆ ಉತ್ತಮ, ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ಧಾರಾಕಾರ ಮಳೆಯಾಗಿದ್ದು, ಹಳ್ಳಗಳಲ್ಲಿ ನೀರಿನ ಹರಿವು ಹೆಚ್ಚಿದೆ.

ಯಾದಗಿರಿ ಜಿಲ್ಲೆ ಕೆಂಭಾವಿ, ಹುಣಸಗಿ, ಕಲಬುರ್ಗಿ ಜಿಲ್ಲೆಯ ವಾಡಿಯಲ್ಲಿ ಗಾಳಿಗೆ ಮನೆಗಳ ಹೆಂಚು ಹಾರಿವೆ. ಕೊಪ್ಪಳ ಜಿಲ್ಲೆ ಹನಮಸಾಗರದಲ್ಲಿ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ. ರಾಯಚೂರು ಜಿಲ್ಲೆಯ ಕವಿತಾಳ ಪಟ್ಟಣ ಹಾಗೂ ಸುತ್ತಮುತ್ತ ಬಾಳೆ, ಮಾವು, ನುಗ್ಗೆ ಗಿಡಗಳು ನೆಲಕ್ಕುರುಳಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆಯಿಂದಾಗಿ ಕೃಷಿ ಚಟುವಟಿಕೆ ಚುರುಕುಪಡೆದಿದೆ.

14ರಂದು ಚಂಡಮಾರುತ, ಭಾರಿ ಮಳೆ ಸಾಧ್ಯತೆ

ಕಾರವಾರ: ಅರಬ್ಬಿ ಸಮುದ್ರದ ವಾಯವ್ಯ ಭಾಗದಲ್ಲಿ ಮೇ 14ರಂದು ವಾಯುಭಾರ ಕುಸಿಯುವ ಮತ್ತು 15ರಂದು ಅದು ಚಂಡಮಾರುತವಾಗಿ ಪರಿವರ್ತನೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹೈಕೋರ್ಟ್ ಕಣ್ಗಾವಲಿನ ತನಿಖೆಯೇ ಸೂಕ್ತ

ಬೆಂಗಳೂರು: ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆ ಸೇರಿ ಆ ಜಿಲ್ಲೆಯಲ್ಲಿ ಮೇ 3ರಂದು ಆಮ್ಲಜನಕದ ಕೊರತೆಯಿಂದ 24 ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ ಎಂಬ ಆರೋಪದ ಕುರಿತು ಹೈಕೋರ್ಟ್ ನಿಗಾವಣೆಯಲ್ಲಿ ತನಿಖೆ ನಡೆಸುವುದೇ ಸೂಕ್ತ ಎಂಬ ಅಭಿಪ್ರಾಯವನ್ನು ಮತ್ತಷ್ಟು ಮಂದಿ ನಿವೃತ್ತ ನ್ಯಾಯಮೂರ್ತಿಗಳು, ನಿವೃತ್ತ ಅಧಿಕಾರಿಗಳೂ ವ್ಯಕ್ತಪಡಿಸಿದ್ದಾರೆ.

ಗೊಂದಲಕ್ಕೆ ಆಸ್ಪದ ನೀಡಬಾರದು

ಹೈಕೋರ್ಟ್ ಸಾಂವಿಧಾನಿಕ ಸಂಸ್ಥೆ. ಇಂತಹ ಪ್ರಕರಣಗಳಲ್ಲಿ ಮಧ್ಯಪ್ರವೇಶ ಮಾಡಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಸಂವಿಧಾನದ 226ನೇ ವಿಧಿಯ ಅಡಿಯಲ್ಲಿ ಹೈಕೋರ್ಟ್‌ಗೆ ಅಧಿಕಾರವಿದೆ. ಚಾಮರಾಜನಗರ ಪ್ರಕರಣದಲ್ಲಿ ಹೈಕೋರ್ಟ್ ವಿಚಾರಣೆ ಆರಂಭಿಸಿ, ತನಿಖೆಗೆ ಸಮಿತಿಯೊಂದನ್ನು ನೇಮಿಸುವ ಇಂಗಿತ ವ್ಯಕ್ತಪಡಿಸಿತ್ತು. ಅದೇ ಸಮಯದಲ್ಲಿ ಸರ್ಕಾರ ಪ್ರತ್ಯೇಕ ನ್ಯಾಯಾಂಗ ತನಿಖೆಗೆ ಆಯೋಗ ನೇಮಿಸಿದೆ. ಸರ್ಕಾರದ ಆಯೋಗ ನೇಮಿಸಿದ್ದರೂ, ಹೈಕೋರ್ಟ್ ಇಬ್ಬರು ನಿವೃತ್ತ ನ್ಯಾಯಮೂರ್ತಿಗಳ ವಿಶೇಷ ಸಮಿತಿ ನೇಮಿಸಿದೆ. ಇಂತಹ ಸಂದರ್ಭದಲ್ಲಿ ಹೈಕೋರ್ಟ್ ಆದೇಶದಂತೆಯೇ ಮುಂದುವರಿಯಬೇಕು.




ಹೈಕೋರ್ಟ್ ಸಮಿತಿಯಲ್ಲಿರುವ ಎ.ಎನ್.ವೇಣುಗೋಪಾಲ ಗೌಡ ಮತ್ತು ಕೆ.ಎನ್. ಕೇಶವ ನಾರಾಯಣ ಹಾಗೂ ಸರ್ಕಾರ ನೇಮಿಸಿರುವ ಆಯೋಗದ ಮುಖ್ಯಸ್ಥರಾಗಿರುವ ಬಿ.ಎ. ಪಾಟೀಲ್ ಮೂವರೂ ಉತ್ತಮ, ಅರ್ಹ ವ್ಯಕ್ತಿಗಳೇ. ಆದರೆ, ಸರ್ಕಾರದ ನಿರ್ಧಾರದಿಂದ ಗೊಂದಲ ಸೃಷ್ಟಿಯಾಗಬಾರದು. ಸಾರ್ವಜನಿಕರಿಗೂ ಹೈಕೋರ್ಟ್ ಉಸ್ತುವಾರಿಯ ತನಿಖೆಯಲ್ಲೇ ಹೆಚ್ಚು ವಿಶ್ವಾಸ ಇರುತ್ತದೆ. ಆದ್ದರಿಂದ ಆ ತೀರ್ಮಾನವನ್ನು ಎಲ್ಲರೂ ಒಪ್ಪಬೇಕಿದೆ.

ಎಸ್.ಆರ್. ನಾಯಕ್,
ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗದ ಮಾಜಿ ಅಧ್ಯಕ್ಷ

ಸರ್ಕಾರದ ತೀರ್ಮಾನ ಅಸಮಂಜಸ, ಅನೂರ್ಜಿತ

24 ಮಂದಿ ಕೋವಿಡ್ ರೋಗಿಗಳ ಸಾವಿಗೆ ಸಂಬಂಧಿಸಿದಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡಿದ್ದ ಹೈಕೋರ್ಟ್ ವಿಭಾಗೀಯ ಪೀಠ, ತನಿಖೆಗೆ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ ನೇಮಿಸುವ ಕುರಿತು ಅಡ್ವೊಕೇಟ್ ಜನರಲ್ ಅವರಿಂದ ಸಲಹೆ ಕೇಳಿತ್ತು. ಮರು ದಿನ ಅವರು ಈ ಕುರಿತು ವಾದ ಮಂಡಿಸಬೇಕಿತ್ತು. ಆದರೆ, ಸರ್ಕಾರ ತಾನೇ ಆಯೋಗವೊಂದನ್ನು ನೇಮಿಸಿದೆ. ಹೈಕೋರ್ಟ್‌ನಲ್ಲಿ ಪ್ರಕರಣ ವಿಚಾರಣೆಯಲ್ಲಿ ಇರುವಾಗ ಸಂಪುಟವೂ ಸೇರಿದಂತೆ ಸರ್ಕಾರದಲ್ಲಿನ ಯಾರಿಗೂ ಮಧ್ಯಪ್ರವೇಶಕ್ಕೆ ಅವಕಾಶವಿಲ್ಲ.



ಹೈಕೋರ್ಟ್‌ನ ಆದೇಶದ ಎದುರಿನಲ್ಲಿ ಸರ್ಕಾರದ ಆದೇಶ ಊರ್ಜಿತವಾಗುವುದಿಲ್ಲ. ಸರ್ಕಾರ ತನ್ನ ವ್ಯಾಪ್ತಿಯನ್ನು ಮೀರಿ ಅಸಮಂಜಸವಾದ ಆದೇಶ ಹೊರಡಿಸಿದೆ. ಪ್ರಕರಣವೊಂದು ಹೈಕೋರ್ಟ್‌ನಲ್ಲಿ ಇತ್ಯರ್ಥಕ್ಕೆ ಬಾಕಿ ಇರುವಾಗ ಅದೇ ವಿಚಾರಕ್ಕೆ ಸಂಬಂಧಿಸಿದಂತೆ ಆದೇಶ ಹೊರಡಿಸಲು ಸರ್ಕಾರಕ್ಕೆ ಅಧಿಕಾರವಿಲ್ಲ. ಈಗ ಹೈಕೋರ್ಟ್ ನೇಮಿಸಿರುವ ಸಮಿತಿಯೇ ತನಿಖೆ ನಡೆಸಲು ಪೂರಕವಾದ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

ವಿ. ಗೋಪಾಲ ಗೌಡ,
ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಸರ್ಕಾರ ಆದೇಶ ವಾಪಸ್ ಪಡೆಯಲಿ




ಈ ಪ್ರಕರಣದಲ್ಲಿ ರಾಜ್ಯದ ಜನರ ಬೇಡಿಕೆಗೆ ಧ್ವನಿಯಾಗಿ ಹೈಕೋರ್ಟ್ ಕೆಲಸ ಮಾಡಿದೆ. ಅಲ್ಲಿಯವರೆಗೂ ಸುಮ್ಮನೆ ಇದ್ದ ರಾಜ್ಯ ಸರ್ಕಾರ, ಹೈಕೋರ್ಟ್ ವಿಚಾರಣೆ ಆರಂಭಿಸುತ್ತಿದ್ದಂತೆ ಆಯೋಗವೊಂದನ್ನು ನೇಮಕ ಮಾಡಿದೆ. ವಿಶಾಲ ವ್ಯಾಪ್ತಿಯಲ್ಲಿ ಈ ಪ್ರಕರಣವನ್ನು ವಿಶ್ಲೇಷಣೆಗೆ ಒಳಪಡಿಸಿ, ಉತ್ತರ ಕಂಡುಕೊಳ್ಳುವ ಉದ್ದೇಶದಿಂದ ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ತನಿಖೆ ನಡೆಸುವ ನಿರ್ಧಾರವನ್ನು ಹೈಕೋರ್ಟ್ ಕೈಗೊಂಡಿದೆ. ಹೈಕೋರ್ಟ್ ಮಧ್ಯ ಪ್ರವೇಶ ಮಾಡುವುದಕ್ಕೂ ಮೊದಲು ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದರೆ ಇಂತಹ ಸ್ಥಿತಿ ಉದ್ಭವಿಸುತ್ತಿರಲಿಲ್ಲ.

ಸರ್ಕಾರ ನ್ಯಾಯಾಂಗ ತನಿಖೆಗೆ ಆಯೋಗ ನೇಮಿಸಿರುವ ಆದೇಶವನ್ನು ಹಿಂದಕ್ಕೆ ಪಡೆಯಬೇಕು. ಹೈಕೋರ್ಟ್ ಜತೆಗೂಡಿ ಹೊಸದಾಗಿ ಆಯೋಗವೊಂದನ್ನು ರಚಿಸುವ ಮುಕ್ತ ಅವಕಾಶವೂ ಸರ್ಕಾರಕ್ಕೆ ಇದೆ. ಹೈಕೋರ್ಟ್ ಉಸ್ತುವಾರಿಯಲ್ಲೇ ತನಿಖೆ ನಡೆಸಿ, ತ್ವರಿತವಾಗಿ ಕ್ರಮ ಕೈಗೊಳ್ಳುವುದಕ್ಕೆ ಪೂರಕವಾಗಿ ರಾಜ್ಯ ಸರ್ಕಾರ ಹೆಜ್ಜೆ ಇಡಬೇಕಿದೆ.

ಎಚ್.ಎನ್. ನಾಗಮೋಹನ್ ದಾಸ್,
ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಪ್ರಜಾವಾಣಿ ಬುಧವಾರ, 12 ಮೇ 2021

ತಂತ್ರಜ್ಞಾನ



ಲಸಿಕೆ ನೋಂದಣಿ ಎಚ್ಚರಿಕೆ ಇರಲಿ

ಆದಾಯ ತೆರಿಗೆ ಮರುಪಾವತಿಸಲಾಗುತ್ತದೆ ಎಂದೋ, ನಿಮ್ಮ ಬ್ಯಾಂಕ್ ಖಾತೆ ಸುರಕ್ಷಿತವಾಗಿರಿಸಿಕೊಳ್ಳಿ ಎಂದೋ, ಎಟಿಎಂ ಕಾರ್ಡ್ ನೋಂದಾಯಿಸದಿದ್ದರೆ ಸ್ಥಗಿತವಾಗುತ್ತದೆ ಎಂದೋ, ಉಚಿತ 4ಜಿ ಇಂಟರ್ನೆಟ್ ಸೌಕರ್ಯ ಪಡೆಯಿರಿ ಎಂಬುದೇ ಮುಂತಾಗಿ ಸಂದೇಶಗಳನ್ನು ಕಳುಹಿಸಿ ಜನರನ್ನು ಈಗಾಗಲೇ ಹಲವು ಕುತಂತ್ರಿ ಮನಸ್ಸುಗಳು ವಂಚಿಸಿವೆ. ಇದಕ್ಕೆ ಹೊಸ ಸೇರ್ಪಡೆ, ಕೋವಿಡ್-19 ಲಸಿಕೆ ನೋಂದಣಿ.



ಯುವತಿಯೊಬ್ಬಳಿಗೆ ಆರೋಗ್ಯ ಕಾರ್ಯಕರ್ತೆ ಲಸಿಕೆ ನೀಡುತ್ತಿರುವುದು (ಸಾಂದರ್ಭಿಕ ಚಿತ್ರ)

ಅವಿನಾಶ್ ಬಿ.

ಸಂಕಷ್ಟ ಕಾಲದಲ್ಲೇ ವಂಚನೆ ಮಾಡುವುದು, ಲಾಭ ಮಾಡಿಕೊಳ್ಳುವುದು ಹೇಗೆಂದು ಕೆಲವು ಅಸ್ವಸ್ಥ ಮನಸ್ಸುಗಳು ನಿರಂತರವಾಗಿ ತುಡಿಯುತ್ತಿರುತ್ತವೆ. ಜಗತ್ತಿನಲ್ಲಿ ಏನೇ ಸುದ್ದಿ ಅಥವಾ ಸದ್ದು ಮಾಡುತ್ತಿರಲಿ; ಈ ಟ್ರೆಂಡಿಂಗ್ ವಿಷಯಗಳನ್ನೇ ಉಪಯೋಗಿಸಿ ದುಡ್ಡು ಮಾಡಿಕೊಳ್ಳಲು ಸೈಬರ್ ಕ್ರಿಮಿನಲ್‌ಗಳು ಕಾಯುತ್ತಾ ಇರುತ್ತಾರೆ.

ಉದಾಹರಣೆಗೆ, ಆದಾಯ ತೆರಿಗೆ ಮರುಪಾವತಿಸಲಾಗುತ್ತದೆ ಎಂದೋ, ನಿಮ್ಮ ಬ್ಯಾಂಕ್ ಖಾತೆ ಸುರಕ್ಷಿತವಾಗಿರಿಸಿಕೊಳ್ಳಿ ಎಂದೋ, ಎಟಿಎಂ ಕಾರ್ಡ್ ನೋಂದಾಯಿಸದಿದ್ದರೆ ಸ್ಥಗಿತವಾಗುತ್ತದೆ ಎಂದೋ, ಉಚಿತ 4ಜಿ ಇಂಟರ್ನೆಟ್ ಸೌಕರ್ಯ ಪಡೆಯಿರಿ ಎಂಬುದೇ ಮುಂತಾಗಿ ಸಂದೇಶಗಳನ್ನು ಕಳುಹಿಸಿ ಜನರನ್ನು ಈಗಾಗಲೇ ಹಲವು ಕುತಂತ್ರಿ ಮನಸ್ಸುಗಳು ವಂಚಿಸಿವೆ. ಇದಕ್ಕೆ ಹೊಸ ಸೇರ್ಪಡೆ, ಕೋವಿಡ್-19 ಲಸಿಕೆ.

ಇಂಟರ್ನೆಟ್ ಕ್ರಾಂತಿ ಮತ್ತು ಆಂಡ್ರಾಯ್ಡ್ ಫೋನ್‌ಗಳು ಬಹುತೇಕ ಎಲ್ಲರ ಕೈಗೆಟಕಿರುವುದರಿಂದ ಸೈಬರ್ ವಂಚನೆ ಪ್ರಕರಣಗಳಲ್ಲೂ ಏರಿಕೆಯಾಗಿವೆ. ಸೈಬರ್ ವಂಚನೆಯ ಜಾಡಿನ ಅರಿವಿಲ್ಲದವರಷ್ಟೇ ಅಲ್ಲದೆ ಕೆಲವೊಮ್ಮೆ ಸುಶಿಕ್ಷಿತರೇ ಇಂಥ ವಂಚನೆಯ ಬಲೆಗೆ ಸಿಲುಕುತ್ತಾರೆ.

ಈಗಾಗಲೇ ಸರ್ಕಾರವು 18 ವಯಸ್ಸಿಗಿಂತ ಮೇಲ್ಪಟ್ಟ ಎಲ್ಲರಿಗೂ ಕೋವಿಡ್ ಲಸಿಕೆ ನೀಡಲಾಗುತ್ತದೆ ಎಂದು ಘೋಷಿಸಿ, 'ಲಸಿಕೆಯನ್ನು ಎಲ್ಲರೂ ಪಡೆದುಕೊಳ್ಳಿ, ಕೋವಿಡ್-19 ಮಹಾಮಾರಿಯಿಂದ ರಕ್ಷಿಸಿಕೊಳ್ಳಿ' ಎಂದು ಮನವಿ ಮಾಡಿಕೊಂಡಿದೆ. ಲಸಿಕೆ ತೆಗೆದುಕೊಳ್ಳುವುದರ ವಿರುದ್ಧ ಅಪಪ್ರಚಾರ ಆಗುತ್ತಿರುವ ನಡುವೆಯೇ, ಕೋವಿಡ್ ಲಸಿಕೆ ತಕ್ಷಣ ಪಡೆಯಲು ಅಥವಾ ಲಸಿಕೆಗಾಗಿ ನಿಮ್ಮ ಹೆಸರನ್ನು ಉಚಿತವಾಗಿ ನೋಂದಾಯಿಸಿಕೊಳ್ಳಲು ಇಲ್ಲಿ ಕ್ಲಿಕ್ ಮಾಡಿ ಎಂಬ ಸಂದೇಶವೊಂದು ಲಿಂಕ್ ಸಹಿತ ಹರಿದಾಡುತ್ತಿದೆ.

ಆದರೆ ಇದು ಅಧಿಕೃತವಲ್ಲ. ಸರ್ಕಾರ ಕಳುಹಿಸಿರುವ ಸಂದೇಶವೂ ಅಲ್ಲ. ದುರುದ್ದೇಶಪೂರಿತ ಅಥವಾ ಕುತಂತ್ರಾಂಶವನ್ನು ನಮ್ಮ ಮೊಬೈಲ್‌ಗೆ ಸೇರಿಸಿ, ಅದರಿಂದ ದತ್ತಾಂಶ ಕದಿಯುವ ಸೈಬರ್ ಕ್ರಿಮಿನಲ್‌ಗಳ ಹುನ್ನಾರವಿದು.

ವಂಚನೆ ಹೇಗೆ?

ಈ ಸಂದೇಶದಲ್ಲಿರುವ ಲಿಂಕ್ ಕ್ಲಿಕ್ ಮಾಡಿದಾಗ, ನಮ್ಮ ಮೊಬೈಲ್ ಫೋನ್‌ಗೆ ಒಂದು ಆ್ಯಪ್ ಡೌನ್‌ಲೋಡ್ ಆಗುತ್ತದೆ ಮತ್ತು ಮಾಹಿತಿ ಕದಿಯುವ ಕೆಲಸ ಆರಂಭಿಸುತ್ತದೆ. ನಿಮ್ಮ ಹೆಸರು, ಇಮೇಲ್ ವಿಳಾಸ, ವಯಸ್ಸು, ಊರು, ಬಳಸುತ್ತಿರುವ ಆ್ಯಪ್, ಫೋನ್‌ನಲ್ಲಿರಬಹುದಾದ ಬ್ಯಾಂಕಿಂಗ್ ಮಾಹಿತಿ, ಆಧಾರ್ ಮತ್ತಿತರ ಮಾಹಿತಿಗಳೆಲ್ಲವನ್ನೂ ಕದಿಯುವುದು ಈ ಕುತಂತ್ರಾಂಶದ ಕೆಲಸ.

ಈ ರೀತಿಯಾಗಿ, ಬಳಕೆದಾರರ ಮಾಹಿತಿಯನ್ನು ವಂಚನೆಯ ಮೂಲಕ ಕದ್ದು, ವಿವಿಧ ಕಂಪನಿಗಳಿಗೆ ಮಾರಾಟ ಮಾಡಲಾಗುತ್ತದೆ. ಈ ಕಂಪನಿಗಳು ಬಳಕೆದಾರರ ದತ್ತಾಂಶ ಸಂಚಯ (ಡೇಟಾಬೇಸ್) ಸಂಗ್ರಹಿಸಿ, ಆಗಾಗ್ಗೆ ತಮ್ಮ ಉತ್ಪನ್ನಗಳ ಜಾಹೀರಾತು ಕಳುಹಿಸಲು ಈ ಮಾಹಿತಿಯನ್ನು ಬಳಸಿಕೊಳ್ಳುವ ಸಾಧ್ಯತೆಗಳಿರುತ್ತವೆ.

ಇದಲ್ಲದೆ, ಫೋನ್‌ನಲ್ಲಿರುವ ಬ್ಯಾಂಕಿಂಗ್ ಆ್ಯಪ್‌ಗಳಲ್ಲಿ ಅಥವಾ ಇ-ಕಾಮರ್ಸ್ ಆ್ಯಪ್‌ಗಳಲ್ಲಿ ಶೇಖರವಾಗಿರುವ ಬಳಕೆದಾರರ ಹೆಸರು, ಪಾಸ್‌ವರ್ಡ್ ಸಂಗ್ರಹಿಸಿ, ಖಾತೆಯಿಂದ ಹಣ ಎಗರಿಸುವುದಕ್ಕೂ ಇಂಥ ಕುತಂತ್ರಾಂಶಗಳನ್ನು ಬಳಸಿಕೊಳ್ಳಬಹುದಾಗಿದೆ.

ಇತ್ತೀಚೆಗಷ್ಟೇ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶವೊಂದರಲ್ಲಿದ್ದ ಲಿಂಕ್ ಕ್ಲಿಕ್ ಮಾಡಿದಾಗ, ಅದು ನಮ್ಮ ಫೋನ್‌ನಲ್ಲಿದ್ದ ಎಲ್ಲ ಸಂಪರ್ಕ ಸಂಖ್ಯೆಗಳಿಗೆ ಸ್ವಯಂಚಾಲಿತವಾಗಿ ರವಾನೆಯಾಗುತ್ತಲೇ ಇತ್ತು. ಈ 'ಪಿಂಕ್ ವಾಟ್ಸ್‌ಆ್ಯಪ್' ಮಾಲ್‌ವೇರ್ ಬಗ್ಗೆಯೂ ಪ್ರಜಾವಾಣಿ ಎಚ್ಚರಿಸಿತ್ತು. ಈಗಿನ ಎಸ್ಸೆಮ್ಮೆಸ್ ಸಂದೇಶವೂ ಬಹುತೇಕ ಇದೇ ರೀತಿ ಕೆಲಸ ಮಾಡುತ್ತದೆ. ನಮ್ಮ ಫೋನ್‌ನಿಂದ ಅಯಾಚಿತವಾಗಿಯೇ ಬೇರೆಯವರಿಗೆ ಈ ಲಿಂಕ್ ಇರುವ ಸಂದೇಶ ರವಾನೆಯಾಗುತ್ತದೆ.

ಈ ಸಂದೇಶದಲ್ಲಿರುವ ವಿಷಯವು ಓದಿದ ತಕ್ಷಣ ವಿಶ್ವಾಸಾರ್ಹ ಎಂದೇ ತೋರುತ್ತದೆ. ಆರಂಭದಲ್ಲಿ ಕೋವಿಡ್-19 ಎಂಬ ಹೆಸರನ್ನೇ ಹೊತ್ತುಕೊಂಡಿದ್ದ ಆ್ಯಪ್, ನಂತರ ವ್ಯಾಕ್ಸಿನ್ ರಿಜಿಸ್ಟರ್ ಅಂತ ಬದಲಿಸಿಕೊಂಡಿದೆ ಎಂಬ ಮಾಹಿತಿಯೂ ಲಭ್ಯವಾಗಿದೆ. ಆದರೆ, ಇದು ಗೂಗಲ್ ಪ್ಲೇ ಸ್ಟೋರ್‌ನಲ್ಲಿರುವುದಿಲ್ಲ. ಬಾಹ್ಯ ಸರ್ವರ್‌ನಿಂದ ಲಿಂಕ್ ಮೂಲಕ ಡೌನ್‌ಲೋಡ್ ಆಗುವ ಮಾಲ್‌ವೇರ್ (ಕುತಂತ್ರಾಂಶ) ಇದು.

ಹೀಗಾಗಿ, ಅನಗತ್ಯವಾಗಿ ಯಾವುದೇ ಲಿಂಕ್‌ಗಳನ್ನು ಎಲ್ಲೇ ಬಂದರೂ (ಎಸ್‌ಎಂಎಸ್, ಇಮೇಲ್, ವಾಟ್ಸ್‌ಆ್ಯಪ್, ಫೇಸ್‌ಬುಕ್ ಮತ್ತಿತರ ಸೋಷಿಯಲ್ ಮೀಡಿಯಾ) ಕ್ಲಿಕ್ ಮಾಡಲೇಬೇಡಿ. ಗೂಗಲ್ ಪ್ಲೇ ಸ್ಟೋರ್‌ನಿಂದಲೇ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವುದು ಪೂರ್ಣ ಅಲ್ಲದಿದ್ದರೂ ಹೆಚ್ಚು ಸುರಕ್ಷಿತ. ಹಾಗೂ, ಕೋವಿಡ್-19 ಲಸಿಕೆಗಾಗಿ ಆರೋಗ್ಯ ಸೇತು ಆ್ಯಪ್ ಅಥವಾ Cowin ವೆಬ್ ಸೈಟ್ www.cowin.gov.in ಮೂಲಕವಷ್ಟೇ ನೋಂದಾಯಿಸಿಕೊಳ್ಳಬಹುದು ಎಂಬುದು ಗಮನದಲ್ಲಿರಲಿ.



ನಿಯಮ ಒಪ್ಪಿದರಷ್ಟೆ ವಾಟ್ಸ್‌ಆ್ಯಪ್

ಜಗತ್ತಿನಾದ್ಯಂತ ಎಷ್ಟೇ ವಿರೋಧ, ಟೀಕೆ ಎದುರಾದರೂ ವಾಟ್ಸ್‌ಆ್ಯಪ್ ತನ್ನ ಪಾರಮ್ಯದ ಧೋರಣೆ ಮುಂದುವರಿಸಿದೆ. ಹೊಸ ನೀತಿ ಒಪ್ಪಿಕೊಳ್ಳಲು ನೀಡಿದ್ದ ಗಡುವು ಕೈಬಿಟ್ಟಿದ್ದರು, ಒಪ್ಪಿಕೊಳ್ಳದಿದ್ದರೆ ವಾಟ್ಸ್‌ಆ್ಯಪ್ ಸಂಪೂರ್ಣ ಬಳಕೆ ಅಸಾಧ್ಯ ಎಂದು ಹೇಳಿದೆ.

ಒಪ್ಪದೇ ಇದ್ದರೆ ಏನಾಗಲಿದೆ?

ಹೊಸ ನಿಯಮಕ್ಕೆ ಒಪ್ಪಿಗೆ ನೀಡುವವರೆಗೂ ವಾಟ್ಸ್‌ಆ್ಯಪ್ ಸೀಮಿತವಾಗಿ ಕಾರ್ಯಾಚರಿಸಲಿದೆ. ಒಪ್ಪದೇ ಇರುವ ಎಲ್ಲಾ ಬಳಕೆದಾರರಿಗೂ ಏಕಕಾಲಕ್ಕೇ ಹೀಗಾಗುವುದಿಲ್ಲ.

- ಚಾಟ್ ಲಿಸ್ಟ್ ಅಕ್ಸೆಸ್ ಮಾಡಲು ಸಾಧ್ಯವಾಗುವುದಿಲ್ಲ. ಹೀಗಿದ್ದರೂ ಇನ್‌ಕಮಿಂಗ್ ಫೋನ್ ಮತ್ತು ವಿಡಿಯೊ ಕಾಲ್‌ಗಳಿಗೆ ಪ್ರತಿಕ್ರಿಯಿಸಬಹುದು. ಮೆಸೇಜ್‌ನ ನೋಟಿಫಿಕೇಷನ್ ಎನೇಬಲ್ ಮಾಡಿದ್ದರೆ, ಬರುವ ಮೆಸೇಜ್ ಓದಲು ಅಥವಾ ಅದಕ್ಕೆ ಉತ್ತರಿಸಲು ಸಾಧ್ಯ. ಅದೇ ರೀತಿ ಮಿಸ್ಡ್ ಫೋನ್ ಅಥವಾ ವಿಡಿಯೊ ಕಾಲ್ ಆಗಿರುವ ನಂಬರ್‌ಗೆ ಮತ್ತೆ ಕಾಲ್ ಮಾಡಬಹುದು.
- ಈ ರೀತಿ ಸೀಮಿತ ಕಾರ್ಯವಿಧಾನ ಮುಂದುವರಿದ ಕೆಲವೇ ವಾರಗಳ ಬಳಿಕ, ಇನ್‌ಕಮಿಂಗ್ ಕಾಲ್ ಅಥವಾ ನೋಟಿಫಿಕೇಶನ್‌ಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ. ನಿಮ್ಮ ಮೊಬೈಲ್‌ಗೆ ಮೆಸೇಜ್ ಮತ್ತು ಕಾಲ್ ಕಳುಹಿಸುವುದನ್ನು ವಾಟ್ಸ್‌ಆ್ಯಪ್ ನಿಲ್ಲಿಸಲಿದೆ.

ವಿಶ್ವನಾಥ ಎಸ್.

ವಾಟ್ಸ್‌ಆ್ಯಪ್‌ನ ಹೊಸ ಖಾಸಗಿ ನೀತಿಯ ಕುರಿತು ಜಗತ್ತಿನೆಲ್ಲೆಡೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಹೀಗಾಗಿ ಕಂಪನಿಯು ಅದನ್ನು ಒಪ್ಪಿಕೊಳ್ಳಲು ನೀಡಿದ್ದ ಮೇ 15ರ ಗಡುವನ್ನು ಕೈಬಿಟ್ಟಿದೆ. ಮೇ 15ರ ಬಳಿಕವೂ ವಾಟ್ಸ್‌ಆ್ಯಪ್ ಕಾರ್ಯನಿರ್ವಹಿಸಲಿದೆ, ಯಾವುದೇ ಖಾತೆ ಡಿಲೀಟ್ ಆಗುವುದಿಲ್ಲ ಎಂದು ಘೋಷಿಸಿದೆ. ಹಾಗಿದ್ದರೆ ಇದುವರೆಗೆ ನಡೆಸಿದ ಕಸರತ್ತು, ಪದೇ ಪದೇ ನೀಡಿದ ಸ್ಪಷ್ಟನೆ, ಭರವಸೆ... ಇವೆಲ್ಲದರ ಅವಶ್ಯಕತೆ ಇತ್ತಾ ಎಂದು ಪ್ರಶ್ನಿಸಿದರೆ. ಇವೆಲ್ಲವೂ ಒಂದು ರೀತಿಯ ಮಾರುಕಟ್ಟೆ ತಂತ್ರ ಎಂದೇ ಹೇಳಬಹುದು.


ಖಾಸಗಿತನಕ್ಕೆ ಸಂಬಂಧಿಸಿದ ತನ್ನ ಹೊಸ ನೀತಿಯನ್ನು ಒಪ್ಪಿಕೊಳ್ಳದೇ ಇದ್ದರೆ ಫೆಬ್ರುವರಿ 8ರ ಬಳಿಕ ವಾಟ್ಸ್‌ಆ್ಯಪ್ ಬಳಸಲೇ ಆಗುವುದಿಲ್ಲ ಎಂದು ಖಡಾಖಂಡಿತವಾಗಿ ಘೋಷಿಸಿತ್ತು. ಇದಕ್ಕೆ ಜಾಗತಿಕವಾಗಿ ಬಹಳಷ್ಟು ಟೀಕೆ, ವಿರೋಧಗಳು ವ್ಯಕ್ತವಾದವು. ಬಹಳಷ್ಟು ವಾಟ್ಸ್‌ಆ್ಯಪ್ ಬಳಕೆದಾರರು ಸಿಗ್ನಲ್ ಮತ್ತು ಟೆಲಿಗ್ರಾಂ ಆ್ಯಪ್‌ಗಳತ್ತ ಮುಖಮಾಡಿದರು. ತಕ್ಷಣವೇ ಎಚ್ಚೆತ್ತುಕೊಂಡ ವಾಟ್ಸ್‌ಆ್ಯಪ್, ಗಡುವನ್ನು ಮೇ 15ಕ್ಕೆ ವಿಸ್ತರಿಸಿತು. ತಪ್ಪು ಮಾಹಿತಿ ಹರಡುತ್ತಿರುವುದರಿಂದ ಗಡುವನ್ನು ವಿಸ್ತರಣೆ ಮಾಡಿರುವುದಾಗಿ ಘೋಷಿಸಿತು. ಈ ನಡುವೆ, ಬಳಕೆದಾರರ ಮನವೊಲಿಸಲು ಹಲವು ಸ್ಪಷ್ಟನೆಗಳನ್ನು ನೀಡುತ್ತಲೇ ಬಂದಿತು. ಬಳಕೆದಾರರ ಖಾಸಗಿತನ ರಕ್ಷಣೆಗೆ ಬದ್ಧ. ಎಂಡು-ಟು-ಎಂಡ್ ಎನ್‌ಕ್ರಿಪ್ಷನ್ ವ್ಯವಸ್ಥೆ ಹೊಂದಿರುವುದರಿಂದ ಹೆಚ್ಚಿನ ಸುರಕ್ಷತೆ ಇದೆ ಎಂದು ಹೇಳಿಕೆಗಳನ್ನು ನೀಡಿತು.

ತನಿಖೆಗೆ ಆದೇಶಿಸಿದ ಸ್ಪರ್ಧಾ ಆಯೋಗ: ವಾಟ್ಸ್‌ಆ್ಯಪ್‌ನ ಪರಿಷ್ಕೃತ ಖಾಸಗಿತನ ನೀತಿ ಹಾಗೂ ಸೇವಾ ನಿಯಮಗಳ ಬಗ್ಗೆ ತನಿಖೆ ನಡೆಸುವಂತೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ತನ್ನ ತನಿಖಾ ವಿಭಾಗಕ್ಕೆ ಆದೇಶಿಸಿದೆ. ವಾಟ್ಸ್‌ಆ್ಯಪ್‌ನ ಪರಿಷ್ಕೃತ ನಿಯಮಗಳ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನು ಗಮನಿಸಿ ಸಿಸಿಐ ಸ್ವಯಂಪ್ರೇರಿತವಾಗಿ ಈ ಕ್ರಮ ಕೈಗೊಂಡಿದೆ. ಈ ನೀತಿ ಹಾಗೂ ಸೇವಾ ನಿಯಮಗಳು ಸ್ಪರ್ಧಾ ಕಾನೂನುಗಳ ಉಲ್ಲಂಘನೆಯಂತೆ ಮೇಲ್ನೋಟಕ್ಕೆ ಕಾಣಿಸುತ್ತಿವೆ ಎಂದು ಅದು ಹೇಳಿದೆ. ಬಳಕೆದಾರರಿಗೆ ಇಷ್ಟವಿಲ್ಲದಿದ್ದರೂ ತಮ್ಮ ಕೆಲವು ಮಾಹಿತಿಯನ್ನು ಹಂಚಿಕೊಳ್ಳುವುದಕ್ಕೆ ವಾಟ್ಸ್‌ಆ್ಯಪ್‌ಗೆ ಒಪ್ಪಿಗೆ ನೀಡಬೇಕಿರುವುದರ ಪೂರ್ಣ ಪರಿಣಾಮಗಳ ಕುರಿತು ವಿಸ್ತೃತ ತನಿಖೆ ಆಗಬೇಕಿದೆ ಎಂದು ಸಿಸಿಐ ಹೇಳಿದೆ.

ಮಾಹಿತಿ ಹಂಚಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ನಿಯಮಗಳನ್ನು ಒಪ್ಪಿಕೊಳ್ಳದಿರುವ ಅಥವಾ ಅದಕ್ಕೆ ವಿರೋಧ ವ್ಯಕ್ತಪಡಿಸುವ ಆಯ್ಕೆಯನ್ನು ಬಳಕೆದಾರರಿಗೆ ನೀಡಿಲ್ಲ. ಇದು ವಾಟ್ಸ್‌ಆ್ಯಪ್ ಬಳಕೆದಾರರ ಪಾಲಿಗೆ ನ್ಯಾಯಸಮ್ಮತವಾಗಿರುವಂತೆ ಮೇಲ್ನೋಟಕ್ಕೆ ಕಾಣುತ್ತಿಲ್ಲ ಎಂದು ಆಯೋಗ ಅಭಿಪ್ರಾಯ ವ್ಯಕ್ತಪಡಿಸಿದೆ.

ಗಡುವು ಇಲ್ಲ: ಖಾಸಗಿತನ ಕುರಿತ ಪರಿಷ್ಕೃತ ನೀತಿಗೆ ಬಳಕೆದಾರರು ಒಪ್ಪಲು ನೀಡಿದ್ದ ಮೇ 15ರ ಗಡುವನ್ನು ವಾಟ್ಸ್‌ಆ್ಯಪ್ ಕೈಬಿಟ್ಟಿದೆ. ಸಮ್ಮತಿ ಸೂಚಿಸದೇ ಇದ್ದರೂ ಭಾರತದ ಬಳಕೆದಾರರ ಖಾತೆ ರದ್ದು ಆಗುವುದಿಲ್ಲ ಎಂದು ಹೇಳಿದೆ. ಪರಿಷ್ಕೃತ ನೀತಿಗೆ ಒಪ್ಪಿಗೆ ಸೂಚಿಸದೇ ಇದ್ದರೂ ಯಾವುದೇ ಬಳಕೆದಾರರ ಖಾತೆಯೂ ರದ್ದಾಗುವುದಿಲ್ಲ. ಆದರೆ, ಪರಿಷ್ಕೃತ ನೀತಿ ಕುರಿತಂತೆ ಮುಂದಿನ ಕೆಲವು ವಾರ ಬಳಕೆದಾರರಿಗೆ ಆಗಾಗ್ಗೆ ನೆನಪಿನ ಸಂದೇಶಗಳು ರವಾನೆ ಆಗಲಿವೆ ಎನ್ನುವುದು ವಾಟ್ಸ್‌ಆ್ಯಪ್‌ನ ವಕ್ತಾರರೊಬ್ಬರ ಹೇಳಿಕೆ.

ಹಾಗಾದರೆ, ಬಳಕೆದಾರರ ವಿರೋಧಕ್ಕೆ ವಾಟ್ಸ್‌ಆ್ಯಪ್ ಮಣಿಯಿತೇ ಎಂದು ಕೇಳಿದರೆ, ಖಂಡಿತವಾಗಿಯೂ ಇಲ್ಲ. ಹೊಸ ನಿಯಮ ಒಪ್ಪದೇ ಇದ್ದರೆ ವಾಟ್ಸ್‌ಆ್ಯಪ್ ಸಂಪೂರ್ಣವಾಗಿ ಕಾರ್ಯನಿರ್ವಹಿಸುವುದೇ ಇಲ್ಲ. ವಾಟ್ಸ್‌ಆ್ಯಪ್ ಜಾಲತಾಣದಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವರ್ಗ ಸಮೀಕರಣಗಳು

ಗಣಿತ

ನೀವು ವಿವಿಧ ರೀತಿಯ ಬಹುಪದೋಕ್ತಿಗಳ ಬಗ್ಗೆ ಕಲಿತಿದ್ದೀರಿ. $ax^2 + bx + c, a \neq o$ ಈ ರೂಪದ ವರ್ಗ ಬಹುಪದೋಕ್ತಿಯು ಅವುಗಳಲ್ಲಿನ ಒಂದು ವಿಧವಾಗಿತ್ತು. ಈ ಬಹುಪದೋಕ್ತಿಯನ್ನು ಸೊನ್ನೆಗೆ ಸಮೀಕರಿಸಿದರೆ ನಮಗೆ ವರ್ಗ ಸಮೀಕರಣ ದೊರೆಯುತ್ತದೆ.

ಬ್ಯಾಬಿಲೋನಿಯನ್ನರು ಮೊಟ್ಟಮೊದಲು ವರ್ಗ ಸಮೀಕರಣಗಳಿಗೆ ಪರಿಹಾರ ಕಂಡುಹಿಡಿದರೆಂದು ನಂಬಲಾಗಿದೆ. ಉದಾಹರಣೆಗೆ ಎರಡು ಧನ ಸಂಖ್ಯೆಗಳ ಮೊತ್ತ ಗುಣಲಬ್ಧಗಳನ್ನು ನೀಡಿದಾಗ ಆ ಎರಡು ಸಂಖ್ಯೆಗಳನ್ನು ಹೇಗೆ ಕಂಡುಹಿಡಿಯುವುದೆಂಬುದನ್ನು ಅವರು ತಿಳಿಸಿದ್ದರು ಮತ್ತು ಈ ಸಮಸ್ಯೆಯು $x2-px+q=0$ ರೂಪದ ವರ್ಗ ಸಮೀಕರಣವನ್ನು ಬಿಡಿಸುವುದಕ್ಕೆ ಸಮಾನವಾಗಿದೆ.

ಗ್ರೀಕ್, ಗಣಿತಜ್ಞರಾದ ಯೂಕಿಡ್ಲ್ ಅವರು ಉದ್ದಗಳನ್ನು ಕಂಡುಹಿಡಿಯಲು ಒಂದು ರೇಖಾಗಣಿತೀಯ ವಿಧಾನವನ್ನು ಅಭಿವೃದ್ಧಿಪಡಿಸಿದರು. ಇದು ಈಗಿನ ಪರಿಭಾಷೆಯಲ್ಲಿ ವರ್ಗ ಸಮೀಕರಣಗಳ ಪರಿಹಾರ ಎಂಬ ಅರ್ಥವನ್ನು ನೀಡುತ್ತದೆ.

ಸಾಮಾನ್ಯ ರೂಪದಲ್ಲಿ ವರ್ಗ ಸಮೀಕರಣಗಳನ್ನು ಬಿಡಿಸುವುದರ ಕೀರ್ತಿಯು ಪ್ರಾಚೀನ ಭಾರತದ ಗಣಿತಜ್ಞರಿಗೆ ಸಲ್ಲುತ್ತದೆ. ವಾಸ್ತವವಾಗಿ ಬ್ರಹ್ಮಗುಪ್ತರು $ax2+bx+c=0$ ರೂಪದ ವರ್ಗ ಸಮೀಕರಣವನ್ನು ಬಿಡಿಸಲು ಸ್ಪಷ್ಟವಾದ ಸೂತ್ರವನ್ನು ನೀಡಿದರು. ನಂತರ ಶ್ರೀಧರಾಚಾರ್ಯರು ವರ್ಗ ಸಮೀಕರಣವನ್ನು ಬಿಡಿಸಲು ವರ್ಗ ಪೂರ್ಣಗೊಳಿಸುವ ವಿಧಾನದಿಂದ ವರ್ಗ ಸಮೀಕರಣದ ಸೂತ್ರ ಎಂದು ಕರೆಯಲ್ಪಡುವ ಒಂದು ಸೂತ್ರವನ್ನು ವ್ಯುತ್ಪತ್ತಿಸಿದರು. ಆದರೆ ಗಣಿತಜ್ಞರಾದ ಅಲ್-ಖ್ವಾರಿಜ್ಮಿ ಅವರು ಸಹ ವಿವಿಧ ರೀತಿಯ ವರ್ಗ ಸಮೀಕರಣಗಳ ಬಗ್ಗೆ ಅಧ್ಯಯನ ಮಾಡಿದ್ದರು.

ಅಬ್ರಹಾಂ ಬಾರಹಿಯ್ಯ ಹನಸಿಯವರು ಲಿಬಿರಾ ಎಂಬಾಡೋರಮ್‌ದಲ್ಲಿ ವಿವಿಧ ವರ್ಗ ಸಮೀಕರಣಗಳ ಸಂಪೂರ್ಣ ಪರಿಹಾರಗಳನ್ನು ನೀಡಿದ್ದಾರೆ.

ವರ್ಗ ಸಮೀಕರಣಗಳು

x ಚರಾಕ್ಷರವುಳ್ಳ ಒಂದು ವರ್ಗ ಸಮೀಕರಣವು $ax^2+bx+c=0$ ರೂಪದ ಒಂದು ಸಮೀಕರಣವನ್ನು ಇಲ್ಲಿ a,b,c ಗಳು ವಾಸ್ತವ ಸಂಖ್ಯೆಗಳು ಮತ್ತು

$$a \neq o, 2x^2 - x - 300 = 0$$

ಇದೊಂದು ವರ್ಗ ಸಮೀಕರಣವಾಗಿದೆ, ಅಂತೆಯೇ $2x^2-3x+1=0$ ಮತ್ತು $1-x^2+300=0$ ಇವೂ ಸಹ ವರ್ಗ ಸಮೀಕರಣಗಳಾಗಿವೆ.

ವಾಸ್ತವವಾಗಿ p(x) ಎಂಬುದು ಡಿಗ್ರಿ 2 ಆಗಿರುವ ಬಹುಪದೋಕ್ತಿ ಆಗಿದ್ದರೆ p(x) = 0 ರೂಪದ ಯಾವುದೇ ಸಮೀಕರಣವು ವರ್ಗ ಸಮೀಕರಣ ಆಗಿರುತ್ತದೆ. ಆದರೆ p(x) ದ ಪದಗಳು ಅವುಗಳ ಡಿಗ್ರಿಯ ಇಳಿಕೆಯ ಕ್ರಮದಲ್ಲಿ ಬರೆದಾಗ ನಾವು ಸಮೀಕರಣದ ಆದರ್ಶ ರೂಪ ಎಂದು ಕರೆಯುತ್ತೇವೆ.

ನಮ್ಮ ಸುತ್ತಮುತ್ತಲಿನ ಪ್ರಪಂಚದ ಹಲವಾರು ಸನ್ನಿವೇಶಗಳಲ್ಲಿ ಹಾಗೂ ಗಣಿತದ ವಿವಿಧ ಕ್ಷೇತ್ರಗಳಲ್ಲಿ ವರ್ಗ ಸಮೀಕರಣದ ಅನ್ವಯಗಳಿವೆ.

ಉದಾಹರಣೆ: ಜಾನ್ ಮತ್ತು ಜೀವಂತಿ ಇವರಿಬ್ಬರ ಬಳಿ ಇರುವ ಒಟ್ಟು ಗೋಲಿಗಳ ಸಂಖ್ಯೆ 45 ಆಗಿದೆ. ಇವರಿಬ್ಬರೂ ತಲಾ 5 ಗೋಲಿಗಳನ್ನು ಕಳೆದುಕೊಂಡರೆ ಇವರ ಬಳಿ ಇರುವ ಗೋಲಿಗಳ ಸಂಖ್ಯೆಗಳ ಗುಣಲಬ್ಧ 124 ಆಗಿರುತ್ತದೆ. ಹಾಗಾದರೆ ಆರಂಭದಲ್ಲಿ ಅವರ ಬಳಿ ಇದ್ದ ಗೋಲಿಗಳ ಸಂಖ್ಯೆ ಎಷ್ಟು ಎಂಬುದನ್ನು ನಾವು ಕಂಡುಹಿಡಿಯೋಣ.

ಜಾನ್‌ನ ಬಳಿ ಇರುವ ಗೋಲಿಗಳ ಸಂಖ್ಯೆ x ಆಗಿರಲಿ

ಆಗ ಜೀವಂತಿ ಬಳಿ ಇದ್ದ ಗೋಲಿಗಳ ಸಂಖ್ಯೆ 45-x

5 ಗೋಲಿಗಳನ್ನು ಕಳೆದುಕೊಂಡಾಗ ಜಾನ್‌ನ ಬಳಿ ಉಳಿದ ಗೋಳಿಗಳ ಸಂಖ್ಯೆ $= 45-(x-5) = 40-x$

ಅವುಗಳ ಗುಣಲಬ್ಧ

$$\Rightarrow (x-5)(40-x) = 124$$

$$\Rightarrow (40x - x^2 - 200 + 5x = 124$$

$$\Rightarrow -x^2 + 45x - 200 = 124$$

$$\Rightarrow x^2 + 45x - 324 = 0$$

$$\Rightarrow x^2 - 45x + 324 = 0$$

ಎಸ್ಸೆಸ್ಸೆಲ್ಸಿ

ಆದ್ದರಿಂದ ಜಾನ್‌ನ ಬಳಿ ಇದ್ದ ಗೋಲಿಗಳ ಸಂಖ್ಯೆಯು ವರ್ಗ ಸಮೀಕರಣವನ್ನು ಸರಿದೂಗಿಸುತ್ತದೆ. ಇದು ಸಮಸ್ಯೆಯ ಅಪೇಕ್ಷಿತೆಯ ರೂಪವಾಗಿದೆ.

ಪರಿಹಾರ: $(x-2)^2 + 1 = 2x - 3$

$$x^2 - 4x + 4 + 1 = 2x - 3$$

$$x^2 - 4x + 5 = 2x - 3$$

$$x^2 - 6x + 8 = 0$$

ಈ ದತ್ತ ಸಮೀಕರಣವು ವರ್ಗ ಸಮೀಕರಣವಾಗಿಲ್ಲ.

(ಮುಂದುವರಿಯುವುದು)

ಒಂದು ಘಟಕ ಕೋಶದಲ್ಲಿನ ಪರಮಾಣುಗಳ ಸಂಖ್ಯೆ

ರಸಾಯನ ಶಾಸ್ತ್ರ

ನಾವು ಮೂರು ವಿಧದ ಘನ ಘಟಕ ಕೋಶಗಳನ್ನು ಪರಿಗಣಿಸಬೇಕು ಮತ್ತು ಸರಳತೆಗಾಗಿ ಘಟಕ ಕಣವು ಪರಮಾಣು ಎಂದು ಊಹಿಸಿಕೊಳ್ಳಿ.

ಆದಿಮ ಘನ ಘಟಕ ಕೋಶ

ಆದಿಮ ಘನ ಘಟಕ ಕೋಶವು ಮೂಲೆಯಲ್ಲಿ ಮಾತ್ರ ಪರಮಾಣುಗಳನ್ನು ಹೊಂದಿರುತ್ತದೆ. ಪ್ರತಿ ಪರಮಾಣು ಎಂಟು ಪಕ್ಕದ ಘಟಕ ಕೋಶಗಳ ನಡುವೆ ಒಂದು ಮೂಲೆಯಲ್ಲಿ ಕಾಣುವಂತೆ ಹಂಚಲಾಗಿದೆ.

ಪ್ರತಿಯೊಂದು ಘನಾಕೃತಿಯ ಘಟಕ ಕೋಶದ ಮೂಲೆಗಳಲ್ಲಿ 8 ಪರಮಾಣುಗಳು ಇರುವುದರಿಂದ ಒಂದು ಘಟಕ ಕೋಶದಲ್ಲಿ ಪರಮಾಣುಗಳ ಒಟ್ಟು ಸಂಖ್ಯೆ

$$8 \times {}^{1}/_{8} = 1 \text{ ಪರಮಾಣು.}$$


ಕಾಯ-ಕೇಂದ್ರಿತ ಘನಾಕೃತಿ ಘಟಕ ಕೋಶ

ಕಾಯ ಕೇಂದ್ರಿತ ಘನಾಕೃತಿಯ (ಬಿಸಿಸಿ) ಘಟಕ ಕೋಶವು ಪ್ರತಿಯೊಂದು ಮೂಲೆಗಳನ್ನು ಪರಮಾಣುವನ್ನು ಹೊಂದಿರುವುದರ ಜೊತೆಗೆ ಅದರ ಕಾಯ ಕೇಂದ್ರದಲ್ಲೂ ಸಹ ಒಂದು ಪರಮಾಣುವನ್ನು ಹೊಂದಿರುತ್ತದೆ.

ಕಾಯ ಕೇಂದ್ರಿತ ಘನಾಕೃತಿ (ಬಿಸಿಸಿ) ಘಟಕ ಕೋಶದಲ್ಲಿ

1) 8 ಮೂಲೆಗಳು $\times {}^{1}/_{8}$ ಪ್ರತಿ ಮೂಲೆಯ $8 \times {}^{1}/_{8} = 1$ ಪರಸ್ಪರ ಪರಮಾಣುವಿಗೆ

2. 1 ಕಾಯಕೇಂದ್ರ ಪರಮಾಣು = 1 x1 = 1 ಪರಮಾಣು



ದ್ವಿತೀಯ ಪಿಯುಸಿ

ಒಂದು ಘಟಕ ಕೋಶದ ಒಟ್ಟು ಪರಮಾಣುಗಳ ಸಂಖ್ಯೆ = 2 ಪರಮಾಣುಗಳು

ಮುಖ-ಕೇಂದ್ರಿತ ಘನಾಕೃತಿ ಘಟಕ ಕೋಶ


ಮುಖ-ಕೇಂದ್ರಿತ ಘನಾಕೃತಿ (FCC) ಘಟಕ ಕೋಶವು ಘನದ ಎಲ್ಲಾ ಮುಖಗಳ ಮಧ್ಯಭಾಗದ ಜೊತೆಗೆ ಎಲ್ಲಾ ಮೂಲೆಗಳಲ್ಲೂ ಮತ್ತು ಎಲ್ಲಾ ಮುಖಗಳ ಮಧ್ಯಭಾಗದಲ್ಲಿ ಪರಮಾಣುಗಳನ್ನು ಹೊಂದಿರುತ್ತದೆ.


1)8ಮೂಲೆಗಳ ಪರಮಾಣುಗಳು $\times {}^{1}/_{8}$ ಪ್ರತಿಘಟಕ ಕೋಶದ ಪರಮಾಣು $= 8 \times {}^{1}/_{8} = 1$ ಪರಮಾಣು

2)6 ಮುಖ ಕೇಂದ್ರಿತ ಅಣುಗಳು $\times {}^{1}/_{2}$ ಪರಮಾಣು ಪ್ರತಿ ಘಟಕ ಕೋಶಕ್ಕೆ =

$$= 6 \times \frac{1}{2} = 3 \text{ ಪರಮಾಣುಗಳು}$$

ಪ್ರತಿ ಘಟಕ ಕೋಶದ ಒಟ್ಟು ಪರಮಾಣುಗಳು = 4 ಪರಮಾಣುಗಳು





(a)

ನಿಕಟ ಜೋಡಣೆಯ ರಚನೆಗಳು

ಘನ ವಸ್ತುಗಳಲ್ಲಿ ಘಟಕ ಕಣಗಳು ತುಂಬಾ ಒತ್ತೊತ್ತಾಗಿ ಜೋಡಣೆಯಾಗಿದ್ದು, ಕನಿಷ್ಠ ಖಾಲಿ ಜಾಗವನ್ನು ಬಿಟ್ಟುಕೊಡುತ್ತದೆ. ಘಟಕ ಕಣಗಳನ್ನು ಏಕರೂಪದ ಗಟ್ಟಿ ಗೋಳಗಳೆಂದು ಪರಿಗಣಿಸಿ 3 ಹಂತಗಳಲ್ಲಿ ಮೂರು ಆಯಾಮದ ರಚನೆಯನ್ನು ನಿರ್ಮಿಸುವುದನ್ನು ನೋಡೋಣ.

ಒಂದು ಆಯಾಮದಲ್ಲಿನ ನಿಕಟ ಜೋಡಣೆ

ಒಂದು ಆಯಾಮದ ನಿಕಟ ಜೋಡಣೆಯ ರಚನೆಯಲ್ಲಿ ಗೋಳಗಳನ್ನು ಜೋಡಿಸುವ ಏಕೈಕ ಮಾರ್ಗವೆಂದರೆ ಅದು ಅಡ್ಡ ಸಾಲಿನಲ್ಲಿ ಅವುಗಳನ್ನು ಜೋಡಣೆಗೊಳಿಸುವುದು ಮತ್ತು ಪರಸ್ಪರ ಸ್ಪರ್ಶಿಸುವುದು.

ಈ ಜೋಡಣೆಯಲ್ಲಿ ಪ್ರತಿಯೊಂದು ಗೋಳವು ಎರಡು ನೆರೆಯ ಗೋಳಗಳೊಂದಿಗೆ ಸಂಪರ್ಕವನ್ನು ಹೊಂದಿದೆ. ಕಣಕ್ಕೆ ಅತಿ ಹತ್ತಿರದ ನೆರೆಯ ಸಂಖ್ಯೆಯನ್ನು ಅದರ ಸಮನ್ವಯ ಸಂಖ್ಯೆ ಎಂದು ಕರೆಯಲಾಗುತ್ತದೆ.



(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಸೊಲ್ಯೂಷನ್ಸ್_ಕೊಲಿಗೇಟಿವ್ ಪ್ರಾಪರ್ಟೀಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3fdLgdB

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ಹಗ್ಗದಿಂದ ಹಾವುಗಳನ್ನು ಸೃಷ್ಟಿಸುವುದನ್ನು ಬಿಡಿ.
ಚಿಂತಿಸಲು ನಿಮಗೆ ಬಹಳಷ್ಟು ವಿಷಯಗಳು ಇರುತ್ತವೆ.
–ಚಿತ್ರಾ ಬ್ಯಾನರ್ಜಿ ದಿವಾಕರುಣಿ

ಚಾಮರಾಜನಗರದ ದುರಂತ: ಹೈಕೋರ್ಟ್ ಕಣ್ಗಾವಲಿನ ತನಿಖೆಯೇ ಮುಂದುವರಿಯಲಿ

ಈ ತಿಂಗಳ 3ರಂದು ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ 23 ಮಂದಿ ಸೇರಿದಂತೆ ಆ ಜಿಲ್ಲೆಯಲ್ಲಿ 24 ಮಂದಿ ಕೋವಿಡ್ ರೋಗಿಗಳು ಒಂದೇ ದಿನ ಮೃತಪಟ್ಟಿರುವುದಕ್ಕೆ ಆಮ್ಲಜನಕದ ಕೊರತೆಯೇ ಕಾರಣ ಎಂದು ಮೃತರ ಸಂಬಂಧಿಕರು ಹೇಳಿದ್ದಾರೆ. ಆರಂಭಿಕ ಹಂತದಲ್ಲೇ ಹೊರಬಂದಿರುವ ವಿಡಿಯೊ ದೃಶ್ಯಾವಳಿಗಳು ಅಲ್ಲಿನ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಉದ್ಭವಿಸಿದ್ದ ಕೋಲಾಹಲದ ಸ್ಥಿತಿಯನ್ನು ತೆರೆದಿಟ್ಟಿವೆ. ಆಮ್ಲಜನಕ ಪೂರೈಕೆಗೆ ಸಂಬಂಧಿಸಿದಂತೆ ಚಾಮರಾಜನಗರ ಮತ್ತು ಮೈಸೂರು ಜಿಲ್ಲಾಡಳಿತಗಳ ಉನ್ನತ ಮಟ್ಟದ ಅಧಿಕಾರಿಗಳ ನಡುವೆ ವಾಟ್ಸ್‌ಆ್ಯಪ್‌ನಲ್ಲಿ ನಡೆದಿರುವ ಸಂಭಾಷಣೆಗಳ ವಿವರಗಳು, ಇಬ್ಬರೂ ಜಿಲ್ಲಾಧಿಕಾರಿಗಳು ಪರಸ್ಪರ ಆರೋಪ- ಪ್ರತ್ಯಾರೋಪ ಮಾಡಿಕೊಂಡಿರುವುದು ಕೂಡ ಆಮ್ಲಜನಕದ ಕೊರತೆಯನ್ನೇ ಕೇಂದ್ರೀಕರಿಸಿವೆ. ಈ ದುರ್ಘಟನೆಯ ಕುರಿತು ಏಕಕಾಲಕ್ಕೆ ಐದು ತನಿಖೆಗಳು ಪ್ರಗತಿಯಲ್ಲಿವೆ. ಘಟನೆ ನಡೆದ ತಕ್ಷಣವೇ ಐಎಎಸ್ ಅಧಿಕಾರಿ ಶಿವಯೋಗಿ ಸಿ. ಕಳಸದ ನೇತೃತ್ವದಲ್ಲಿ ಪ್ರಾಥಮಿಕ ತನಿಖೆಗೆ ರಾಜ್ಯ ಸರ್ಕಾರ ಆದೇಶಿಸಿತ್ತು. ರಾಜ್ಯ ಮಾನವ ಹಕ್ಕುಗಳ ಆಯೋಗವೂ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ. ಆರೋಗ್ಯ ಇಲಾಖೆಯು ಆಂತರಿಕ ತನಿಖೆ ಕೈಗೆತ್ತಿಕೊಂಡಿದೆ. ಸಂವಿಧಾನದ 226ನೇ ವಿಧಿಯ ದತ್ತವಾಗಿರುವ ಅಧಿಕಾರ ಚಲಾಯಿಸಿ ಮಧ್ಯಪ್ರವೇಶ ಮಾಡಿರುವ ಹೈಕೋರ್ಟ್, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಉಸ್ತುವಾರಿಯಲ್ಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ಎ.ಎನ್. ವೇಣುಗೋಪಾಲ ಗೌಡ ಮತ್ತು ಕೆ.ಎನ್. ಕೇಶವ ನಾರಾಯಣ ಅವರನ್ನೊಳಗೊಂಡ ತನಿಖಾ ಸಮಿತಿಯನ್ನು ನೇಮಿಸಿದೆ. ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಸಮಿತಿಗೆ ಸೂಚಿಸಿತ್ತು. ಹೈಕೋರ್ಟ್‌ನ ಮಧ್ಯಪ್ರವೇಶದ ಸುಳಿವು ಅರಿಯುತ್ತಲೇ ರಾಜ್ಯ ಸರ್ಕಾರವು ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ್ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಿ ಆದೇಶ ಹೊರಡಿಸಿದೆ. ಗಂಭೀರ ಸ್ವರೂಪದ ಆರೋಪಗಳಿರುವ ಪ್ರಕರಣಗಳು ಎದುರಾದ ಸಂದರ್ಭದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದವರು ತನಿಖೆಗೆ ಆದೇಶಿಸಿ ವಿವಾದವನ್ನು ತಣ್ಣಗಾಗಿಸಲು ಯತ್ನಿಸುವುದು ಭಾರತದಲ್ಲಿ ಹೊಸದೇನೂ ಅಲ್ಲ. ಆಡಳಿತದಲ್ಲಿರುವ ಎಲ್ಲ ರಾಜಕೀಯ ಪಕ್ಷಗಳೂ ಅಂತಹ ಪ್ರಯತ್ನ ಮಾಡುತ್ತಲೇ ಬಂದಿವೆ. ಚಾಮರಾಜನಗರದ ಪ್ರಕರಣದಲ್ಲಿ ಹೈಕೋರ್ಟ್ ಮಧ್ಯಪ್ರವೇಶ ಬಳಿಕವೂ ರಾಜ್ಯ ಸರ್ಕಾರ ತರಾತುರಿಯಲ್ಲಿ ಆಯೋಗವೊಂದನ್ನು ನೇಮಿಸಿದೆ. ಇದರಿಂದಾಗಿ ತನಿಖಾ ವರದಿಗಳಲ್ಲೇ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿ ದುರ್ಘಟನೆಗೆ ಕಾರಣರಾದವರು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ದೊರೆಯಬಹುದೆಂಬ ಆತಂಕ ಕಾನೂನು ತಜ್ಞರ ವಲಯದಿಂದಲೇ ಕೇಳಿಬರುತ್ತಿದೆ.

ಚಾಮರಾಜನಗರದಲ್ಲಿ ನಡೆದಿರುವ ದುರಂತವು ಸಾಮಾನ್ಯ ಪ್ರಕರಣವಲ್ಲ. 'ಕೋವಿಡ್‌ರೋಗಿಗಳು ಆಮ್ಲಜನಕದ ಕೊರತೆಯಿಂದ ಮೃತಪಟ್ಟಲ್ಲಿ ಅಂತಹ ದುರ್ಘಟನೆಗೆ ಕಾರಣರಾದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಮಾನವ ಹತ್ಯೆಯ ಆರೋಪ ಹೊರಿಸಬೇಕು' ಎಂದು ಅಲಹಾಬಾದ್ ಹೈಕೋರ್ಟ್ ಇಂತಹುದೇ ಪ್ರಕರಣವೊಂದರಲ್ಲಿ ಇತ್ತೀಚೆಗೆ ಹೇಳಿದೆ. ಚಾಮರಾಜನಗರದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋವಿಡ್ ರೋಗಿಗಳ ಚಿಕಿತ್ಸಾ ವ್ಯವಸ್ಥೆ, ರಾಜ್ಯ ಸರ್ಕಾರದ ಸಿದ್ಧತೆ, ಆಮ್ಲಜನಕ ಬೇಡಿಕೆ ಮತ್ತು ಪೂರೈಕೆ, ಆರೋಗ್ಯ ಇಲಾಖೆ, ಜಿಲ್ಲಾಡಳಿತ ಮತ್ತು ಆರೋಗ್ಯ ಸಚಿವರ ಮೇಲಿನ ಕರ್ತವ್ಯಲೋಪದ ಆರೋಪ ಸೇರಿದಂತೆ ಎಲ್ಲವನ್ನೂ ತನಿಖೆಗೆ ಒಳಪಡಿಸಬೇಕಿದೆ. ಹೈಕೋರ್ಟ್ ಮಧ್ಯಪ್ರವೇಶದ ಕಾರಣದಿಂದ ತಾನು ನೇಮಿಸಿರುವ ಸ್ವಗಿತಗೊಳಿಸುವುದಾಗಿ ಮಾನವ ಹಕ್ಕುಗಳ ಆಯೋಗ ಪ್ರಕಟಿಸಿದೆ. ಪ್ರಕರಣ ವಿಚಾರಣೆಗೆ ಬಾಕಿ ಇರುವಾಗಲೇ ರಾಜ್ಯ ಸರ್ಕಾರ ತರಾತುರಿಯಲ್ಲಿ ಆಯೋಗವೊಂದನ್ನು ನೇಮಕ ಮಾಡಿರುವುದಕ್ಕೆ ಹೈಕೋರ್ಟ್ ಈಗಾಗಲೇ ಅಸಮಾಧಾನ ವ್ಯಕ್ತಪಡಿಸಿದೆ. ಸರ್ಕಾರದ ನಡವಳಿಕೆಯು ಶಿಷ್ಟಾಚಾರವನ್ನು ಮೀರಿದ ಎಂಬ ಅಭಿಪ್ರಾಯವನ್ನು ನ್ಯಾಯಾಲಯ ವ್ಯಕ್ತಪಡಿಸಿದೆ. ತರಾತುರಿಯಲ್ಲಿ ನ್ಯಾಯಾಂಗ ತನಿಖೆಗೆ ಆದೇಶ ಹೊರಡಿಸಿರುವ ಕುರಿತು ಈಗಾಗಲೇ ಸಾರ್ವಜನಿಕ ವಲಯದಲ್ಲಿ ಸಂಶಯ ವಿದ್ದಿದೆ. ಅದು ಮುಚ್ಚುವ ಬಲಗೊಳ್ಳುವುದಕ್ಕೆ ಅವಕಾಶ ನೀಡಬಾರದು. ತಪ್ಪುಗಳನ್ನು ಮುಚ್ಚಿಡುವುದು ಮತ್ತು ತಪ್ಪಿತಸ್ಥರನ್ನು ರಕ್ಷಿಸುವುದು ಸರ್ಕಾರದ ಆದ್ಯತೆಯಾಗಬಾರದು. ಹೈಕೋರ್ಟ್ ನೇಮಿಸಿದ್ದ ತನಿಖಾ ಸಮಿತಿ ದಾಖಲೆಗಳನ್ನು ಪರಿಶೀಲಿಸಿ ಮಂಗಳವಾರ ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ. ಐಎಎಸ್ ಅಧಿಕಾರಿ ನೇತೃತ್ವದಲ್ಲಿ ಆರಂಭಿಸಿದ್ದ ತನಿಖೆಯ ಆಧಾರದಲ್ಲಿ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ನ್ಯಾಯಾಲಯಕ್ಕೆ ರಾಜ್ಯ ಸರ್ಕಾರ ವಾಗ್ದಾನ ನೀಡಿರುವುದು ಸ್ವಾಗತಾರ್ಹ. ದುರ್ಘಟನೆಗೆ ಸಂಬಂಧಿಸಿದಂತೆ ಸ್ವತಂತ್ರ ತನಿಖೆ, ಮೃತರ ಸಂಬಂಧಿಕರಿಗೆ ಹೆಚ್ಚಿನ ಪರಿಹಾರ ನೀಡುವುದು ಸೇರಿದಂತೆ ಬಾಕಿ ಇರುವ ಎಲ್ಲ ಪ್ರಕ್ರಿಯೆಗಳನ್ನು ಹೈಕೋರ್ಟ್ ನೇಮಿಸಿರುವ ಸಮಿತಿಯ ಮೂಲಕವೇ ನಡೆಯುವುದು ಸೂಕ್ತ. ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಿ, ಲೋಪವನ್ನು ಪತ್ತೆ ಮಾಡುವ ಮೂಲಕ ಭವಿಷ್ಯದಲ್ಲಿ ಇಂತಹ ಅನಾಹುತಗಳು ಮರುಕಳಿಸುವುದನ್ನು ತಡೆಯುವುದಕ್ಕೆ ಸರ್ಕಾರ ಮುಂದಾಗಬೇಕು. ಕಾನೂನು ತಜ್ಞರ ಪ್ರಕಾರ, ನ್ಯಾಯಾಂಗ ತನಿಖೆಗೆ ಆಯೋಗ ರಚಿಸಿರುವ ಸರ್ಕಾರದ ತೀರ್ಮಾನಕ್ಕೆ ತಡೆ ನೀಡುವ ಅಥವಾ ಆಯೋಗದ ವರದಿಯನ್ನು ಪರಾಮರ್ಶಿಸುವ ಅಧಿಕಾರ ಹೈಕೋರ್ಟ್‌ಗೆ ಇದೆ. ಅಂತಹ ಬೆಳವಣಿಗೆಗಳಿಂದ ಮುಜುಗರಕ್ಕೀಡಾಗುವ ಬದಲಿಗೆ ಹೈಕೋರ್ಟ್ ಕಣ್ಗಾವಲಿನ ತನಿಖೆಗೆ ಸಹಕಾರ ನೀಡುವುದು ಜನಸ್ನೇಹಿಯಾದ ಕ್ರಮವೂ ಆಗುತ್ತದೆ.



ರಾಜ್ಯ ಸರ್ಕಾರ ಈಗ ತನ್ನ ನಿಲುವಿನಿಂದ ಹಿಂದೆ ಸರಿದು, ಹೈಕೋರ್ಟ್ ಕಣ್ಗಾವಲಿನಲ್ಲಿ ನಡೆಯುವ ತನಿಖೆಗೆ ಸಂಪೂರ್ಣ ಸಹಕಾರ ನೀಡುವುದು ಸರಿಯಾದ ಮಾರ್ಗ

ದಿನದ ಟ್ವೀಟ್



ನಾಚಿಕೆಗೇಡಿನ ಸಂಗತಿ

ಬಿಹಾರದ ಬಕ್ಸರ್‌ನಲ್ಲಿ ಸೋಮವಾರ ಗಂಗಾ ನದಿಯಲ್ಲಿ ಕೆಲವು ಮೃತದೇಹಗಳು ತೇಲುತ್ತಿದ್ದುದು ಕಂಡುಬಂದಿತ್ತು. ಉತ್ತರಪ್ರದೇಶದ ಗಾಜಿಯಾಪುರದ ಗಂಗಾ ನದಿಯಲ್ಲಿ ತೇಲುತ್ತಿದ್ದ ಮೃತದೇಹಗಳು ಮಂಗಳವಾರ ಪತ್ತೆಯಾಗಿವೆ. ಬಿಹಾರ ಮತ್ತು ಉತ್ತರಪ್ರದೇಶ ರಾಜ್ಯ ಸರ್ಕಾರಗಳು ಏನು ಮಾಡುತ್ತಿವೆ? ಮೃತದೇಹಗಳನ್ನು ನಿರ್ವಹಿಸುವಲ್ಲಿಯೂ ಆಡಳಿತವು ವಿಫಲವಾಗಿರುವುದೇ? ಇದು ಅತ್ಯಂತ ನಾಚಿಕೆಗೇಡಿನ ಸಂಗತಿ.

ಅಮಿತ್ ಸಕ್ಸೇನಾ, ಸುದ್ದಿ ವಿಶ್ಲೇಷಕ

25 ವರ್ಷಗಳ ಹಿಂದೆ

ಭಾನುವಾರ, 12-5-1996

● **ಕಾಂಗ್ರೆಸ್ ಬೆಂಬಲಕ್ಕೆ ರಾಷ್ಟ್ರೀಯ ರಂಗ ಯತ್ನ**

ನವದೆಹಲಿ, ಮೇ 11 (ಪಿಟಿಐ)– ಕೇಂದ್ರದಲ್ಲಿ ಬಿಜೆಪಿಯೇತರ ಸರ್ಕಾರ ರಚಿಸುವ ನಿಟ್ಟಿನಲ್ಲಿ ಎಡರಂಗ ಮತ್ತು ಜನತಾದಳ ಇಂದು ಗಂಭೀರ ಪ್ರಯತ್ನಗಳನ್ನು ಆರಂಭಿಸಿದವು. ಸಿಪಿಎಂ ಮುಖಂಡರಾದ ಜ್ಯೋತಿ ಬಸು ಮತ್ತು ಹರ್‌ಕಿಶನ್‌ಸಿಂಗ್ ಸುರ್ಜಿತ್ ಅವರು ಇಂದು ರಾಷ್ಟ್ರಪತಿಯವರನ್ನು ಭೇಟಿಯಾಗಿ ಸರ್ಕಾರ ರಚಿಸಲು ಆಹ್ವಾನಿಸುವಂತೆ ಕೋರಿದರು.

ಈ ಮಧ್ಯೆ ಜನತಾದಳವು, ಒಂದೊಮ್ಮೆ ತಾನು ಸರ್ಕಾರ ರಚಿಸಲು ಕಾಂಗ್ರೆಸ್ ಬೇಷರತ್ ಬೆಂಬಲ ನೀಡಬೇಕು, ಇಲ್ಲವಾದರೆ ಪಿ.ವಿ.ನರಸಿಂಹ ರಾವ್ ಹೊರತಾದ ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಜನತಾದಳ ಬೆಂಬಲ ನೀಡುವುದಾಗಿ ಘೋಷಿಸಿದೆ.

● **ಸರ್ಕಾರ ರಚನೆಗೆ ಬಿಜೆಪಿ ಯತ್ನ**

ನವದೆಹಲಿ, ಮೇ 11 (ಪಿಟಿಐ)– ಬಿಜೆಪಿ ಸಂಸದೀಯ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಸರ್ಕಾರದ ನೇತೃತ್ವ ವಹಿಸುವಂತೆ ಆಹ್ವಾನ ನೀಡಬೇಕೆಂದು ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾ ಅವರಿಗೆ ಮನವಿ ಮಾಡುವ ಮೂಲಕ ಪಕ್ಷ ಕೇಂದ್ರದಲ್ಲಿ ಅಧಿಕಾರ ಹಿಡಿಯುವತ್ತ ತನ್ನ ಮೊದಲ ಹೆಜ್ಜೆಯಿರಿಸಿತು.

50 ವರ್ಷಗಳ ಹಿಂದೆ

ಬುಧವಾರ, 12-5-1971

● **'ಸಾಧ್ಯವಾದಷ್ಟು ಶೀಘ್ರ ಸಮಾಜವಾದಿ ಸಮಾಜ ನಿರ್ಮಾಣವೇ ಗುರಿ'**

ಬೆಂಗಳೂರು, ಮೇ 11– ಸಾಧ್ಯವಾದಷ್ಟೂ ಶೀಘ್ರ ಕಾಲದಲ್ಲಿ ಸಮಾಜವಾದಿ ಸಮಾಜ ನಿರ್ಮಾಣವೇ ಸಂಸ್ಥಾ ಕಾಂಗ್ರೆಸ್ಸಿನ ಗುರಿ ಎಂದು ಎಂಪಿಸಿಸಿ ಅಧ್ಯಕ್ಷ ಶ್ರೀ ವೀರೇಂದ್ರ ಪಾಟೀಲ್ ಅವರು ಇಂದು ಇಲ್ಲಿ ತಿಳಿಸಿದರು.

ಒಂದೇ ಗುರಿಯಿರುವ ಎರಡು ಪಕ್ಷಗಳಿರುವ ಪ್ರಶ್ನೆಯಲ್ಲವೆಂದೂ ಕಾರ್ಯಕ್ರಮವನ್ನು ಹೇಗೆ, ಯಾವ ವಿಧಾನ ಅನುಸರಿಸಿ ಗುರಿ ಸಾಧಿಸಲಾಗುವುದು ಎಂಬುದು ಮುಖ್ಯವೆಂದೂ ಶ್ರೀಯುತರು ತಿಳಿಸಿದರು. ಎರಡೂ ಕಾಂಗ್ರೆಸ್ಸುಗಳ ಧ್ಯೇಯ ಹಾಗೂ ಕಾರ್ಯಕ್ರಮ ಒಂದೇ ಆಗಿರುವಾಗ ಮುಂದಿನ ಚುನಾವಣೆಯಲ್ಲಿ ಜನತೆಯ ಮುಂದೆ ಹೊಸದೇನನ್ನು ಇಡುವಿರಿ ಎಂಬ ಪ್ರಶ್ನೆಗೆ ಹೀಗೆ ಉತ್ತರವಿತ್ತರು.

ನಾಡಿನ ಸರ್ವಶಕ್ತನ ಎದುರು ಮಮತಾ ನಡೆಸಿದ ಹೋರಾಟ ಮೆಚ್ಚುವಂಥದ್ದು

ಚುನಾವಣೆ: ಗೆದ್ದವರು, ಸೋತವರಿಗೆ ಪಾಠ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಶೌರ್ಯವು ಮನುಷ್ಯರನ್ನು ಹಿಂದಿನಿಂದಲೂ ಆಕರ್ಷಿಸುತ್ತಿದೆ. ತಮ್ಮನ್ನು ಸಿಂಹ, ಹುಲಿ, ಚಿರತೆ ಎಂದೆಲ್ಲ ಕರೆದುಕೊಳ್ಳುವುದು ಅವರಿಗೆ ಸಂತಸ ನೀಡುತ್ತದೆ. ಪಶ್ಚಿಮ ಬಂಗಾಳದ ಆಡಳಿತ ಚುಕ್ಕಾಣಿಯನ್ನು ಮೂರನೆಯ ಬಾರಿ ಹಿಡಿದಿರುವ ಮಮತಾ ಬ್ಯಾನರ್ಜಿ ಅವರನ್ನು ಬಂಗಾಳದ ಹುಲಿ ಎಂದು ಕರೆಯುವುದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಸಮಸ್ಯೆಗಳು ಹೆಚ್ಚಾದಾಗಲೇ ಮತ್ತಷ್ಟು ದೃಢವಾಗುವ ಮನಸ್ಸು, ವ್ಯವಸ್ಥೆ ಕುಸಿಯುತ್ತಿದ್ದಾಗಲೂ ಸ್ನೇಹಿತರು ದೂರವಾಗುತ್ತಿದ್ದಾಗಲೂ ಆತ್ಮವಿಶ್ವಾಸ ಹೆಚ್ಚಾಗುವ ಅಪರೂಪದ ಗುಣ, ಗೊಂದಲ ಎದುರಾದಾಗ ತಮ್ಮನ್ನು ತಾವೇ ಸಂತೈಸಿಕೊಳ್ಳುವುದು, ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಉನ್ನತ ಆದರ್ಶವನ್ನು ನೆಚ್ಚಿಕೊಂಡಿರುವುದು, ಭೀತಿ ಹೆಚ್ಚಾದಂತೆಲ್ಲ ದೇಹದಲ್ಲಿನ ಜ್ವಾಲೆಯೂ ಹೆಚ್ಚಾಗುವುದು, ಅಪಾಯ ಹೆಚ್ಚಾದಂತೆಲ್ಲ ಧೈರ್ಯವೂ ಹೆಚ್ಚುತ್ತ ಸಾಗುವುದು, ಬಂದೂಕಿನ ಬಾಯಲ್ಲಿ ನಿಂತಾಗಲೂ ಹೆದರದಿರುವುದು... ಇವೆಲ್ಲ ಶೌರ್ಯವಂತ ವ್ಯಕ್ತಿಯಲ್ಲಿ ಕಾಣಿಸುವ ಗುಣಗಳು.

ಬಂಗಾಳದಲ್ಲಿ ಈಗ ಕೊನೆಗೊಂಡಿರುವ ಚುನಾವಣೆಯ ಸಂದರ್ಭದಲ್ಲಿ ಮಮತಾ ಅವರು ಮುಂಚೂಣಿಯಲ್ಲಿ ನಿಂತು ಪಕ್ಷ ಮುನ್ನಡೆಸಿದರು. ಮೇಲೆ ಹೇಳಿದ ಎಲ್ಲ ಗುಣಗಳನ್ನು ತೋರಿಸಿದರು. ನಾಡಿನ ಸರ್ವಶಕ್ತನ ಎದುರು ಹೋರಾಡುವಾಗ, ದುರ್ಬಲ ವ್ಯಕ್ತಿ ಇಂತಹ ಗುಣಗಳನ್ನು ಪ್ರದರ್ಶಿಸಿದಾಗ ಜನ ಅದನ್ನು ಮೆಚ್ಚಿಕೊಳ್ಳುತ್ತಾರೆ.

ವಿಧಾನಸಭೆಗಳಿಗೆ ಈಗಷ್ಟೇ ನಡೆದಿರುವ ಚುನಾವಣೆ ಹಾಗೂ ಕೊರೊನಾ ವೈರಾಣುವಿನ ಹಾವಳಿಯಲ್ಲಿ, ಗೆದ್ದವರಿಗೆ ಮತ್ತು ಸೋತವರಿಗೆ ಎರಡು ಮುಖ್ಯ ಪಾಠಗಳು ಇವೆ. ನೀವು ಜನರನ್ನು ಉದ್ದೇಶಿಸಿ ಕೆಲಸ ಮಾಡುತ್ತಿರಬಹುದು ಅಥವಾ ವೈರಾಣುವಿನ ವಿರುದ್ಧ ಹೋರಾಟ ನಡೆಸಿರಬಹುದು, ದುರಹಂಕಾರ ಮತ್ತು ಅತಿಯಾದ ಆತ್ಮವಿಶ್ವಾಸವು ನಿಮ್ಮನ್ನು ನಾಶ ಮಾಡುತ್ತದೆ ಎಂಬುದು ಮೊದಲ ಪಾಠ. ಮನುಕುಲ ಒಂದಾದರೆ ಮಾತ್ರ ವೈರಾಣುವಿನ ವಿರುದ್ಧ ಜಯ ಸಾಧಿಸಬಹುದು ಎಂಬುದು ಎರಡನೆಯ ಪಾಠ.

ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕೇರಳದಲ್ಲಿ ಬಿಜೆಪಿಗೆ ಭಾರಿ ಸೋಲಾಯಿತು. ಪುದುಚೇರಿ ಮತ್ತು ಅಸ್ಸಾಂನಲ್ಲಿ ಮಾತ್ರ ಪಕ್ಷ ಜಯ ಸಾಧಿಸಿತು. ಬಂಗಾಳದಲ್ಲಿ ಬಿಜೆಪಿಯ ಸಂಖ್ಯಾಬಲ ಹೆಚ್ಚಾಯಿತು ಎಂಬುದು ನಿಜ. ಆದರೆ ಮಮತಾ ಅವರ ಜಯದ ಬೆಳಕಿನ ಎದುರು ಬಿಜೆಪಿಯ ಸಾಧನೆ ಅಪ್ರಸ್ತುತ. ಇಡೀ ಜಗತ್ತು ಹಾಗೂ ಮಾಧ್ಯಮಗಳ ದೃಷ್ಟಿ ಬಂಗಾಳದ ಮೇಲೆ ನೆಟ್ಟಿತ್ತು. ಬಂಗಾಳದಲ್ಲಿ ಬಿಜೆಪಿ ಗೆದ್ದರೆ ಆ ಪಕ್ಷದ ಬಹುಸಂಖ್ಯಾತವಾದಿ ರಾಜಕಾರಣ, ಇನ್ನೊಬ್ಬರನ್ನು ನೆಲಸಮಗೊಳಿಸುವ ತಂತ್ರಗಳು ಇನ್ನಷ್ಟು ವೇಗ ಪಡೆದುಕೊಳ್ಳುತ್ತವೆ ಎಂಬ ಭೀತಿ ಹಲವರಲ್ಲಿ ಇತ್ತು.

ಎಲ್ಲರನ್ನೂ ಒಳಗೊಳ್ಳುವ, ಸಾಗರದಂತೆ ವಿಶಾಲವಾದ ಹಿಂದೂ ತಾತ್ವಿಕತೆಗೆ ವಿರುದ್ಧವಾಗಿ ತನ್ನದೇ ಆದ 'ಹಿಂದುತ್ವ' ಸಿದ್ಧಾಂತವನ್ನು ಜಾರಿಗೆ ತರುವುದು, ಭಿನ್ನಾಭಿಪ್ರಾಯ ದಾಖಲಿಸುವವರನ್ನು ದೇಶದ್ರೋಹಿಗಳು ಎಂದು ಹೇಳುವ ಸಂಕುಚಿತ ರಾಷ್ಟ್ರೀಯವಾದವನ್ನು ಪ್ರತಿಪಾದಿಸುವುದು, ಅಕಡೆಮಿಕ್ ಹಾಗೂ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಅಗೌರವ, ತನಿಖಾ ಸಂಸ್ಥೆಗಳ ಸ್ವಾಯತ್ತತೆಯನ್ನು ಕುಗ್ಗಿಸಿ ಅವುಗಳನ್ನು ತಮ್ಮ ಟೀಕಾಕಾರರು ಮತ್ತು ರಾಜಕೀಯ ವಿರೋಧಿಗಳನ್ನು ಬೆದರಿಸಲು ಬಳಸಿಕೊಳ್ಳುವುದು, ತನ್ನ ಸಿದ್ಧಾಂತವನ್ನೇ ಜನ ಪಾಲಿಸಬೇಕು ಎಂಬ ಉದ್ದೇಶದಿಂದ ಅನೈತಿಕ ಪೊಲೀಸ್‌ಗಿರಿ ನಡೆಸುವುದು... ಇವೆಲ್ಲವೂ ದೇಶದ ರಾಜಕಾರಣವನ್ನು ಅಶ್ಲೀಲಗೊಳಿಸಿವೆ. ಕೇಸರಿ ಪಾಳಯದ ಗುಂಪುಗಳು ನಡೆಸಿದ ಹಿಂಸಾಕೃತ್ಯಗಳು ಸಮಾಜದಲ್ಲಿ ಭೀತಿ ಸೃಷ್ಟಿಸಿದ್ದವು.

ಈ ಮಾದರಿಯ ರಾಜಕಾರಣದಲ್ಲಿ ಎಡೆಬಿಡದೆ ತೊಡಗಿದ ಬಿಜೆಪಿ ನಾಯಕತ್ವವು, ದುರಹಂಕಾರ ಮತ್ತು ಅತಿಯಾದ ಆತ್ಮವಿಶ್ವಾಸದಲ್ಲಿ, ಅಧಿಕಾರದಿಂದ ಕುರುಡಾಗಿ, ತನ್ನದೇ ಮತದಾರರ ಪೈಕಿ ಬಹುದೊಡ್ಡ ಸಮೂಹವನ್ನು ದೂರ ಮಾಡಿಕೊಳ್ಳುತ್ತಿದ್ದೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಲಿಲ್ಲ. ಬಿಜೆಪಿಯ ಸಾಂಪ್ರದಾಯಿಕ ಮತದಾರರಲ್ಲದವರು, ಬೇರೆ ಪಕ್ಷಗಳ ರಾಜಕಾರಣದಿಂದ ಬೇಸತ್ತು ಬಿಜೆಪಿ ಕಡೆ ಬಂದಿದ್ದವರು ದೂರವಾದರು. ಬಿಜೆಪಿಯ ರಾಜಕಾರಣವು ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಮಾದರಿಗೆ ದಾರಿ ಮಾಡಿಕೊಡಲಿಲ್ಲ. ಎಲ್ಲರನ್ನೂ ಒಳಗೊಳ್ಳುವ ಮಾದರಿಯ ಹೊರತು ಬೇರೆ ಯಾವುದೇ ಮಾದರಿಯು ಸಮಾನ ಅಭಿವೃದ್ಧಿಯನ್ನು ಸಾಧಿಸುವುದಿಲ್ಲ ಎಂಬುದನ್ನು ಬಿಜೆಪಿ ಗುರುತಿಸಲಿಲ್ಲ. ಸಮಾಜದ ವಿವಿಧ ಸಮುದಾಯಗಳ ನಡುವೆ ಸಂಘರ್ಷ ನಿರಂತರವಾಗಿದ್ದರೆ ಯಾವುದೇ ಉದ್ಯಮ, ವಹಿವಾಟು ಬೆಳವಣಿಗೆ ಕಾಣುವುದಿಲ್ಲ. ಬಂಗಾಳದ ಚುನಾವಣೆಯು ಪಕ್ಷದ ಪಾಲಿಗೆ ಮಹತ್ವದ್ದಾಗಿತ್ತು. ಇದು ಬಿಜೆಪಿ ಪಾಲಿಗೆ ನಿರ್ಣಾಯಕ ಸೋಲು ತಂದಿತ್ತಿದೆ.

ಮಮತಾ ಮತ್ತು ಅವರ ಪಕ್ಷದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕು. ಭಾರಿ ಜಯದಲ್ಲಿಯೂ ಅವರು ವೈಯಕ್ತಿಕವಾಗಿ ಸೋತಿದ್ದಾರೆ. ಇದು ಅವರು ಇನ್ನಷ್ಟು ತಗ್ಗಿ-ಬಗ್ಗಿ ನಡೆಯಬೇಕು ಎಂಬ ಎಚ್ಚರಿಕೆಯ ಪಾಠ. 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯು ಮಮತಾ ಅವರ ಕೋಟೆಗೆ ಲಗ್ಗೆ ಇಟ್ಟು, 18 ಸ್ಥಾನ ಗೆದ್ದುಕೊಂಡಿತ್ತು. ಬಿಜೆಪಿಯ ಯಾವ ನಾಯಕರಿಗೂ ಕಡಿಮೆ ಇಲ್ಲದಂತಹ ಸರ್ವಾಧಿಕಾರ ಮಮತಾ ಅವರದ್ದು.



ಇದನ್ನು ಅವರಿಗೆ ನೆನಪಿಸಿಕೊಡಬೇಕು! ಹಿಂದಿನ ಎರಡು ಆಡಳಿತ ಅವಧಿಗಳಲ್ಲಿ ಅವರ ಸ್ವಭಾವವು ಅತಾರ್ಕಿಕವಾಗಿ ಬದಲಾಗಿದ್ದಿದೆ, ಸೇಡು ತೀರಿಸಿಕೊಳ್ಳುವ ರಾಜಕಾರಣ ನಡೆಸಿದ್ದೂ ಇದೆ. ಮಮತಾ ಅವರನ್ನು ಟೀಕಿಸಿದವರು ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಕಾರ್ಯಕರ್ತರಿಂದ ಏಟು ತಿಂದಿದ್ದಾರೆ. ಅಲ್ಲಿ ಅಕಡೆಮಿಕ್ ವಲಯದವರು ಸೇರಿದಂತೆ ಹಲವರನ್ನು ಬಂಧಿಸಿದ್ದೂ ಇದೆ. ಮೂರು ದಶಕಗಳಿಗಿಂತ ಹೆಚ್ಚಿನ ಅವಧಿಯಿಂದ ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸುತ್ತಿದ್ದ ಎಡಪಕ್ಷಗಳನ್ನು ಮಮತಾ ಅವರು ಹತ್ತು ವರ್ಷಗಳ ಹಿಂದೆ ಏಕಾಂಗಿಯಾಗಿ ಅಧಿಕಾರದಿಂದ ಕೆಳಗೆ ಇಳಿಸಿದರು. ಸಿಪಿಎಂ ಪಕ್ಷವು ಕುಸಿತ ಕಂಡಿತ್ತು, ಜನರಿಗೂ ಅವರ ಆಡಳಿತ ಸಾಕಾಗಿತ್ತು. ಬಿಜೆಪಿಯಂತೆಯೇ ಎಡಪಕ್ಷದವರು ಕೂಡ, 'ನೀವು ನಮ್ಮ ಪಕ್ಷದ ವಿರುದ್ಧವಾಗಿದ್ದೀರಿ ಎಂದಾದರೆ ರಾಜ್ಯದ ವಿರುದ್ಧ ಇದ್ದೀರಿ ಎಂದು ಅರ್ಥ' ಎನ್ನುತ್ತಿದ್ದರು. ಪಕ್ಷದ ನಿಲುವನ್ನು ಒಪ್ಪದಿದ್ದವರಲ್ಲಿ ಎಡಪಕ್ಷಗಳ ಕಾರ್ಯಕರ್ತರು ಭಯ ಹುಟ್ಟಿಸುತ್ತಿದ್ದರು.

ಮಮತಾ ಅವರು ಕೆಲವು ಪುಂಡರನ್ನೂ ಟಿಎಂಸಿಗೆ ಸೇರಿಸಿಕೊಂಡರು. ಮಮತಾ ಅವರ ಬೆಂಬಲದೊಂದಿಗೆ ಹಿಂಸಾಚಾರ ಮುಂದುವರಿಯಿತು. ತಮ್ಮ ಕುಟುಂಬದವರಿಗೆ ಹೆಚ್ಚು ಅನುಕೂಲ ಮಾಡಿಕೊಡುತ್ತಾರೆ ಎಂಬ ಆರೋಪ ಮಮತಾ ವಿರುದ್ಧ ಬಂತು. ಪಕ್ಷದಲ್ಲಿ ಸಮರ್ಥರು ಹಾಗೂ ಪ್ರಾಮಾಣಿಕರಿಗಿಂತ ಹೆಚ್ಚಿನ ಆದ್ಯತೆಯನ್ನು ತಮಗೆ ನಿಷ್ಠರಾಗಿರುವವರಿಗೆ ನೀಡುತ್ತಿದ್ದಾರೆ ಎಂದೂ ಆರೋಪಿಸಲಾಯಿತು. ವ್ಯಾಪಕ ಭ್ರಷ್ಟಾಚಾರ ಹಾಗೂ ಹಗರಣಗಳ ಬಗ್ಗೆ ಅವರು ಕುರುಡಾಗಿದ್ದರು. ಮಮತಾ ಅವರ ಅಹಂಕಾರ ಹಲವು ಪಟ್ಟು ಹೆಚ್ಚಾಯಿತು.

ಮಮತಾ ಅವರು ತಮ್ಮ ಮೂರನೆಯ ಅವಧಿಯಲ್ಲಿ ಪ್ರಬುದ್ಧತೆಯನ್ನು ತೋರಬೇಕು. ವ್ಯಾಪಕ ಸಮಾಲೋಚನೆಗಳ ಮೂಲಕ ಆಡಳಿತ ನಡೆಸಬೇಕು, ತಾವು ನೀಡಿದ ಭರವಸೆಗಳನ್ನು ಈಡೇರಿಸಬೇಕು. ಅಲ್ಪಸಂಖ್ಯಾತರನ್ನು ಓಲೈಸುವ ರಾಜಕಾರಣವು ತಿರುಗುಬಾಣವಾಗುತ್ತದೆ, ಅದು ಬಹುಸಂಖ್ಯಾತರ ಕಡೆಯಿಂದ ಪ್ರತಿರೋಧ ವ್ಯಕ್ತವಾಗುವಂತೆ ಮಾಡುತ್ತದೆ ಎಂಬುದನ್ನು ಅವರಿಗೆ ನೆನಪಿಸಬೇಕು. ರಾಜ್ಯ ಸರ್ಕಾರದ ಅಧೀನದ ಸಂಸ್ಥೆಗಳನ್ನು ತಮ್ಮ ವಿರೋಧಿಗಳ ವಿರುದ್ಧ ಬಳಸಿಕೊಳ್ಳಬಾರದು. ಹಿಂದಿನ ಬಾರಿ ಮೂರು ಸ್ಥಾನ ಹೊಂದಿದ್ದ ಬಿಜೆಪಿ ಈ ಬಾರಿ 77 ಸ್ಥಾನ ಗೆದ್ದುಕೊಂಡಿದೆ. ಇದು ಸಣ್ಣ ಸಾಧನೆಯೇನೂ ಅಲ್ಲ. ಚುನಾವಣೆಯಲ್ಲಿ ಕಂಡ ವಿಕಾರಗಳನ್ನು ಅಲ್ಲಿಯೇ ಬಿಟ್ಟು, ಮಮತಾ ಅವರು ವಿರೋಧ ಪಕ್ಷದ ಜೊತೆ ಕೆಲಸ ಮಾಡಬೇಕು. ಗೋಡೆ ಬರಹದಷ್ಟು ಸ್ಪಷ್ಟವಾಗಿರುವುದನ್ನು ಅರ್ಥ ಮಾಡಿಕೊಳ್ಳದಿದ್ದರೆ ಬಿಜೆಪಿ ಮುಂದಿನ ಚುನಾವಣೆಯಲ್ಲಿ ಮಮತಾ ಅವರ ಅರಮನೆಗೆ ಲಗ್ಗೆ ಇಡುತ್ತದೆ.

ಇದೇ ಪಾಠ ಪಿಣರಾಯಿ ವಿಜಯನ್ ಅವರಿಗೂ ಎಂ.ಕೆ. ಸ್ಟಾಲಿನ್ ಅವರಿಗೂ ಅನ್ವಯವಾಗುತ್ತದೆ. ವಿಜಯನ್ ಅವರ ಹಿಂದಿನ ಅವಧಿ, ಡಿಎಂಕೆಯ ಹಿಂದಿನ ಆಡಳಿತಾವಧಿ ವಿವಾದಗಳಿಂದ ಹೊರತಾಗಿಲ್ಲ. 'ಗೆಲ್ಲಲೇಬೇಕು ಎಂಬ ದೃಢನಿಶ್ಚಯ ಇಲ್ಲದಿದ್ದರೆ, ಯಾವುದೇ ಯುದ್ಧಕ್ಕೆ ಇಳಿಯುವುದು ಮಾರಣಾಂತಿಕ ಆಗಬಹುದು' ಎಂದು ಜನರಲ್ ಡಗ್ಲಾಸ್ ಮೆಕ್‌ಅರ್ಥರ್ ಹೇಳಿದ್ದರು. ರಾಹುಲ್ ಗಾಂಧಿ ಅವರು ಈ ಮಾತಿನಿಂದ ಕೆಲವು ಪಾಠ ಕಲಿಯಬಹುದು.

ಚುರುಮುರಿ



ಎಲ್ಲರಂತಲ್ಲ...

● ಮಣ್ಣೆರಾಜು

ಪೊಲೀಸ್ ಶಂಕ್ರಿ ಡ್ಯೂಟಿಗೆ ಹೊರಡಲು ರೆಡಿಯಾಗಿದ್ದರು. 'ಏನ್ರೀ, ಎಲ್ಲರ ಮನೆ ಗಂಡಂದಿರು ಮನೆಗೆ ಬಂದು ಮಲಗುವ ಟೈಂನಲ್ಲಿ ನೀವು 'ಡೋರ್‌ಲಾಕ್ ಮಾಡಿಕೊಂಡು ಹುಷಾರಾಗಿ ಮಲಗು' ಅಂತ ಹೇಳಿ ನೈಟ್ ಡ್ಯೂಟಿಗೆ ಹೋಗ್ತೀರಿ, ಲಾಕ್‌ಡೌನ್‌ನಲ್ಲಿ ಎಲ್ರೂ ಮನೇಲಿರಬೇಕು ಅಂತ ಸರ್ಕಾರವೇ ಹೇಳಿದೆ. ಎಲ್ರೂ ಮನೇಲಿರುವಾಗ ನೀವು ಮಾತ್ರ ಡ್ಯೂಟಿಗೆ ಹೋಗ್ತೀರಿ...' ಸುಮಿಗೆ ಸಂಕಟ.

'ಜನ ರೋಡಿಗೆ ಬಂದ್ರೆ ಕೊರೊನಾ ಅಟ್ಯಾಕ್ ಮಾಡುತ್ತೆ' ಅಂದರು ಶಂಕ್ರಿ.

'ನೀವೂ ಜನ ಅಲ್ವಾ? ನಿಮ್ಮನ್ನ ಅಟ್ಯಾಕ್ ಮಾಡಲ್ವಾ? ಪೊಲೀಸರಿಗೆ ಕಳ್ಳರು ಹೆದರಬಹುದು, ಕೊರೊನಾ ಹೆದರುತ್ತಾ?'

'ಕೊರೊನಾ ನಮಗೇನೂ ಮಾಡಲ್ಲ. ಮಾಸ್ಕ್, ಸ್ಯಾನಿಟೈಸರ್ ಹಾಕ್ಕೊಳ್ತೀವಿ, ಕೈಯಲ್ಲಿ ಲಾಠಿ ಇದ್ರೆ ಜನನೇ ಹತ್ರ ಬರೋಲ್ಲ, ಇನ್ನು ಕೊರೊನಾ ಬರುತ್ತಾ? ಹಹ್ಹಹ್ಹಾ...'

'ಕೊರೊನಾ ಡ್ಯೂಟಿಗೆ ಲಾಠಿ ಬೇಕೇಬೇಕೇನ್ರೀ?'

'ಹೌದು, ಇಲ್ಲಾಂದ್ರೆ ಕಂಟ್ರೋಲ್ ಮಾಡಕ್ಕಾಗೊಲ್ಲ. ಹೋದ ವರ್ಷ ಲಾಕ್‌ಡೌನ್‌ನಲ್ಲಿ ನಾನು 18 ಲಾಠಿ ಮುರಿದು ದಾಖಲೆ ಮಾಡಿದ್ದೆ. ನಮ್ಮ ಸ್ಟೇಷನ್‌ನಲ್ಲಿ ಯಾರೂ ದಾಖಲೆ ಮುರಿದಿಲ್ಲ. ನಮ್ಮ ಸಾಹೇಬ್ರು ವೆರಿಗುಡ್ ಅಂದ್ರು, ಅವಾರ್ಡ್‌ಗೆ ನನ್ನ ಹೆಸರನ್ನು ಶಿಫಾರಸು ಮಾಡ್ತಾರಂತೆ'.

'ಕೊರೊನಾಗೆ ಟ್ರೀಟ್‌ಮೆಂಟ್ ಕೊಡೋದು ಡಾಕ್ಟರ್ ಅಲ್ವೇನ್ರೀ?'

'ಡಾಕ್ಟರ್‌ಗಳು ಕಾಯಿಲೆ ಬಂದ ಮೇಲೆ ಟ್ರೀಟ್‌ಮೆಂಟ್ ಕೊಡ್ತಾರೆ, ಕಾಯಿಲೆ ಬರಬಾರದು ಅಂತ ನಾವು ಟ್ರೀಟ್‌ಮೆಂಟ್ ಕೊಡ್ತೀವಿ'.

'ಕೊರೊನಾ ಕಂಟ್ರೋಲಿಗೆ ಲಸಿಕೆಗಿಂತ ನಿಮ್ಮ ಲಾಠಿನೇ ಪರಿಣಾಮಕಾರಿ ಕಣ್ರೀ... ಒಂದು ಥರದಲ್ಲಿ ನೀವು ಡಾಕ್ಟರ್‌ಗಿಂತಾ ಗ್ರೇಟ್...' ಸುಮಿಗೆ ಹೆಮ್ಮೆ.

'ಹೌದು ಮತ್ತೆ, ನೀನು ಬೇಸರ ಮಾಡಿಕೊಂಡು ಕಳಿಸಿದ್ರೆ ಡ್ಯೂಟಿಯಲ್ಲಿ ಲಾಠಿ ಬೀಸಕ್ಕಾಗಲ್ಲ...' ಪತ್ನಿಯನ್ನು ರಮಿಸಿ ಹೊರಟರು ಶಂಕ್ರಿ.

'ಎಲ್ಲರಂತಲ್ಲ ನನ್ನ ಗಂಡ...' ಎಂದು ಸುಮಿ ಕಣ್ಣು ಒರೆಸಿಕೊಂಡರು.

ಸಂಗತ

ಆರೋಗ್ಯ ಕ್ಷೇತ್ರ: ಮಹತ್ವ ಮನಗಾಣಿ

ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಪಡಿಸುವುದು, ಆರೋಗ್ಯ ಕ್ಷೇತ್ರದಲ್ಲಿನ ಸಂಶೋಧನಾ ಚಟುವಟಿಕೆಗೆ ಒತ್ತು ನೀಡುವುದರ ಕಡೆಗೆ ಸರ್ಕಾರ ಈಗಲಾದರೂ ಇಚ್ಛಾಶಕ್ತಿ ತೋರಬೇಕು

● ಡಾ. ಎನ್.ಸತೀಶ್ ಗೌಡ

ಕೋವಿಡ್– 19 ದೇಶದಾದ್ಯಂತ ವ್ಯಾಪಿಸಿ ಜನರನ್ನು ದಿಕ್ಕೆಡಿಸಿರುವ ಈ ಸಂದರ್ಭವು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಪುನರ್‌ವಿಮರ್ಶೆಗೆ ಒಳಪಡಿಸುವ ಅಗತ್ಯವನ್ನು ಒತ್ತಿ ಹೇಳುತ್ತಿದೆ. ಈಗಿನ ವಿಷಮ ಸ್ಥಿತಿಯಲ್ಲಿ ಸಾರ್ವಜನಿಕರ ವೈದ್ಯಕೀಯ ವೆಚ್ಚವನ್ನು ಭರಿಸಬೇಕಾದದ್ದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರಾಥಮಿಕ ಕರ್ತವ್ಯವೇ ಸರಿ.

ಸಾರ್ವಜನಿಕ ಆರೋಗ್ಯವು ರಾಜ್ಯ ಪಟ್ಟಿಯಲ್ಲಿ ಬರುವ ವಿಷಯ. ಆದರೂ ಕೇಂದ್ರ ಸರ್ಕಾರವು ಸಂವಿಧಾನದ 249ನೇ ವಿಧಿಯಡಿ ಸಾರ್ವಜನಿಕ ಆರೋಗ್ಯವನ್ನು 'ರಾಷ್ಟ್ರೀಯ ಹಿತಾಸಕ್ತಿ' ಎಂದು ಪರಿಗಣಿಸಿ, ಪ್ರತ್ಯೇಕ ಕಾನೂನನ್ನು ರಚಿಸುವ ಅವಶ್ಯಕತೆ ಇದೆ. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಸಂಬಂಧ 1897ರಲ್ಲಿ ರಚಿತವಾದ ಹಳೆ ಕಾಯ್ದೆಯನ್ನೇ ಕೆಲವು ತಿದ್ದುಪಡಿಗಳೊಂದಿಗೆ ಈಗಲೂ ಮುಂದುವರಿಸಿರುವುದು ಅವೈಜ್ಞಾನಿಕ ಹಾಗೂ ಅಸಮಂಜಸ.

ಅಲ್ಲದೆ ಈ ಸಾರ್ವಜನಿಕ ಆರೋಗ್ಯ ಹಕ್ಕನ್ನು ಸಂವಿಧಾನದ ಭಾಗ-3ರ ಮೂಲಭೂತ ಹಕ್ಕಿನ ಅಡಿಯಲ್ಲಿ ಸೇರಿಸದೇ ಇರುವುದು ದುರ್ದೈವದ ಸಂಗತಿ. ಈ ಸಂಬಂಧ ಸುಪ್ರೀಂ ಕೋರ್ಟ್ ಹಲವಾರು ಪ್ರಕರಣಗಳಲ್ಲಿ, ಸಾರ್ವಜನಿಕ ಆರೋಗ್ಯ ಹಕ್ಕು ಕೂಡ ಒಂದು ಮೂಲಭೂತ ಹಕ್ಕಾಗಿದ್ದು, ಅದರ ಉಲ್ಲಂಘನೆ ಆದಂತಹ ಸಂದರ್ಭದಲ್ಲಿ ರಾಜ್ಯವನ್ನು ಹೊಣೆ ಮಾಡಬಹುದು ಎಂದು ಹೇಳಿರುವುದು ಗಮನಾರ್ಹ.

ರಾಕೇಶ್ ಚಂದ್ರ ನಾರಾಯಣ್ ವಿರುದ್ಧ ಬಿಹಾರ್ ರಾಜ್ಯ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಪ್ರತಿಯೊಬ್ಬ ನಾಗರಿಕನಿಗೂ ವೈದ್ಯಕೀಯ ಸೌಲಭ್ಯ ಹಾಗೂ ಸವಲತ್ತುಗಳನ್ನು ಆಯಾ ರಾಜ್ಯಗಳು ವ್ಯವಸ್ಥಿತವಾಗಿ ನೀಡಬೇಕು ಎಂದು ನಿರ್ದೇಶಿಸಿದೆ. ಮಜ್ದೂರ್ ಸಭಾ ಸಮಿತಿ ಪ್ರಕರಣದಲ್ಲಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳು ಲಭ್ಯವಿಲ್ಲದಿದ್ದರೆ, ಅದು ಸಾರ್ವಜನಿಕ ಆರೋಗ್ಯ ಹಕ್ಕಿನ ಉಲ್ಲಂಘನೆ ಮಾಡಿದಂತೆ ಎಂದು ತಿಳಿಸಿದೆ.

ಸುಪ್ರೀಂ ಕೋರ್ಟ್ ತೀರ್ಪನ್ನು ಆಧರಿಸಿ ಕೇಂದ್ರ ಸರ್ಕಾರವು ಸಾರ್ವಜನಿಕ ಆರೋಗ್ಯದ ಹಕ್ಕನ್ನು ಸಂವಿಧಾನದ ತಿದ್ದುಪಡಿಯ ಮೂಲಕ ಮೂಲಭೂತ ಹಕ್ಕಿನಡಿ ಸೇರಿಸಬೇಕೆಂದು ರಾಷ್ಟ್ರೀಯ ಆರೋಗ್ಯ ನೀತಿ– 2015ರಲ್ಲಿ ಶಿಫಾರಸು ಮಾಡಿತು. ನಂತರ, ಆರೋಗ್ಯ ತುರ್ತುಸ್ಥಿತಿಯ ಸಂದರ್ಭದಲ್ಲಿ ಸರ್ಕಾರಿ ಸಂಸ್ಥೆಗಳಿಗೆ ಅಧಿಕಾರ ನೀಡುವ ಅಗತ್ಯವನ್ನು ಉಲ್ಲೇಖಿಸಿ, ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ ಹಾಗೂ ಆರೋಗ್ಯ ಸೇವೆಗಳ ನಿರ್ದೇಶನಾಲಯವು ಜಂಟಿಯಾಗಿ ಸಾರ್ವಜನಿಕ ಆರೋಗ್ಯ (ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ನಿರ್ವಹಣೆ, ಜೈವಿಕ ಭಯೋತ್ಪಾದನೆ ಮತ್ತು ವಿಪತ್ತುಗಳು) ಮಸೂದೆ- 2017 ಅನ್ನು ಸಿದ್ಧಪಡಿಸಿದವು. ಆರೋಗ್ಯ ತುರ್ತು ಪರಿಸ್ಥಿತಿಗಳನ್ನು ಕೂಲಂಕಷವಾಗಿ ಪರಿಹರಿಸುವುದು ಮತ್ತು ಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದ ಹಳೆ ಕಾಯ್ದೆ ರದ್ದುಗೊಳಿಸುವ ಪ್ರಸ್ತಾವವನ್ನು ಈ ಮಸೂದೆಯಲ್ಲಿ ಸೇರಿಸಲಾಗಿತ್ತು. ಆದರೆ, ಸರ್ಕಾರದ ಬದ್ಧತೆಯ ಕೊರತೆಯಿಂದ ಮಸೂದೆಯು ಸಂಸತ್ತಿನಲ್ಲಿ ಮಂಡನೆಯಾಗಲೇ ಇಲ್ಲ.

ಇಂದು, ಹಳೆಯ ಬ್ರಿಟಿಷ್ ವಸಾಹತು ಕಾಯ್ದೆಯಾದ ಸಾಂಕ್ರಾಮಿಕ ರೋಗ ತಡೆ ಕಾಯ್ದೆ– 1897 ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾಯ್ದೆ– 2005ರ ಮೂಲಕ ಸರ್ಕಾರಗಳು ಕೊರೊನಾ ನಿಯಂತ್ರಣಕ್ಕೆ ಹರಸಾಹಸ ಪಡುತ್ತಿರುವುದು ವಿಪರ್ಯಾಸವೇ ಹೌದು. ಇಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಅತಿ ಹೆಚ್ಚು ಅಧಿಕಾರ ಕೊಡುವಂತಹ ಸಾರ್ವಜನಿಕ ತುರ್ತು ಆರೋಗ್ಯ ಕಾಯ್ದೆಯನ್ನು ರಚಿಸುವ ಅಗತ್ಯವಿದೆ. ಸುಗ್ರೀವಾಜ್ಞೆ ಮೂಲಕ ಕೆಳಕಂಡ ಅಧಿಕಾರಗಳನ್ನು ಸರ್ಕಾರಿ ಸಂಸ್ಥೆಗಳಿಗೆ ನೀಡಿ ನಾಗರಿಕರ ಆರೋಗ್ಯವನ್ನು ಕಾಪಾಡಲು ಮುಂದಾಗಬೇಕಾಗಿದೆ. ಅವುಗಳೆಂದರೆ:

ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಕಡಿಮೆ ಇದ್ದು, ಅತಿ ಹೆಚ್ಚು ಸಾವುನೋವು ಸಂಭವಿಸುವಂತಹ ಕೆಟ್ಟ ಪರಿಸ್ಥಿತಿಯಲ್ಲಿ ಖಾಸಗಿ ಆಸ್ಪತ್ರೆಗಳನ್ನು ಸರ್ಕಾರವು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕು. ಹೆಚ್ಚೆಚ್ಚು ವೆಂಟಿಲೇಟರ್‌ಗಳು, ಆಕ್ಸಿಜನ್ ಕೇಂದ್ರಗಳು ಹಾಗೂ ತುರ್ತು ಅತ್ಯವಶ್ಯಕ ಲಸಿಕೆಗಳು, ಅಗತ್ಯ ಔಷಧಿಗಳನ್ನು ಎಲ್ಲ ಸಾರ್ವಜನಿಕರಿಗೂ ದೊರಕುವಂತೆ ಮಾಡಬೇಕು. ಔಷಧ ಲಭ್ಯತೆ ಹಾಗೂ ಕ್ರಮಬದ್ಧವಾದ ವೈದ್ಯಕೀಯ ನಿರ್ವಹಣೆ ಬಗ್ಗೆ ನಿಗಾ ವಹಿಸಲು ಕಾರ್ಯಪಡೆ ರಚಿಸಿ, ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುವ ಅವ್ಯವಹಾರಗಳನ್ನು ತಡೆಗಟ್ಟಲು ಪ್ರಯತ್ನಿಸಬೇಕು.



ಹಾಸ್ಟೆಲ್‌ಗಳು, ದೇವಾಲಯಗಳು, ಮಠ-ಮಸೀದಿ, ಚರ್ಚ್, ಕಲ್ಯಾಣ ಮಂಟಪ ಹಾಗೂ ಇತರ ಪ್ರದೇಶಗಳನ್ನು ಕೋವಿಡ್ ಆರೈಕೆ ಕೇಂದ್ರಗಳನ್ನಾಗಿ ಪರಿವರ್ತಿಸಬೇಕು. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯಡಿ ತೆರಿಗೆ ವಿನಾಯಿತಿ ಮೂಲಕ, ದೊಡ್ಡ ಕಂಪನಿಗಳು ಸರ್ಕಾರದ ಜೊತೆ ಕೈಜೋಡಿಸಿ, ವೈದ್ಯಕೀಯ ಸಾಮಗ್ರಿ ಒದಗಿಸಿಕೊಡುವಂತೆ ನೋಡಿಕೊಳ್ಳಬೇಕು. ಕೋವಿಡ್ ಸನ್ನಿವೇಶವನ್ನು ನಿಯಂತ್ರಿಸಲು ಅಸಮರ್ಥವಾಗುವ ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆಯ ಮೂಲಕ ಆರೋಗ್ಯ ತುರ್ತುಪರಿಸ್ಥಿತಿಯನ್ನು ಹೇರಬೇಕು.

ಬಜೆಟ್‌ನಲ್ಲಿ ಇನ್ನು ಮುಂದಾದರೂ ಹೆಚ್ಚು ಅನುದಾನವನ್ನು ಸರ್ಕಾರಿ ಆಸ್ಪತ್ರೆಗಳ ನಿರ್ಮಾಣಕ್ಕೆ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಅತಿ ಹೆಚ್ಚು ಸಂಶೋಧನೆಗಳನ್ನು ನಡೆಸಲು ಮೀಸಲಿಡುವಂತೆ ಮಾಡಬೇಕು.

ಎಲ್ಲಕ್ಕಿಂತ ಬಹುಮುಖ್ಯವಾಗಿ, ಜನ ತಮ್ಮ ಮೂಲಭೂತ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿದರೆ, ಸಾರ್ವಜನಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಸಾಧ್ಯ.

ಲೇಖಕ: ಸಹಪ್ರಾಧ್ಯಾಪಕ, ಕಾನೂನು ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ

ವಾಚಕರ ವಾಣಿ

ತಜ್ಞರ ಚಾವಡಿಯಲ್ಲಿ ಶಾಸಕರೇಕೆ?

ಯಾವುದೇ ವಿಶ್ವವಿದ್ಯಾಲಯದಲ್ಲಿ ಅಕಡೆಮಿಕ್ ಕೌನ್ಸಿಲ್ ಎಂಬುದು ಶೈಕ್ಷಣಿಕ ವಿಷಯಗಳು ಹಾಗೂ ಅದಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಚರ್ಚೆ, ಚಿಂತನೆ ನಡೆಸುವ, ಸೂಕ್ತ ಸಲಹೆ, ಮಾರ್ಗದರ್ಶನ ನೀಡುವ ತಜ್ಞರ ಚಾವಡಿಯಾಗಿರುತ್ತದೆ. ಸಾಮಾನ್ಯವಾಗಿ ಅಕಡೆಮಿಕ್ ವಲಯದವರೇ ಇದರ ಸದಸ್ಯರಾಗಿರುತ್ತಾರೆ. ಆದರೆ ಈಗ ರಾಜ್ಯ ಸರ್ಕಾರವು ಬೆಂಗಳೂರು ವಿಶ್ವವಿದ್ಯಾಲಯದ ಅಕಡೆಮಿಕ್ ಕೌನ್ಸಿಲ್‌ಗೆ ಮೂವರು ಶಾಸಕರನ್ನು ಸದಸ್ಯರನ್ನಾಗಿ ನೇಮಿಸಿದೆ (ಪ್ರ.ವಾ., ಮೇ 7).

ಶಾಸಕರೆಂದ ಮೇಲೆ ಅವರು ಎಲ್ಲಾ ಸಮಿತಿಗಳಲ್ಲಿ ಸಂಬಂಧವಿರಲಿ ಇಲ್ಲದಿರಲಿ ಇರಲೇಬೇಕೆ? ನಾಡಿನ ತುಂಬ ಇರುವ ಪ್ರಾಧ್ಯಾಪಕರು, ಶಿಕ್ಷಣ ತಜ್ಞರ ನೆನಪು ಸರ್ಕಾರಕ್ಕೆ ಬರಲಿಲ್ಲವೇ? ಈ ನೇಮಕಾತಿ ಮಾಡಿರುವುದು ಶಾಸಕರನ್ನು ಓಲೈಸಲೋ ಅಥವಾ ರಾಜಕೀಯ ಕ್ಷೇತ್ರದವರು ವಿಶ್ವವಿದ್ಯಾಲಯದ ನಡೆಯಲ್ಲಿ ಮೂಗು ತೂರಿಸಲಿ ಎಂಬ ದುರುದ್ದೇಶದಿಂದಲೋ ಎಂಬುದು ಅರ್ಥವಾಗುತ್ತಿಲ್ಲ.

ಪ್ರೊ. ಎಂ.ಎಸ್.ರಘುನಾಥ್, ಬೆಂಗಳೂರು

ಉತ್ತರ ಕೊಡಲಾಗದಿದ್ದರೆ...

'ಲಾಕ್‌ಡೌನ್‌ನಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ತಲಾ ಹತ್ತು ಸಾವಿರ ರೂಪಾಯಿ ನೆರವು ನೀಡಿ' ಎಂದು ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಸರ್ಕಾರಕ್ಕೆ ಸಲಹೆ ನೀಡಿರುವುದೇನೋ ಸರಿ. ಆದರೆ ಇದಕ್ಕೆ, 'ನೀವು ಹೇಳಿದಂತೆ ಹತ್ತು ಸಾವಿರ ರೂಪಾಯಿ ನೆರವು ನೀಡಲು ನಾವೇನು ನೋಟ್ ಪ್ರಿಂಟ್ ಮಾಡ್ತೀವಾ?' ಎಂಬ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಉತ್ತರ ಅಚ್ಚರಿ ಹುಟ್ಟಿಸುವಂತಿದೆ.

ಅಹುದು ಈಶ್ವರಪ್ಪನವರೇ, ನೀವು ನೀಡಿರುವ ಉತ್ತರ, ಈ ವಿಷಯದಲ್ಲಿ ತಾಳಿರುವ ದೃಢ ನಿರ್ಧಾರ ನೂರಕ್ಕೆ ನೂರರಷ್ಟು ಸರಿ. ಏಕೆಂದರೆ ನೋಟ್ ಪ್ರಿಂಟ್ ಮಾಡುವ ಅಧಿಕಾರ ಯಾವುದೇ ರಾಜ್ಯಕ್ಕೂ ಇಲ್ಲ. ಇದು ಜನಸಾಮಾನ್ಯರಿಗೂ ತಿಳಿಯದ ವಿಚಾರವೇನಲ್ಲ. ಆದರೆ ಇಲ್ಲಿ ನನ್ನದೊಂದು ನೇರ ಪ್ರಶ್ನೆ. ಕೆಲವೇ ತಿಂಗಳುಗಳ ಹಿಂದೆ, ವಿರೋಧ ಪಕ್ಷಗಳ 17 ಶಾಸಕರುಗಳನ್ನು ನಿಮ್ಮ ಪಕ್ಷದವರು ರಾತ್ರೋರಾತ್ರಿ ಖರೀದಿಸಿದಿರಲ್ಲ, ಮುಂಬೈಗೆ ಕರೆದುಕೊಂಡು ಹೋಗಿ ರಾಜೋಪಚಾರ ಮಾಡಿದಿರಲ್ಲ, ಅವರ ಶಾಸಕ ಸ್ಥಾನಗಳಿಗೆ ರಾಜೀನಾಮೆ ಕೊಡಿಸಿ, ಮತ್ತೆ ಅದೇ ಕ್ಷೇತ್ರಗಳಲ್ಲಿ ನಿಲ್ಲಿಸಿ, ಕೋಟಿ ಕೋಟಿ ಹಣ ಸುರಿದು ಭರ್ಜರಿಯಾಗಿ ಗೆಲ್ಲಿಸಿದಿರಲ್ಲ, ಆಗ ನೋಟ್ ಪ್ರಿಂಟ್ ಮಾಡುತ್ತಿದ್ದಿರಾ? ದಯವಿಟ್ಟು ಉತ್ತರ ಕೊಡಿ. ಉತ್ತರ ಕೊಡಲಾಗದಿದ್ದರೆ ಅಧಿಕಾರದಿಂದ ಕೆಳಗಿಳಿಯಿರಿ.

ಮಾನಸ, ಮೈಸೂರು

ಅಪ್ಪಚ್ಚಿ!

ಕೋವಿಡ್ ಮೊದಲಲೆಯ
ಆಘಾತದಿಂದ ಜನ
ಚೇತರಿಸುವಷ್ಟರಲ್ಲಿ
ಎರಡನೆಯಲೆ ಅಪ್ಪಳಿಸಿತು;
ನೆನಪು ನಾಣ್ನುಡಿ:
'ಅಟ್ಟದಿಂದ ಬಿದ್ದವನನ್ನು
ದಡಿಯಲ್ಲಿ ಚಚ್ಚಿದರು!'
(ಅಪ್ಪಚ್ಚಿ)

ಸಿ.ಪಿ.ಕೆ., ಮೈಸೂರು

ಪೊಲೀಸ್ ಇಲಾಖೆಯಲ್ಲಿ ಬ್ರಿಟಿಷ್ ಪಳೆಯುಳಿಕೆ

ನನ್ನ ಮಗ ಭಾನುವಾರ ಬೆಳಿಗ್ಗೆ 7.30ಕ್ಕೆ ಔಷಧ ತರಲು ಅಂಗಡಿಗೆ ಹೋಗಿ ಬರುವಾಗ ಪೊಲೀಸರಿಗೆ ಸಿಕ್ಕಿಬಿದ್ದ. ತನ್ನ ಕೈಲಿರುವ ಔಷಧ ತೋರಿಸಿದರೂ ಬಿಡದ ಪೊಲೀಸರು ಅವನ ಗಾಡಿಯನ್ನು ಕಸಿದುಕೊಂಡು ಠಾಣೆಗೆ ಕರೆದೊಯ್ದದ್ದು ತಿಳಿದಾಗ ದಿಗಿಲುಗೊಂಡು ನಾನೂ ಅಲ್ಲಿಗೆ ಹೋದೆ. 'ವಾಹನ ಒಯ್ಯಬಾರದೆಂಬ ನಿಯಮ ಅನ್ವಯಿಸುವುದು ಮೇ 10ರಿಂದ, ಇಂದು 9ನೇ ತಾರೀಖು. ಆದರೂ ಈ ದಿನವೇ ಹೀಗೇಕೆ' ಎಂದು ಕೇಳಿ ವಾಹನ ಬಿಡಲು ಬೇಡಿಕೊಂಡೆ. ಸಣ್ಣ ವಯಸ್ಸಿನ ಪೊಲೀಸರ ಮಾತು, ವರ್ತನೆ ತುಂಬಾ ಬೇಸರ ತರಿಸಿತು. ಅಧಿಕಾರಿಯೂ ಸಣ್ಣ ವಯಸ್ಸಿನವರೆ. ಆದರೆ ಪೊಲೀಸ್ ಇಲಾಖೆಯಲ್ಲಿ ಬ್ರಿಟಿಷರ ಪಳೆಯುಳಿಕೆ ಮೊಳಕೆಯೊಡೆದು ಬೆಳೆಯುತ್ತಿರುವುದು ದುರಂತ.

ಆಧುನಿಕ ಬದುಕು ಎಷ್ಟು ಮಾನವೀಯತೆಯಿಂದ ಬೆಳೆಯಬೇಕಿತ್ತೋ ಅದಕ್ಕೆ ವಿರುದ್ಧವಾಗಿ ಪೊಲೀಸ್ ಅಧಿಕಾರಿಗಳು ವರ್ತಿಸುತ್ತಿರುವುದು ವಿಷಾದಕರ ಸಂಗತಿ. ಇಲಾಖೆಯಲ್ಲಿನ ಹಿರಿಯ ಅಧಿಕಾರಿಗಳು ಇತ್ತ ಚಿತ್ತಹರಿಸದಿದ್ದರೆ ಪೊಲೀಸ್ ಗೂಂಡಾಗಿರಿಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ.

ಡಾ. ಸಿ.ಬಿ.ಚಿಲ್ಕರಾಗಿ, ಲಿಂಗಸುಗೂರು

ಇವರು ಕಾನೂನುಪಾಲಕರೇ?

ಲಾಕ್‌ಡೌನ್ ಸಂದರ್ಭದಲ್ಲಿ ಪೊಲೀಸರು ಲಾಠಿ ಬಳಸುತ್ತಿರುವ ಕ್ರಮ ಅಕ್ರಮವಾದುದು, ಕಾನೂನಿಗೆ ವಿರುದ್ಧವಾದುದು. ಶಿಕ್ಷೆ ಮತ್ತು ಅಧಿಕಾರದ ಸಂಕೇತವಾದ ಲಾಠಿಯನ್ನು ಕಾನೂನನ್ನು ಪಾಲಿಸದ ಗುಂಪನ್ನು ಚದುರಿಸಲು ಕಾನೂನುಬದ್ಧ ರೀತಿಯಲ್ಲಿ ಬಳಸಲು ಅವಕಾಶವಿದೆ ಅಷ್ಟೆ. ಪೊಲೀಸರೂ ಮನುಷ್ಯರೇ ಆಗಿರುವುದರಿಂದ ಅವರ ಪೈಕಿ ಕೆಲವರಲ್ಲಿ ಒತ್ತಡದ ಸ್ಥಿತಿಯಲ್ಲಿ ಕಾಣಿಸಿಕೊಳ್ಳುವ ಅಸಹಾಯಕತೆ, ಅವಿವೇಕತನ, ಅಧಿಕಾರಸ್ಥರನ್ನು ಮೆಚ್ಚಿಸಬೇಕೆಂಬ ತವಕ ಮತ್ತು ಹಿಂಸಾನಂದದ ರೋಗಿಷ್ಟ ಮನಃಸ್ಥಿತಿಗಳು ಅಧಿಕಾರದ ಬಲ ಪಡೆದು ಲಾಠಿಯ ಮೂಲಕ ವ್ಯಕ್ತಗೊಳ್ಳುತ್ತವೆ. ಎದುರು ಸಿಕ್ಕಾಗ ಮೌಖಿಕ ಎಚ್ಚರಿಕೆ ಕೊಟ್ಟು 'ಹೋಗಿ' ಎಂದು ಹೇಳಿ ಹಿಂದಿನಿಂದ ಲಾಠಿಯೇಟು ಕೊಡುವ ಪೊಲೀಸರನ್ನು ನೋಡಿದರೆ ವ್ಯಥೆಯಾಗುತ್ತದೆ. ನಿಸ್ಸಹಾಯಕ ನಾಗರಿಕರ ಕಪಾಳಕ್ಕೆ ಹೊಡೆಯುವ, ಓಡುತ್ತಿರುವವರನ್ನೂ ಬಿಡದೆ ಅಟ್ಟಿಸಿಕೊಂಡು ಹೋಗಿ ಹೊಡೆಯುವ, ಅಂಥ ದೌರ್ಜನ್ಯವನ್ನು ವಿರೋಧಿಸುವವರನ್ನು ಗುಂಪುಗೂಡಿ ಥಳಿಸುವ ಪೊಲೀಸರನ್ನು ಕಾನೂನುಪಾಲಕರೆಂದು ಕರೆಯುವುದು ಹೇಗೆ?

ನಾಗರಿಕರ ಮೇಲೆ ಪೊಲೀಸರ ಆಕ್ರಮಣ ಯಾವುದೇ ಸಂದರ್ಭದಲ್ಲಾದರೂ ಕಾನೂನಿಗೆ ವಿರುದ್ಧವಾದುದೆಂದು ಇವುಗಳ ಬಗ್ಗೆ ಅರಿವಿರುವ ಮೇಲಧಿಕಾರಿಗಳು, ನ್ಯಾಯವೇತ್ತರು, ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಮತ್ತು ಅಧಿಕೃತವಾಗಿ ಹೇಳದೆ, ಕಾನೂನು ಕ್ರಮ ತೆಗೆದುಕೊಳ್ಳದೆ, ಜಾರಿಕೆಯ ಹೇಳಿಕೆಗಳನ್ನು ಕೊಡುತ್ತಿರುವುದೂ ಸರಿಯಲ್ಲ.

ಲಾಕ್‌ಡೌನ್ ಸಂದರ್ಭಕ್ಕೆ ಸಿಲುಕಿ ನಾನಾ ರೀತಿಯಲ್ಲಿ ನರಳುತ್ತಿರುವ ಅಮಾಯಕ ಜನರನ್ನು ನಿಯಂತ್ರಿಸಲು ಎಲ್ಲ ಊರುಗಳಲ್ಲೂ ಹಿರಿಯ ವಯಸ್ಸಿನ, ಲಾಠಿರಹಿತ ಪೊಲೀಸರನ್ನೇ ಆದಷ್ಟುಮಟ್ಟಿಗೂ ನಿಯೋಜಿಸುವುದು ಒಳ್ಳೆಯದು.

ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕೋವಿಡ್ ನಿರ್ವಹಣೆಯಲ್ಲಿ ಮಧ್ಯಪ್ರವೇಶ ಬೇಡ ಎಂಬ ಪ್ರಮಾಣಪತ್ರ

ಸುಪ್ರೀಂಗೆ ಕಡಿವಾಣ ಕೇಂದ್ರದ ಹುನ್ನಾರವೇ?

• ಪ್ರೊ. ರಾಜೇಂದ್ರ ಚೆನ್ನಿ





ನಾನು ಈ ಲೇಖನ ಬರೆಯುತ್ತಿರುವ ಹೊತ್ತಿಗೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತನ್ನ ಹೇಳಿಕೆಯನ್ನು ಸಲ್ಲಿಸಿ ಕೋವಿಡ್ ತಡೆ ಲಸಿಕೆ ಸರಬರಾಜು, ಮಾರಾಟದ ಬಗ್ಗೆ ತನ್ನ ನೀತಿಯನ್ನು ಸಮರ್ಥಿಸಿಕೊಂಡಿದೆ. ಅದಕ್ಕಿಂತ ಮುಖ್ಯವಾಗಿ ಸುಪ್ರೀಂ ಕೋರ್ಟ್‌ನ 'ಅತಿ ಉತ್ಸಾಹದ ಆದರೆ ಸದುದ್ದೇಶದ' ನ್ಯಾಯಾಂಗ ಕ್ರಿಯಾಶೀಲತೆಯಿಂದಾಗಿ ಸಂಕಷ್ಟಗಳು ಉಂಟಾಗುತ್ತವೆ ಎಂದು ವಾದಿಸುತ್ತಿದೆ.

ಹಿಂದಿನ ಕೆಲವು ಮುಖ್ಯ ನ್ಯಾಯಮೂರ್ತಿಗಳು ಸುಪ್ರೀಂ ಕೋರ್ಟ್ ಅನ್ನು ಪ್ರಧಾನಮಂತ್ರಿ ಕಚೇರಿಯ ಗುಮಾಸ್ತ ಶಾಖೆಯೆನ್ನಿಸುವಂತೆ ಮಾಡಲು ಪ್ರಯತ್ನಿಸಿದಾಗ ಕೇಂದ್ರ ಸರ್ಕಾರವು ಪ್ರತಿಯೊಂದು ವಿಷಯವನ್ನೂ ನ್ಯಾಯಾಲಯದ ಮುಂದೆ ತರುತ್ತಿತ್ತು. ಭಾರತದ ಅತ್ಯುನ್ನತ ನ್ಯಾಯ ಸಂಸ್ಥೆಯು ತನ್ನದೇ ಆದ ಶ್ರೇಷ್ಠ ಸಂಪ್ರದಾಯಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡಿತೆ ಎನ್ನುವ ಆತಂಕವು ಹುಟ್ಟಿಕೊಂಡಿತ್ತು. ಈಗ ಕಳೆದ ಕೆಲವು ದಿನಗಳಲ್ಲಿ ಸುಪ್ರೀಂ ಕೋರ್ಟ್, ಕೇಂದ್ರದ ನೀತಿಗಳನ್ನು ವಿಶೇಷವಾಗಿ ಕೋವಿಡ್–19ರ ಎರಡನೇ ಅಲೆ ನಿರ್ವಹಣೆಗೆ ಸಂಬಂಧಿಸಿದ ನೀತಿಗಳನ್ನು ಪ್ರಶ್ನಿಸಿದ್ದರಿಂದ ಕೇಂದ್ರಕ್ಕೆ ನ್ಯಾಯಾಲಯದ ನಡವಳಿಕೆಯು 'ಹಸ್ತಕ್ಷೇಪ' (interference) ಆಗಿ ಕಾಣುತ್ತಿದೆ. ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಪ್ರಕಟವಾದ ಇಂದಿನ ವರದಿಯಲ್ಲಿ ಈ ಪದವನ್ನು ಕೇಂದ್ರದ ಹೇಳಿಕೆಯಲ್ಲಿ ಬಳಸಲಾಗಿದೆಯೆಂದು ಹೇಳಲಾಗಿದೆ. ಇದು ನಿಜವಾಗಿದ್ದರೆ ಇದನ್ನೇ ನ್ಯಾಯಾಲಯ ನಿಂದನೆಯೆಂದು ಪರಿಗಣಿಸಬಹುದಾಗಿದೆ. ಏಕೆಂದರೆ ಭಾರತೀಯ ಪ್ರಜಾಪ್ರಭುತ್ವದ ಒಂದು ಮುಖ್ಯವಾದ ಆಧಾರ ಸ್ತಂಭವಾಗಿರುವ ನ್ಯಾಯಾಂಗದ ಪ್ರವೇಶವನ್ನು ಬಹಳವೆಂದರೆ ಮಧ್ಯಸ್ಥಿಕೆ (intervention) ಅನ್ನಬಹುದೇ ಹೊರತು ಹಸ್ತಕ್ಷೇಪ (interference) (ಅಂದರೆ ಅನಾವಶ್ಯಕ ಹಸ್ತಕ್ಷೇಪ, ಸರ್ಕಾರದ ಕ್ರಿಯೆಗಳಲ್ಲಿ ಅಡ್ಡವಾಗುವುದು ಈ ಅರ್ಥಗಳು ಈ ಪದಗಳಿಗಿವೆ) ಎನ್ನಲಾಗದು. ಕೇವಲ ಪದದ ವಿಶ್ಲೇಷಣೆಯನ್ನು ನಾನು ಆಧರಿಸಿಲ್ಲ.

ಕರ್ನಾಟಕ ಹೈಕೋರ್ಟ್‌ನ ತೀರ್ಪನ್ನು ಕೇಂದ್ರವು ಪ್ರಶ್ನಿಸಿ ಸೋತದ್ದು, ದೆಹಲಿಗೆ ನಿಗದಿತ ಆಕ್ಸಿಜನ್ ಕೊಡಲು ವಿಳಂಬ ಮಾಡುತ್ತಿರುವುದು, ಬಿಜೆಪಿಯ ಮಹಾನಾಯಕನಾದ ಯೋಗಿ ಆದಿತ್ಯನಾಥ ಎನ್ನುವ ಉತ್ತರ ಪ್ರದೇಶದ ಮುಖ್ಯಮಂತ್ರಿ ಸುಪ್ರೀಂ ಕೋರ್ಟ್ ಆದೇಶವನ್ನು ಮೀರಿ ಕೇರಳ ಮೂಲದ ಪತ್ರಕರ್ತರೊಬ್ಬರನ್ನು ಏಮ್ಸ್‌ನಿಂದ ಮಥುರಾ ಜೈಲಿಗೆ ಗುಟ್ಟಾಗಿ ಕರೆದೊಯ್ದದ್ದು ಇವೇ ಮುಂತಾದ ಘಟನೆಗಳನ್ನು ನೋಡಿದರೆ ಕೇಂದ್ರದ ಮುಂದಿನ ನಡವಳಿಕೆ ಸ್ಪಷ್ಟವಾಗಿದೆ. ಅದೇನೆಂದರೆ ನ್ಯಾಯಾಂಗದ ನಿರ್ದೇಶನಗಳನ್ನು ಅಮಾನ್ಯ ಮಾಡುವುದು, ಪಾಲಿಸದೇ ಇರುವುದು. ಇನ್ನೊಂದು ವಿಧಾನವೆಂದರೆ ನ್ಯಾಯಾಂಗದ ಹಸ್ತಕ್ಷೇಪದಿಂದ ಚುನಾಯಿತ ಸಂಸದರ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂದು ಹುಯಿಲೆಬ್ಬಿಸುವುದು. ಅದರ ಮುನ್ನುಡಿಯಾಗಿ ಕೇಂದ್ರದ ಪ್ರಮಾಣಪತ್ರದ ಅನೇಕ ಪದಗಳನ್ನು ಗಮನಿಸಬಹುದು. ಇನ್ನೆರಡು ದಿನಗಳಲ್ಲಿ ಬಲಪಂಥೀಯ ನ್ಯಾಯಶಾಸ್ತ್ರ ವಿದ್ವಾಂಸರು, ಸಂವಿಧಾನ ವಿದ್ವಾಂಸರು ನ್ಯಾಯಾಂಗ ಮತ್ತು ಸಂಸತ್ತಿನ ನಡುವಣ ತಿಕ್ಕಾಟ (judiciary vs parliament) ಎನ್ನುವ ಚರ್ಚೆಯನ್ನು ಹುಟ್ಟುಹಾಕಿ ಅನಾವಶ್ಯಕವಾದ ವಿವಾದಗಳನ್ನು ಸೃಷ್ಟಿಸುತ್ತಾರೆಂದು ನಿರೀಕ್ಷಿಸಬಹುದು.

> ಕೇಂದ್ರದ ಉದ್ದೇಶವು ನ್ಯಾಯಾಂಗದ ಅಧಿಕಾರವನ್ನು ತಾತ್ವಿಕವಾಗಿ ಪ್ರಶ್ನಿಸುವುದಲ್ಲ. ಆದರೆ ತನ್ನ ವಾದ ಹಾಗೂ ಸಾರ್ವಜನಿಕ ವಿವಾದಗಳ ಮೂಲಕ ಸುಪ್ರೀಂ ಕೋರ್ಟ್ ಹೆಜ್ಜೆ ಹಿಂದಿಡುವಂತೆ ಮಾಡುವುದಾಗಿದೆ. ಆದ್ದರಿಂದ ನಾವೆಲ್ಲ ಮಾಡಬೇಕಾದ ಮುಖ್ಯ ಕರ್ತವ್ಯವೆಂದರೆ ನ್ಯಾಯಾಂಗದ ಪರವಾಗಿ ಗಟ್ಟಿಯಾಗಿ ನಮ್ಮ ಅಭಿಪ್ರಾಯವನ್ನು ಹೇಳುವುದು

ಕೇಂದ್ರದ ಉದ್ದೇಶವು ನ್ಯಾಯಾಂಗದ ಅಧಿಕಾರವನ್ನು ತಾತ್ವಿಕವಾಗಿ ಪ್ರಶ್ನಿಸುವುದಲ್ಲ. ಆದರೆ ತನ್ನ ವಾದ ಹಾಗೂ ಸಾರ್ವಜನಿಕ ವಿವಾದಗಳ ಮೂಲಕ ಸುಪ್ರೀಂ ಕೋರ್ಟ್ ಹೆಜ್ಜೆ ಹಿಂದಿಡುವಂತೆ ಮಾಡುವುದಾಗಿದೆ. ಆದ್ದರಿಂದ ನಾವೆಲ್ಲ ಮಾಡಬೇಕಾದ ಮುಖ್ಯ ಕರ್ತವ್ಯವೆಂದರೆ ನ್ಯಾಯಾಂಗದ ಪರವಾಗಿ ಗಟ್ಟಿಯಾಗಿ ನಮ್ಮ ಅಭಿಪ್ರಾಯವನ್ನು ಹೇಳುವುದು. ಸಂವಿಧಾನದ ಅನೇಕ ಪರಿಕಲ್ಪನೆಗಳನ್ನು (ಕೆಲವು ಮೂಲಭೂತ ಪರಿಕಲ್ಪನೆಗಳನ್ನು ಬಿಟ್ಟರೆ) ನಿರಪೇಕ್ಷವಾಗಿ ನೋಡಲಾಗದು. ಶಾಸಕಾಂಗವು ಕುಖ್ಯಾತ ಕ್ರಿಮಿನಲ್‌ನಂತೆ ವರ್ತಿಸಬಹುದು, ಜನವಿರೋಧಿಯಾಗಬಹುದು ಎಂದು ಸಂವಿಧಾನ ಬರೆದವರು ಖಂಡಿತವಾಗಿಯೂ ಕಲ್ಪಿಸಿರಲಿಲ್ಲ, ಅವರ ದೃಷ್ಟಿಯಲ್ಲಿ ಚುನಾಯಿತ ಸರ್ಕಾರವೆಂದರೆ ಪ್ರಜೆಗಳ ಒಪ್ಪಿಗೆ ಪಡೆದ, ಪ್ರಜೆಗಳ ಹಿತಚಿಂತಕ ಸರ್ಕಾರವಾಗಿತ್ತು. ಈಗ ಅನುಷ್ಠಾನಕ್ಕೆ ಬಂದಿರುವ ಸರ್ಕಾರವು ಚುನಾವಣಾ ಆಧಾರಿತ ಪ್ರಜಾಪ್ರಭುತ್ವವನ್ನು ಬಳಸಿಕೊಂಡು ಅಧಿಕಾರಕ್ಕೆ ಬಂದಿರುವ ಸರ್ವಾಧಿಕಾರಿ ಸರ್ಕಾರವಾಗಿದೆ. ಸಂವಿಧಾನದ ಮೂಲರಚನೆಯಾಗಿರುವ ಒಕ್ಕೂಟ ವ್ಯವಸ್ಥೆಯನ್ನೇ ಒಪ್ಪದ ಈ ಸರ್ಕಾರಕ್ಕೆ ಸಂವಿಧಾನಾತ್ಮಕ ಚರ್ಚೆಗಳನ್ನು ಮಾಡುವ ನೈತಿಕ ಅಧಿಕಾರವೇ ಇಲ್ಲ. ಹೀಗಾಗಿ ಈ ವಿಶಿಷ್ಟ ಸಂದರ್ಭದಲ್ಲಿ ಮಾತ್ರ ನಾವು ನ್ಯಾಯಾಂಗದ ಪರವಾಗಿ ಜನಾಂದೋಲನ ಮಾದರಿಯ ಚರ್ಚೆ, ಚಿಂತನೆ, ಪ್ರತಿಭಟನೆ ಕೈಕೊಳ್ಳಲೇಬೇಕಾಗಿದೆ.

ಕೇಂದ್ರದ ಪ್ರಮಾಣಪತ್ರದ ಇನ್ನೊಂದು ಮುಖ್ಯ ವಾದವೆಂದರೆ ಲಸಿಕೆ ಮಾರಾಟ, ಸರಬರಾಜು 'ಖಾಸಗಿ ಹಿತಾಸಕ್ತಿಗಳ' ಪರವಾಗಿಯೂ ಇರಬೇಕು ಮತ್ತು ಬೇಡಿಕೆ ಹಾಗೂ ಪೂರೈಕೆಯ ನೀತಿಯು ಮುಕ್ತ ಮಾರುಕಟ್ಟೆಯ ಮಾದರಿಯಲ್ಲಿರಬೇಕು ಎಂಬುದಾಗಿದೆ. ನನ್ನ ಕೋರಿಕೆಯೆಂದರೆ ನಮ್ಮ ಎಲ್ಲಾ ಶಿಕ್ಷಿತ ವ್ಯಕ್ತಿಗಳು ಈ ಹೇಳಿಕೆಯನ್ನು ಕೂಲಂಕಷವಾಗಿ ಓದಬೇಕು. ಇಂಥ ಘೋರ ಸನ್ನಿವೇಶದಲ್ಲಿಯೂ ಕೇಂದ್ರ ಸರ್ಕಾರವು ಮಾರುಕಟ್ಟೆ ನೀತಿಗಳನ್ನು ಸಮರ್ಥಿಸುತ್ತದೆಯೆ ಹೊರತು ಕೋಟಿಗಟ್ಟಲೆ ಮನುಷ್ಯ ಜೀವಗಳ ದುರಂತದ ಬಗ್ಗೆ ಮಾತನಾಡುವುದಿಲ್ಲ.

ನಮ್ಮ ಶಿಕ್ಷಿತ ಮಧ್ಯಮ ವರ್ಗದವರು ಕುರುಡು ನಂಬಿಕೆ ಇಟ್ಟಿರುವ ಈ ಹಳಸಲು ಮಾರುಕಟ್ಟೆ ನೀತಿಯು ಕೊನೇಪಕ್ಷ 18ನೇ ಶತಮಾನದ್ದು. ಇದನ್ನು ಚರಿತ್ರೆಯ ಅತಿ ದೊಡ್ಡ ದುರಂತವಾದ ಕೊರೊನಾ ವಿಪತ್ತಿನ ಕಾಲದಲ್ಲಿ ಈ ದೇಶದ ಬ್ರಾಹ್ಮಣ-ಬನಿಯಾ ದುಷ್ಟಕೂಟವು ಬಳಸುತ್ತಿದೆ. ಜೋತಿಬಾ ಫುಲೆಯವರ ಭಟ್‌ಜಿ-ಶೇಟ್‌ಜಿ ಪರಿಕಲ್ಪನೆಯನ್ನು ಸಂಪೂರ್ಣ ವಿಶ್ವಾಸ ಹಾಗೂ ಎಚ್ಚರದಿಂದ ನಾನು ಬಳಸುತ್ತಿದ್ದೇನೆ. ಏಕೆಂದರೆ ಕೇಂದ್ರ ಸರ್ಕಾರದ ಪ್ರಮಾಣಪತ್ರವು ಥೇಟು ಈ ದುಷ್ಟಕೂಟದ ಸಾಂಪ್ರದಾಯಿಕ ನುಡಿಗಟ್ಟಿನಲ್ಲಿದೆ. ಭಾರತದ ಜಾಗತೀಕರಣವು ಈ ಸಾಂಪ್ರದಾಯಿಕ ಮಾದರಿಯಲ್ಲಿರುವುದು ಚರಿತ್ರೆಯ ಸತ್ಯವಾಗಿದೆ. ಹೇಳಿಕೆಯ ಈ ಭಾಗವನ್ನು ಗಮನಿಸಿ: 'Over all, the pricing policy would lead to a competitive market, resulting in a higher production of vaccines with affordable prices' ('ಒಟ್ಟಾರೆಯಾಗಿ ಈ ದರ ನಿಗದಿ ನೀತಿಯು ಸ್ಪರ್ಧಾತ್ಮಕ ಮಾರುಕಟ್ಟೆಗೆ ಅವಕಾಶ ಮಾಡಿಕೊಡುತ್ತದೆ ಹಾಗೂ ಇದರ ಪರಿಣಾಮ ದಿಂದಾಗಿ ಲಸಿಕೆಯ ಉತ್ಪಾದನೆಯಲ್ಲಿ ಏರಿಕೆಯಾಗಿ ಕೈಗೆಟಕುವ ದರದಲ್ಲಿ ಅವು ಲಭ್ಯವಾಗುತ್ತವೆ'). 'The centre said its vaccination policy aimed at creating incentivised demand for private players and attract offshore manufacturers to ensure increased availability' ('ತನ್ನ ಲಸಿಕೆ ನೀತಿಯ ಗುರಿಯು ಖಾಸಗಿ ಭಾಗಿದಾರರಿಗೆ ಉತ್ತೇಜನ ಕೊಡುವ ಬೇಡಿಕೆಯನ್ನು ಸೃಷ್ಟಿಸುವುದು ಹಾಗೂ ಲಭ್ಯತೆ ಹೆಚ್ಚಿಸುವುದನ್ನು ಖಾತರಿಪಡಿಸಲು ವಿದೇಶೀ ಉತ್ಪಾದಕರನ್ನು (ಲಸಿಕೆಯ) ಆಕರ್ಷಿಸುವುದಾಗಿದೆ).

ಅಂದರೆ ಇದರಲ್ಲಿ ರಸ್ತೆ, ಬೀದಿಗಳಲ್ಲಿ ಈಗ ಗಂಗಾನದಿಯಲ್ಲಿ ಕಾಣುತ್ತಿರುವ ಮನುಷ್ಯರ ಹೆಣಗಳು, ಕೋಟಿಗಟ್ಟಲೆ ಪ್ರಜೆಗಳ ನೋವು, ಸಂಕಟ ಯಾವುದೂ ಕೇಂದ್ರದ ನೀತಿಗೆ ಆಧಾರವೇ ಅಲ್ಲ. ವಿಶ್ವದ ಇತಿಹಾಸದಲ್ಲಿ ಕೆಲವರಿಗೆ ಅಗಾಧ ಸಂಪತ್ತು, ಬಹುಸಂಖ್ಯಾತರಿಗೆ ಕೇವಲ ಬವಣೆ ಬಡತನ ತಂದಿರುವ ಮಾರುಕಟ್ಟೆ ನೀತಿಯು ಈ ಮಹಾನ್ ದುರಂತದ ಕಾಲದಲ್ಲಿ ಕೇಂದ್ರ ಸರ್ಕಾರದ ನೀತಿಯಾಗಿದೆ. ಈ ವ್ಯಾಪಾರಿ ನೀತಿಯನ್ನು ಮರೆಮಾಚುವುದಕ್ಕಾಗಿ ಇದೇ ಹೇಳಿಕೆಯಲ್ಲಿ ಸರಕಾರವು 'The wisdom of the executive should be trusted' (ಕಾರ್ಯಾಂಗದ ವಿವೇಕದ ಮೇಲೆ ನಂಬಿಕೆ ಇರಿಸಬೇಕು) ಎಂದು ಹೈಕೋರ್ಟ್‌ಗೆ ಬುದ್ಧಿವಾದ ಹೇಳುತ್ತದೆ! ಅದನ್ನು ನಂಬಿದವರಲ್ಲಿ ಬಹುಪಾಲು ಇಂದು ಶವಗಳಾಗಿದ್ದಾರೆ. ಉಳಿದ ನಾವುಗಳು ಸರದಿ ಸಾಲಿನಲ್ಲಿ ನಿಂತಿದ್ದೇವೆ.

(ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಮಂಗಳವಾರ (ಮೇ 11) ಪ್ರಕಟವಾದ ವರದಿಯ ಆಧಾರದಲ್ಲಿ ಈ ಲೇಖನ ಸಿದ್ಧಪಡಿಸಿದ್ದೇನೆ)

(ಲೇಖಕ: ನಿವೃತ್ತ ಪ್ರಾಧ್ಯಾಪಕ)

ದೆಹಲಿ ಹೈಕೋರ್ಟ್‌ನಲ್ಲಿ ಕೇಂದ್ರದ ವಾದ

ಸೆಂಟ್ರಲ್ ವಿಸ್ತಾ ಸ್ಥಗಿತಕ್ಕೆ ಪಿಐಎಲ್ ದುರುಪಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೆಂಟ್ರಲ್ ವಿಸ್ತಾ ಅಭಿವೃದ್ಧಿ ಯೋಜನೆಯಡಿ ರಾಜಪಥದ ಇಕ್ಕೆಲಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳನ್ನು ಸ್ಥಗಿತಗೊಳಿಸುವಂತೆ ಒತ್ತಾಯಿಸಿ ದೆಹಲಿ ಹೈಕೋರ್ಟ್ ಮುಂದೆ ಸಲ್ಲಿರುವ ಅರ್ಜಿಯು 'ಕಾನೂನು ಪ್ರಕ್ರಿಯೆಯ ದುರುಪಯೋಗ' ಮಾತ್ರವಲ್ಲದೆ ಕೋವಿಡ್ ಹೆಸರಿನಲ್ಲಿ ಯೋಜನೆಯನ್ನು ಸ್ಥಗಿತಗೊಳಿಸಲು ನಡೆಯುತ್ತಿರುವ ಇನ್ನೊಂದು ಪ್ರಯತ್ನ' ಎಂದು ಕೇಂದ್ರ ಸರ್ಕಾರ ಹೇಳಿದೆ.

ದೆಹಲಿ ಹೈಕೋರ್ಟ್‌ನಲ್ಲಿ ಕೇಂದ್ರ ಸರ್ಕಾರವು ಮಂಗಳವಾರ ಈ ವಾದವನ್ನು ಮಂಡಿಸಿದೆ. ಯೋಜನೆ ಸ್ಥಗಿತಗೊಳಿಸಬೇಕು ಎಂದು ಅನ್ಯ ಮಲ್ಹೋತ್ರಾ ಹಾಗೂ ಸೊಹೇಲ್ ಹಾಶ್ಮಿ ಅವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಬುಧವಾರ ವಿಚಾರಣೆಗೆ ಎತ್ತಿಕೊಳ್ಳುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಹಾಗೂ ನ್ಯಾಯಮೂರ್ತಿ ಜಸ್ಮೀತ್ ಸಿಂಗ್ ಅವರನ್ನೊಳಗೊಂಡ ಪೀಠವು ಹೇಳಿದೆ. ಕೇಂದ್ರ ಸರ್ಕಾರದ ಪರವಾಗಿ ನೀಡಲಾಗಿರುವ ಪ್ರಮಾಣಪತ್ರವನ್ನು ದಾಖಲಿಸಿಕೊಳ್ಳುವಂತೆ ಕೋರ್ಟ್ ಸೂಚಿಸಿದೆ.

'ಈ ಕಾಮಗಾರಿಯನ್ನೂ ಸೆಂಟ್ರಲ್ ವಿಸ್ತಾ ಎಂದು ಕರೆಯಲಾಗುತ್ತಿದೆಯಾದರೂ, ವಾಸ್ತವದಲ್ಲಿ ಇದು ಆ ಯೋಜನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಸೆಂಟ್ರಲ್ ವಿಸ್ತಾ ಯೋಜನೆಯಡಿ ಸಂಸತ್ ಭವನದ ನವೀಕರಣ, ಸೌತ್ ಬ್ಲಾಕ್ ನಿರ್ಮಾಣ, ಕೇಂದ್ರ ಸರ್ಕಾರದ ಹೊಸ ಕಚೇರಿ ಸಂಕೀರ್ಣ ನಿರ್ಮಾಣ ಮುಂತಾದವುಗಳು ಸೇರಿವೆ.ಅದೂ ಅಲ್ಲದೆ, ಅರ್ಜಿದಾರರು ಉಲ್ಲೇಖಿಸಿರುವಂತೆ ಈ ಯೋಜನೆಗೆ ಪ್ರಧಾನಮಂತ್ರಿ ಚಾಲನೆ ನೀಡಿಲ್ಲ' ಎಂದು ಸೆಂಟ್ರಲ್ ವಿಸ್ತಾ ಯೋಜನೆಯ ಕಾರ್ಯನಿರ್ವಾಹಕ ಎಂಜಿನಿಯರ್ ರಾಜೀವ್ ಹೇಳಿದ್ದಾರೆ.

'ರಾಷ್ಟ್ರ ರಾಜಧಾನಿಯಲ್ಲಿ ಕೋವಿಡ್ ಪಿಡುಗು ತೀವ್ರವಾಗಿರುವುದರಿಂದ ನಿರ್ಮಾಣ ಕಾರ್ಮಿಕರು ಸೋಂಕಿಗೆ ಒಳಗಾಗುವ ಅಪಾಯವಿದೆ. ಆದ್ದರಿಂದ ಈ ಯೋಜನೆಯ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲ, ಸಿದ್ಧಾರ್ಥ ಮಲ್ಹೋತ್ರಾ ಮನವಿ ಮಾಡಿದರು.

ಆದರೆ, ಇಲ್ಲಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು ಕಾಮಗಾರಿಯ ಸ್ಥಳದಲ್ಲೇ ವಾಸಿಸುತ್ತಿದ್ದಾರೆ. ಅಂತರ ಕಾಯ್ದುಕೊಳ್ಳುವುದೂ ಸೇರಿದಂತೆ ಕೋವಿಡ್‌ನ ಇತರ ಮಾರ್ಗಸೂಚಿಗಳನ್ನೂ ಪಾಲಿಸುತ್ತಾರೆ. ಕಾಮಗಾರಿಯ ಸ್ಥಳದಲ್ಲೇ 250 ಕಾರ್ಮಿಕರು ಉಳಿದುಕೊಳ್ಳುವ ಸೌಲಭ್ಯ ಇದೆ. ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತಿದೆ ಎಂದು ಸರ್ಕಾರದ ಪರ ವಕೀಲರು ತಿಳಿಸಿದ್ದಾರೆ.

ಗುಲಾಬಿ ಕನ್ನಡಕ ತೆಗೆದಿಡಿ: ಪ್ರಧಾನಿಗೆ ರಾಹುಲ್ ಆಗ್ರಹ

'ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಗುಲಾಬಿ ಬಣ್ಣದ ಕನ್ನಡಕವನ್ನು ತೆಗೆಯಬೇಕು. ಆ ಕನ್ನಡಕದಲ್ಲಿ ಸೆಂಟ್ರಲ್ ವಿಸ್ತಾ ಯೋಜನೆ ಬಿಟ್ಟು, ಬೇರೇನೂ ಕಾಣುವುದಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಟೀಕಿಸಿದ್ದಾರೆ.

ಸೆಂಟ್ರಲ್ ವಿಸ್ತಾ ಯೋಜನೆಯನ್ನು ತಕ್ಷಣಕ್ಕೆ ಸ್ಥಗಿತಗೊಳಿಸಬೇಕು ಎಂಬ ತಮ್ಮ ಒತ್ತಾಯವನ್ನು ರಾಹುಲ್ ಗಾಂಧಿ ಮುಂದುವರಿಸಿದ್ದಾರೆ. ಈ ಸಂಬಂಧ ಅವರು ಮಂಗಳವಾರ ಟ್ವೀಟ್ ಮಾಡಿದ್ದಾರೆ. 'ಅಸಂಖ್ಯ ಮೃತದೇಹಗಳು ನದಿಯಲ್ಲಿ ತೇಲಿಬರುತ್ತಿವೆ. ಆಸ್ಪತ್ರೆಗಳ ಎದುರು ಮೈಲುಗಟ್ಟಲೆ ಸಾಲುಗಳಿವೆ. ಜನರ ಬದುಕುವ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಪ್ರಧಾನಿಯವರೇ, ನಿಮ್ಮ ಗುಲಾಬಿ ಛಾಯೆಯ ಕನ್ನಡಕವನ್ನು ತೆಗೆದಿಡಿ''ಎಂದು ಅವರು ಟ್ವೀಟ್ ಮಾಡಿದ್ದಾರೆ.

'ಇಂತಹ ಸಂಕಷ್ಟದ ಸಮಯದಲ್ಲಿ ಅಗತ್ಯವಿರುವವರಿಗೆ ಎಲ್ಲರೂ ಸಹಾಯಹಸ್ತ ಚಾಚಬೇಕು. ಇದಕ್ಕಾಗಿ ಈಗ ಆರಂಭಿಸಲಾಗಿರುವ 'SpeakUpToSaveLives' ಅಭಿಯಾನದಲ್ಲಿ ಎಲ್ಲರೂ ಭಾಗಿಯಾಗಿ' ಎಂದು ಅವರು ಕರೆ ನೀಡಿದ್ದಾರೆ.

ಆಸ್ಪತ್ರೆಗಳಲ್ಲಿ ಐಸಿಯು ಹಾಸಿಗೆ, ಹಾಸಿಗೆ, ಆಮ್ಲಜನಕ ಮತ್ತು ವೆಂಟಿಲೇಟರ್‌ಗಳು ಸಿಗದೆ ಜನರು ಪರದಾಡುತ್ತಿರುವ ದೃಶ್ಯಗಳಿರುವ ವಿಡಿಯೊ ಒಂದನ್ನು ರಾಹುಲ್ ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ.



ನವದೆಹಲಿಯ ಇಂಡಿಯಾಗೇಟ್ ಮುಂದಿನ ರಾಜಪಥದಲ್ಲಿ ಕಾಮಗಾರಿ ನಡೆಯುತ್ತಿದೆ –ಪಿಟಿಐ ಚಿತ್ರ

ಸೋನಿಯಾಗೆ ನಡ್ಡಾ ಬಹಿರಂಗ ಪತ್ರ

ರಾಹುಲ್ ಗಾಂಧಿ ಅವರ ಟ್ವೀಟ್‌ಗೆ ಪ್ರತಿಕ್ರಿಯೆಯಾಗಿ ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ನಾಲ್ಕು ಪುಟದ ಬಹಿರಂಗ ಪತ್ರ ಬರೆದಿದ್ದಾರೆ.

ಪತ್ರದಲ್ಲಿ, 'ಕಾಂಗ್ರೆಸ್‌ನ ಹಿರಿಯ ನಾಯಕರು ಸತತವಾಗಿ ನಕಾರಾತ್ಮಕತೆಯನ್ನು ಹರಡುತ್ತಿದ್ದಾರೆ. ಗೊಂದಲ ಸೃಷ್ಟಿಸಿ ಜನರನ್ನು ತಪ್ಪುದಾರಿಗೆ ಎಳೆಯಲಾಗುತ್ತಿದೆ. ಕೋವಿಡ್ ಪ್ರಕರಣಗಳ ಹೆಚ್ಚಳವನ್ನು ತಡೆಯಲು ಯಾವ್ಯಾವ ರಾಜ್ಯಗಳು ವಿಫಲವಾಗಿವೆ ಎಂಬುದನ್ನು ಫೆಬ್ರುವರಿ ಮತ್ತು ಮಾರ್ಚ್ ತಿಂಗಳ ಅಂಕಿ ಅಂಶಗಳು ಸ್ಪಷ್ಟವಾಗಿ ತಿಳಿಸುತ್ತಿವೆ. ಪಂಜಾಬ್‌ನಂಥ ರಾಜ್ಯದಲ್ಲಿ (ಕಾಂಗ್ರೆಸ್ ಆಡಳಿತವಿರುವ) ಸಾವಿನ ಪ್ರಮಾಣ ಯಾಕೆ ಹೆಚ್ಚು ಎಂಬ ಪ್ರಶ್ನೆಯನ್ನು ನೀವು ನಿಮ್ಮದೇ ಪಕ್ಷದ ಮುಖ್ಯಮಂತ್ರಿಗಳನ್ನು ಕೇಳಬೇಕು' ಎಂದು ನಡ್ಡಾ ಹೇಳಿದ್ದಾರೆ.

ಇದರಿಂದಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಮಧ್ಯೆ ಅಂಕಿಅಂಶಗಳ ಹೋರಾಟ ಆರಂಭವಾಗುವ ಸೂಚನೆಗಳೂ ಲಭಿಸಿವೆ.

ಈ ನಡುವೆ, #GiveItUpGuys ಹ್ಯಾಷ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡಿರುವ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು, 'ಕೋವಿಡ್ ವಿರುದ್ಧದ ದೇಶದ ಹೋರಾಟವನ್ನು ದುರ್ಬಲಗೊಳಿಸಬೇಡಿ ಎಂದು ಜೆ.ಪಿ.ನಡ್ಡಾ ಅವರು ಸೋನಿಯಾ ಗಾಂಧಿಗೆ ಪತ್ರ ಬರೆದಿದ್ದಾರೆ. ಬದಲಿಗೆ ನಡ್ಡಾ ಅವರು, ಕೋವಿಡ್ ವಿರುದ್ಧ ದೇಶದ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿ ಎಂದು ಪ್ರಧಾನಿಗೇಕೆ ಪತ್ರ ಬರೆಯಬಾರದು' ಎಂದು ಪ್ರಶ್ನಿಸಿದ್ದಾರೆ.

ಪಿವಿ ✓

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

✗ **'ಪಶ್ಚಿಮ ಬಂಗಾಳದಲ್ಲಿ** ಅತ್ಯಂತ ಶಕ್ತಿಶಾಲಿ ಆರೋಗ್ಯ ವ್ಯವಸ್ಥೆ ಇದೆ. ಮೇ 1ರಂದು ಮುರಿದ ಕಾಲಿನೊಂದಿಗೆ ಗಾಲಿಕುರ್ಚಿಯಲ್ಲಿ ಕುಳಿತಿದ್ದ ಮಮತಾ ಬ್ಯಾನರ್ಜಿ ಅವರು, ಮೇ 2ರಂದು ಚುನಾವಣೆಯಲ್ಲಿ ಗೆದ್ದ ನಂತರ ನಡೆದಾಡುತ್ತಿದ್ದಾರೆ. ಇಲ್ಲಿನ ಆರೋಗ್ಯ ವ್ಯವಸ್ಥೆ ಅಷ್ಟು ಅತ್ಯುತ್ತಮವಾಗಿದೆ' ಎಂಬ ವಿವರ ಮತ್ತು ಚಿತ್ರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.



✓ **ಈ ಪೋಸ್ಟ್ ಜತೆ** ಬಳಸಿಕೊಂಡಿರುವ ಮೊದಲ ಚಿತ್ರವು, ಮೇ 1ರಂದು ತೆಗೆದ ಚಿತ್ರವಲ್ಲ. ನಂದಿಗ್ರಾಮದಲ್ಲಿ ಗಾಯಗೊಂಡ ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಮಾರ್ಚ್ 10ರಂದು ಮಮತಾ ಬ್ಯಾನರ್ಜಿ ಆಸ್ಪತ್ರೆಯಿಂದ ಮನೆಗೆ ಮರಳಿದ್ದರು. ಮಾರ್ಚ್ 14ರಂದು ಅವರು ರೋಡ್‌ಶೋ ನಡೆಸಿದ್ದರು. ಅಂದು ತೆಗೆಯಲಾಗಿದ್ದ ಚಿತ್ರವನ್ನು, ಈ ಸುಳ್ಳುಸುದ್ದಿಯಲ್ಲಿ ಮೇ 1ರಂದು ತೆಗೆಯಲಾದ ಚಿತ್ರ ಬರೆಯಲಾಗಿದೆ. ಎರಡನೇ ಚಿತ್ರವನ್ನು 2019ರ ನವೆಂಬರ್ 28ರಂದು ತೆಗೆಯಲಾಗಿತ್ತು. ಅದನ್ನು 2021ರ ಮೇ 2ರಂದು ತೆಗೆಯಲಾದ ಚಿತ್ರ ಎಂದು ತಪ್ಪಾಗಿ ಬರೆಯಲಾಗಿದೆ ಎಂದು ಆಲ್ಟ್‌ನ್ಯೂಸ್ ಹೇಳಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಮೋಸದ ಸೌಂದರ್ಯ

ಕುಸುಮ ಕೋಮಲಗಾತ್ರ ಶೂರ್ಪಣಖಿಗರಿದಾಯ್ತೆ?|
ವಿಷದ ಪೂತನಿ ನಯನ ಪಕ್ಷದೊಳಗಿರಳೆ ? ||
ಮುಸಿನಗುವಿನೊಳಗಿರಲಶಕ್ಯವೆ ಪಿಶಾಚಿಕೆಗೆ ?|
ಮೃಷೆಯೊ ಮೈ ಬೆಡಗೆಲ್ಲ – ಮಂಕುತಿಮ್ಮ
|| 416 ||

ಪದ-ಅರ್ಥ: ಕುಸುಮಕೋಮಲಗಾತ್ರ = ಹೂವಿನಂಥ ಮೃದುವಾದ ದೇಹ, ಸೂರ್ಪಣಖಿಗರಿದಾಯ್ತೆ = ಶೂರ್ಪಣಖಿಗೆ + ಅರಿದು(ಅಸಾಧ್ಯ) + ಆಯ್ತೆ, ನಯನಪಕ್ಷ = ನಯನ(ಕಣ್ಣು) + ಪಕ್ಷ(ರೆಪ್ಪೆ), ಮುಸಿನಗುವಿನೊಳಗಿರಲಶಕ್ಯವೆ = ಮುಸಿನಗುವಿನೊಳು (ಹುಸಿ ನಗುವಿನಲ್ಲಿ) + ಇರಲು + ಅಶಕ್ಯವೆ, ಪಿಶಾಚಿಕೆಗೆ = ಪೈಶಾಚಿಕ ಕೃತ್ಯಕ್ಕೆ, ಮೃಷೆ = ವ್ಯಥೆ, ಸುಳ್ಳು.

ವಾಚ್ಯಾರ್ಥ: ಶೂರ್ಪಣಖಿಗೆ ಸುಂದರರೂಪವನ್ನು ಧರಿಸಲು ಕಷ್ಟವಾಯ್ತೇ?, ವಿಷವನ್ನು ತುಂಬಿಕೊಂಡ ಪೂತನಿಗೆ ಸುಂದರವಾದ ನಗುನಗುವ ಕಣ್ಣುಗಳನ್ನು ಹೊಂದುವುದು ಪರಿಶ್ರಮವೆ? ಪೈಶಾಚಿಕ ಕೃತ್ಯದ ಹಿಂದೆ ಹುಸಿನಾಗುವಿರುವುದು ಅಶಕ್ಯವೆ? ದೇಹ ಸೌಂದರ್ಯದಿಂದಲೇ ಕೃತ್ಯವನ್ನು ಅರಿಯುವುದು ಅಸಾಧ್ಯ.


ವಿವರಣೆ: ದೇಹಸೌಂದರ್ಯಕ್ಕೂ, ಆ ಸುಂದರ ದೇಹದಲ್ಲಿರುವ ಕಪಟ ಮನಸ್ಸಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಈ ಕಗ್ಗ ಎರಡು ದೃಷ್ಟಾಂತಗಳ ಮೂಲಕ ತೋರಿಸಿಕೊಡುತ್ತದೆ.

ಮೊದಲನೆಯದು ರಾಮಾಯಣದ ಶೂರ್ಪಣಖಿಯದು. ಆಕೆ ರಾವಣನ ತಂಗಿ, ದುಷ್ಟಬುದ್ಧಿ ಎಂಬ ರಾಕ್ಷಸನ ಹೆಂಡತಿ. ಗಂಡನನ್ನು ಅಣ್ಣನೇ ಕೊಲ್ಲಿಸಿದ ಮೇಲೆ ಆಕೆ ದಂಡಕಾರಣ್ಯದಲ್ಲಿ ವಾಸವಾಗಿದ್ದಳು. ಆಗ ಆಕೆ ಕಂಡದ್ದು ರಾಮ-ಸೀತೆಯರನ್ನು, ಲಕ್ಷ್ಮಣನನ್ನು. ರಾಕ್ಷಸೀಬುದ್ಧಿಗೆ, ಸಂತೋಷವಾಗಿರುವುದನ್ನು ಕಂಡರೆ ಸಂಕಟವಾಗುತ್ತದೆ. ಆಕೆಗೆ ರಾಮನ ಮೇಲೆ ಅನುರಾಗ ಉಕ್ಕುತ್ತದೆ. ರಾಮನಂಥ ಸ್ಫುರದ್ರೂಪಿ ತರುಣನ ಬಳಿಗೆ ತನ್ನ ವಿಕಾರವಾದ ನೈಜ ರೂಪವನ್ನು ಹೇಗೆ ಹೊತ್ತುಕೊಂಡು ಹೋದಾಳು? ಒಂದು ಕ್ಷಣದಲ್ಲೇ ತನ್ನ ಅಸಹ್ಯರೂಪವನ್ನು ಕುಸುಮ ಕೋಮಲ ಶರೀರವನ್ನಾಗಿ ಮಾಡಿಕೊಂಡಳು. ದೇಹವೇನೋ ಸುಂದರವಾಯಿತು. ಆದರೆ ಒಳಗಿನ ಕೊಳಕು ಮನಸ್ಸು? ಅದು ಕೊಳಕನ್ನೇ ಯೋಚಿಸುತ್ತದೆ. ಇದು ರಾಮಾಯಣದ ಕಾಲದ ಪ್ರಸಂಗ.

ಎರಡನೆಯದು ಕೃಷ್ಣವತಾರದ ಪ್ರಸಂಗ. ಅಲ್ಲಿಯೂ ಕ್ರೂರಿಯಾದ ಕಂಸ, ರಾಕ್ಷಸಿಯಾದ ಪೂತನಿಯನ್ನೇ, ಕೃಷ್ಣನನ್ನು ಕೊಲ್ಲಲು ಕಳಿಸಿದ್ದು. ಆಕೆಯ ಉದ್ದೇಶ ಕ್ರೌರ್ಯದ್ದು, ಆದರೆ ಧರಿಸಿದ್ದು ಸುಂದರ ರೂಪ. ಮಮತೆಯ ಮೂಟೆಯನ್ನು ಕಣ್ಣಿಂದ ಉಕ್ಕಿಸಿದಳು ಪೂತನಿ. ಆಕೆ ಮಾಡಿಸಿದ್ದು ವಿಷಪ್ರಾಶನ. ಆಕೆಯ ಪೈಶಾಚಿಕ ಕೃತ್ಯ ಕಣ್ಣಿಗೆ ತೋರದೆ ಅವಳ ಸುಂದರ ರೂಪ ಮತ್ತು ಹುಸಿನಗೆ ಮಾತ್ರ ಕಂಡಿತ್ತು. ಇದು ದ್ವಾಪರಯುಗದ ಕಥೆ.

ಅಂದರೆ ಯಾವುದೇ ಕಾಲದಲ್ಲಾದರೂ, ಈಗಲಾದರೂ, ಸುಂದರರೂಪ, ಮನಮೋಹಕ ನಗು ಸುಭಗವಾದದ್ದನ್ನೇ, ಒಳ್ಳೆಯದನ್ನೇ ಸೂಚಿಸುತ್ತದೆ ಎಂದು ಹೇಳಲಾಗದು. ಅದನ್ನು ಕಗ್ಗ 'ಮೃಷೆಯೊ ಮೈ ಬೆಡಗೆಲ್ಲ' ಎನ್ನುತ್ತದೆ. ಅಂದರೆ ಮೈ ಸೌಂದರ್ಯ, ಬೆಡಗು ಇವೆಲ್ಲ ಸುಳ್ಳು, ನಂಬಲರ್ಹವಾದವುಗಳಲ್ಲ. ಬರೀ ಸೌಂದರ್ಯವುಳ್ಳ ಶರೀರವನ್ನು ಕಂಡು ಮೋಸ ಹೋಗುವುದು ಬುದ್ಧಿವಂತಿಕೆಯಲ್ಲ. ❖

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಮೇ 12, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ಪ್ರತಿಪದೆ ಗಂ. 47-32 (ರಾ. 1-04) ಬುಧವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ. 47-32 (ರಾ. 1-04) ಶೋಭನ ನಾಮ ಯೋಗ ಗಂ 41-21 ಕಿಮಸ್ತುಘ್ನ ಕರಣ ಗಂ. 14-58 ವಿಷ ಗಂ. 14-13 ಅಮೃತ ಗಂ. 40-49 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 5-59 ಸೂರ್ಯಾಸ್ತ: 6-33 ಅದೃಷ್ಟ ಸಂಖ್ಯೆ 7

ಮೇಷ: ಈ ದಿನದ ಪ್ರಗತಿ ಅಷ್ಟೊಂದು ಉತ್ತಮವಲ್ಲದಿದ್ದರೂ ಕುಲದೇವತಾ ಆರಾಧನೆಯಿಂದ ವಿಘ್ನಗಳು ದೂರವಾಗಲಿವೆ. ಪತ್ನಿ ಬಂಧುವರ್ಗದವರಿಂದ ಬಂದ ಸಲಹೆಗಳನ್ನು ನಿರಾಕರಿಸದಿರಿ. ಆರೋಗ್ಯ ಭಾಗ್ಯಕ್ಕೆ ಚ್ಯುತಿಯಿಲ್ಲ.

ವೃಷಭ: ಗುರುಹಿರಿಯರಿಂದ ಪ್ರಶಂಸೆ ಗಳಿಸುವಿರಿ. ವ್ಯವಹಾರದಲ್ಲಿ ಉತ್ತಮ ಪ್ರಗತಿ. ಆಕಸ್ಮಿಕ ಧನಲಾಭ. ಪ್ರೀತಿ ಪಾತ್ರದವರಿಂದ ಸ್ವಲ್ಪಮಟ್ಟಿನ ಕಿರಿಕಿರಿ ಅನುಭವಿಸುವಿರಿ. ಶಿವನ ಅನುಗ್ರಹದಿಂದ ಅನುಕೂಲ.

ಮಿಥುನ: ವಾಹನ ಖರೀದಿ ಯೋಗ. ಆರೋಗ್ಯದಲ್ಲಿ ಸುಧಾರಣೆ. ಕೃಷಿ ಕೆಲಸ ಕಾರ್ಯಗಳಲ್ಲಿ ಪ್ರಗತಿ. ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಗಮನ ಅಗತ್ಯ. ಶಿವನ ಆರಾಧನೆಯಿಂದ ಹೆಚ್ಚಿನ ಅನುಕೂಲ ದೊರೆಯಲಿದೆ.

ಕರ್ಕಾಟಕ: ಹಣಕಾಸಿನ ವ್ಯವಹಾರದಲ್ಲಿ ವಿಶೇಷ ಲಾಭ. ಭೂ ವ್ಯವಹಾರಕ್ಕೆ ಅಷ್ಟೊಂದು ಒಳ್ಳೆಯ ದಿನವಲ್ಲ. ಅದರಿಂದ ದೂರವಿರುವುದೇ ಒಳ್ಳೆಯದು. ದಿನಾಂತ್ಯದಲ್ಲಿ ಮನೆಯಲ್ಲಿ ಸಂತೋಷಕರ ವಾತಾವರಣ ಮೂಡಲಿದೆ.

ಸಿಂಹ: ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಮುಖ ದಿನ. ವಿವಾಹಾಕಾಂಕ್ಷಿಗಳಿಗೆ ಆಶಾಕಿರಣವೊಂದು ಗೋಚರಿಸಲಿದೆ. ನಿರುದ್ಯೋಗಿಗಳು ಜೀವನದಲ್ಲಿ ತಿರುವು ಪಡೆಯುವ ಸಾಧ್ಯತೆ. ಕುಲದೇವತಾ ಆರಾಧನೆಯಿಂದ ಯಶಸ್ಸು.

ಕನ್ಯಾ: ಉದ್ಯೋಗ ಕ್ಷೇತ್ರದಲ್ಲಿ ಲವಲವಿಕೆಯ ದಿನ. ಬಿಡುವಿನ ದಿನದಲ್ಲಿಯೂ ಹೆಚ್ಚಿನ ಕಾರ್ಯಭಾರ ನಡೆಸಬೇಕಾದೀತು. ಮೇಲಧಿಕಾರಿಗಳಿಂದ ಪ್ರಶಂಸೆ. ಮಹಿಳಾ ಕಾರ್ಮಿಕರಿಗೆ ಬಿಡುವಿನ ದಿನವಾಗಲಿದೆ.

ತುಲಾ: ವಿರೋಧಿಗಳ ವಿಷಯದಲ್ಲಿ ಎಚ್ಚರದಿಂದಿರಿ. ಆರೋಗ್ಯದಲ್ಲಿ ವ್ಯತ್ಯಯ ಕಂಡಬರಲಿದೆ. ಪ್ರತಿಸ್ಪರ್ಧಿಗಳ ಸವಾಲು ಎದುರಿಸಬೇಕಾದೀತು. ಮನೆಯವರ ಸಹಕಾರದಿಂದಾಗಿ ಎಲ್ಲವೂ ಸುಗಮವಾಗಿ ನಡೆಯಲಿದೆ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಉತ್ತಮ ಫಲ ದೊರಕಿ ಸಂಭ್ರಮ. ತೈಲೋದ್ಯಮದಲ್ಲಿ ಹೆಚ್ಚಿನ ಲಾಭ ನಿರೀಕ್ಷೆ. ವಸ್ತ್ರ ವಿನ್ಯಾಸಕಾರರಿಗೆ ಅಧಿಕ ಮನ್ನಣೆ. ನೇಕಾರರಿಗೆ ಉತ್ತಮ ಲಾಭ. ಹಿರಿಯರ ಆರೋಗ್ಯದ ಮೇಲೆ ನಿಗಾ ಇರಲಿ.

ಧನು: ಖರ್ಚಿನ ಮೇಲೆ ಹಿಡಿತವಿರಲಿ. ಆದಾಯದಲ್ಲಿ ಕುಂಠಿತ ಸಾಧ್ಯತೆ. ಅನಾವಶ್ಯಕ ವಿಷಯಗಳಿಂದ ಮನಸ್ಸಿಗೆ ಕಿರಿಕಿರಿಯುಂಟಾಗಿ ವ್ಯತಿರಿಕ್ತ ಪರಿಣಾಮ ಎದುರಿಸುವಿರಿ. ಪತ್ನಿಯ ಸಕಾಲ ನೆರವಿನಿಂದ ಹಿತಾನುಭವ.

ಮಕರ: ಸರ್ಕಾರಿ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಕುಲದೇವತಾರಾಧನೆಯಿಂದ ಮಾನಸಿಕ ನೆಮ್ಮದಿ. ಸಾಮಾಜಿಕ ಸ್ಥಾನಮಾನಗಳು ದೊರಕುವ ಸಾಧ್ಯತೆ. ಕಲಾವಿದರಿಗೆ ಅನುಕೂಲಕರ ದಿನ. ಧಾನ್ಯ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ.

ಕುಂಭ: ವ್ಯವಹಾರದಲ್ಲಿ ನಿಗಾ ವಹಿಸಲಿದ್ದೀರಿ. ಹಿರಿಯರೊಂದಿಗೆ ಮನಸ್ತಾಪ. ಇಷ್ಟ ಮಿತ್ರರ ಆಗಮನದಿಂದ ಪರಿಸ್ಥಿತಿ ತಿಳಿಯಾಗಲಿದೆ. ದಿನದಾಂತ್ಯದಲ್ಲಿ ಯಶಸ್ಸು. ದೇವತಾರಾಧನೆಯಿಂದ ಮನಸ್ಸಿಗೆ ಉಲ್ಲಾಸ.


ಮೀನ: ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಶೀಘ್ರಗತಿಯಲ್ಲಿ ಲಾಭ. ತೈಲ ವಸ್ತುಗಳ ವ್ಯವಹಾರದಲ್ಲಿ ಉತ್ತಮ ಪ್ರಗತಿ. ಗುರು ಆರಾಧನೆಯಿಂದ ಹೆಚ್ಚಿನ ಯಶಸ್ಸು. ಮನರಂಜನಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾಧ್ಯತೆ.

ನಿಮ್ಮ ಜನ್ಮದಿನ 12-ಮೇ ಈ ದಿನ ಅತ್ಯಂತ ಶುಭಕರ. ವ್ಯವಹಾರಿಕ ಚತುರತೆಯನ್ನು ಮೆರೆಯಲಿದ್ದೀರಿ. ಚಿನ್ನದ ವ್ಯಾಪಾರಸ್ಥರಿಗೆ ಉತ್ತಮವಾದ ಭವಿಷ್ಯವನ್ನು ತಂದುಕೊಡಲಿದೆ. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು. ರಾಜಕೀಯ ವ್ಯಕ್ತಿಗಳಿಗೆ ವೃಥಾ ಆರೋಪಕ್ಕೆ ಗುರಿಯಾಗುವ ಸಾಧ್ಯತೆ. ಮಾನಸಿಕ ಕಿರಿಕಿರಿ.

ಪದಬಂಧ 4594 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇದು ಕನ್ನಡಿಗರ ಸೆನ್ಸಸ್! (5)
4.ಅನುಕೂಲವಾದಾಗ ಖರೀದಿಸಿದ ರೇಷ್ಮೆ ಬಟ್ಟೆ (3)
5.ಸೈನ್ಯವಿರುವ ಜಾಗ (3)
6.ವನದ ಕೊನೆಗೆ ಮಾಡಿದ ಯಜ್ಞ (3)
8.ಇದು ಶ್ರೇಷ್ಠವಾದುದು (3)
9.ನೋಡುಗ ಇಲ್ಲಿದ್ದಾನೆ (3)
11.ದೇಗುಲದ ಗೋಪುರದ ತುದಿ (3)
12.ಮಣ ಭಾರ ಹೊತ್ತಿರುವ ನಲ್ಲ (3)
13.ಕುಶನ ಅವಳಿ ಸಹೋದರ ಹಿಡಿದಿರುವ ಉಪ್ಪು (3)
15.ಇದು ಕಷ್ಟವೇ ಅಲ್ಲ! (3)
17.ದಾಸನು ಶೇಖರಿಸಿಟ್ಟ ಸಾಮಾನು (3)
18.ಯಾತ್ರಾಸ್ಥಳದಲ್ಲಿ ತಂಗಿರುವ ಮನೆ (5)

ಮೇಲಿಂದ ಕೆಳಕ್ಕೆ
1.ಜಟಿಲತೆಯಿಂದ ಶೇಖರಿಸಿರುವ ನೀರು (2)
2.ಗಡಕ್ಕನೆ ಬಂದೆರಗಿದ ಗಂಡು ಬೆಕ್ಕು (3)
3.ತಿರುಮಲದಲ್ಲಿ ಖರೀದಿಸಿದ ಎಳ್ಳು (2)
6.ಕೈಚಳಕವನ್ನು ಇಲ್ಲಿ ನೋಡಬಹುದು! (5)
7.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)
8.ಪ್ರತಿಮೆಯ ಬಳಿಯಿರುವ ಚಿಹ್ನೆ (3)
10.ಕಣದಲ್ಲಿ ನೆರವೇರಿದ ಮದುವೆ (3)
14.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
16.ಭವನದಲ್ಲಿರುವ ಸಂಸಾರ! (2)
17.ತೃಷೆ ಈ ರೀತಿ ಬಂದಿದೆ (2)



4593ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಲೋಭನೆ2.ಪರಂಪರೆ 4.ಚಕ್ರವಾಕ7.ಜಕಾತಿ8.ಜಾಣ 9.ವಲ್ಲಭ10.ಕಲ್ಕಿ11.ಹಾವಸೆ 12.ತಹನಾಮೆ14.ಹಗೆತನ 15.ತಪರಾಕು

ಮೇಲಿಂದ ಕೆಳಕ್ಕೆ: 1.ಪ್ರಪಂಚ 3.ಪದಾತಿ5.ಕ್ರಮೇಣ6.ಕತ್ತಿವರಸೆ 7.ಜಡಭರತ10.ಕಯನಾ 11.ಹಾವುಗೆ13.ಮೆಲುಕು

ಸುಡೊಕು 4980

			2		9	6		1
						2	7	4
5	7	2	1		4			8
		4		3		1		2
2	8		6	9			4	
		7					6	5
	5							7
		6	8		2			
4	2			5		8		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4979 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ತಿರುಪತಿ: ಮೃತರ ಕುಟುಂಬಗಳಿಗೆ ₹10 ಲಕ್ಷ ಪರಿಹಾರ ಘೋಷಣೆ

ಅಮರಾವತಿ(ಹೈದರಾಬಾದ್) (ಪಿಟಿಐ): ತಿರುಪತಿಯ ರುಯಾ ಆಸ್ಪತ್ರೆಯಲ್ಲಿ ಆಮ್ಲಜನಕ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಮೃತಪಟ್ಟಿರುವ 11 ಜನ ಕೋವಿಡ್ ರೋಗಿಗಳ ಕುಟುಂಬಗಳಿಗೆ ತಲಾ ₹ 10 ಲಕ್ಷ ಪರಿಹಾರ ನೀಡುವುದಾಗಿ ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಮಂಗಳವಾರ ಘೋಷಿಸಿದರು.

ರಾಜ್ಯದಲ್ಲಿನ ಕೋವಿಡ್ ಪರಿಸ್ಥಿತಿ ಕುರಿತು ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ವಿಡಿಯೊ ಕಾನ್ಫರೆನ್ಸ್ ವೇಳೆ ಅವರು ಘೋಷಣೆ ಮಾಡಿದರು.

ತಿರುಪತಿಯಲ್ಲಿರುವ ಶ್ರೀ ವೆಂಕಟೇಶ್ವರ ರಾಮನಾರಾಯಣ್ ರುಯಾ ಸರ್ಕಾರಿ ಆಸ್ಪತ್ರೆಯಲ್ಲಿ ಆಮ್ಲಜನಕ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದಿಂದಾಗಿ 11 ಜನ ಕೋವಿಡ್–19 ರೋಗಿಗಳು ಮೃತಪಟ್ಟ ಘಟನೆ ಸೋಮವಾರ ರಾತ್ರಿ ಸಂಭವಿಸಿತ್ತು.

ಆಮ್ಲಜನಕ ಪೂರೈಕೆ: ಅಧಿಕಾರಿಗಳ ಸಭೆಯಲ್ಲಿ ಸಚಿವ ಜಗದೀಶ ಶೆಟ್ಟರ್ ಹೇಳಿಕೆ

'ರಾಜ್ಯಕ್ಕೆ ಇನ್ನೂ 4 ಕಂಟೇನರ್ ಆಮ್ಲಜನಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಕ್ಕೆ 6 ಕಂಟೇನರ್ ದ್ರವೀಕೃತ ಆಮ್ಲಜನಕ ಮಂಗಳವಾರ (ಮೇ 11) ಬಂದಿದೆ. ಮುಂದಿನ ದಿನಗಳಲ್ಲಿ ಇನ್ನೂ 4 ಕಂಟೇನರ್ ಆಮ್ಲಜನಕ ಸರಬರಾಜು ಆಗಲಿದೆ' ಎಂದು ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ತಿಳಿಸಿದರು.

ರಾಜ್ಯದಲ್ಲಿ ಆಮ್ಲಜನಕ ಪೂರೈಕೆ ಕುರಿತಂತೆ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದ ಅವರು, 'ಜಿಲ್ಲೆಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಆಮ್ಲಜನಕ ಪೂರೈಸಲು ಹೆಚ್ಚಿನ ಗಮನ ನೀಡಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ರಾಜ್ಯದಲ್ಲಿ ಇದುವರೆಗೆ ಪ್ರತಿದಿನ ಸರಾಸರಿ 1,015 ಟನ್‌ನಷ್ಟು ಆಮ್ಲಜನಕ ಬಳಕೆ ಮಾಡಲಾಗಿದೆ. ರಾಜ್ಯಕ್ಕೆ ವಿವಿಧ ಮೂಲಗಳಿಂದ ಅಗತ್ಯವಿರುವಷ್ಟು ಪ್ರಮಾಣದ ಆಮ್ಲಜನಕ ಪೂರೈಕೆ ಆಗುತ್ತಿದೆ. ಆದರೆ, ಅದೇ ರೀತಿಯಲ್ಲಿ ಬೇಡಿಕೆಯೂ ಹೆಚ್ಚುತ್ತಿದೆ. ಹೀಗಾಗಿ ಪೂರೈಕೆಯನ್ನು ಕ್ರಮಬದ್ಧಗೊಳಿಸಬೇಕು' ಎಂದೂ ಸೂಚನೆ ನೀಡಿದರು.

'ಜಿಲ್ಲೆಗಳಿಗೆ ಬೇಡಿಕೆಗೆ ಅನುಗುಣವಾಗಿ ಆಮ್ಲಜನಕ ಸರಬರಾಜು ಆಗುವುದನ್ನು ನೋಡಿಕೊಳ್ಳಬೇಕು. 24 ಗಂಟೆಗಳ ಮಾಹಿತಿ ಆಧರಿಸಿ, ಅಗತ್ಯ ಕ್ರಮತೆಗೆದುಕೊಳ್ಳಬೇಕು. ಯಾವುದೇ ಗೊಂದಲ ಅಥವಾ ಸಮಸ್ಯೆಗೆ ಎಡೆ ಮಾಡಿಕೊಡಬಾರದು' ಎಂದೂ ಸೂಚಿಸಿದರು.



ಜಗದೀಶ ಶೆಟ್ಟರ್

ಸಮಾಲೋಚನೆ ಫಲಪ್ರದ: 'ಕೇಂದ್ರ ಸಚಿವರಾದ ಪೀಯೂಷ್ ಗೋಯೆಲ್, ಪ್ರಲ್ಹಾದ ಜೋಶಿ ಮತ್ತು ಸದಾನಂದ ಗೌಡ ಜೊತೆ ನಡೆಸಿದ ಸಮಾಲೋಚನೆಯಿಂದ ಕೇಂದ್ರ ಸರ್ಕಾರ 6 ಕಂಟೇನರ್‌ಗಳಲ್ಲಿ 120 ಟನ್ ದ್ರವೀಕೃತ ಆಮ್ಲಜನಕ ಪೂರೈಸಿದೆ' ಎಂದರು.

ಬಫರ್ ಸ್ಟೋರೇಜ್: 'ರಾಜ್ಯದಲ್ಲಿ ಅನಿವಾರ್ಯ ಸಂದರ್ಭಗಳಲ್ಲಿ ಬಳಸಿಕೊಳ್ಳಲು ಅನುಕೂಲವಾಗುವಂತೆ ಬಫರ್ ಸ್ಟೋರೇಜ್ ಹೊಂದುವುದು ಅನಿವಾರ್ಯವಾಗಿದೆ' ಎಂದು ಸಲಹೆ ನೀಡಿದರು.

'ರಾಜ್ಯಕ್ಕೆ ಇನ್ನೂ ಸಿಲಿಂಡರ್‌ಗಳು ಹಾಗೂ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳ ಅವಶ್ಯಕತೆ ಇದೆ. ಕೇಂದ್ರ ಸರ್ಕಾರ 320 ಸಿಲಿಂಡರ್ ಮತ್ತು 400 ಕಾನ್ಸನ್‌ಟ್ರೇಟರ್ ನೀಡಿದೆ. ನಾವು 7700 ಸಿಲಿಂಡರ್ ಹಾಗೂ 1,000 ಕಾನ್ಸನ್‌ಟ್ರೇಟರ್‌ಗೆ ಬೇಡಿಕೆ ಇಟ್ಟಿದ್ದು, ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ನಡೆಸಲಾಗುವುದು' ಎಂದರು.

100 ಟನ್ ಆಮ್ಲಜನಕ ತಂದ ಮತ್ತೆರಡು ಹಡಗು

ಮಂಗಳೂರು: ಸಮುದ್ರ ಸೇತು–2 ಯೋಜನೆಯಡಿ ಮಂಗಳವಾರ ನೌಕಾಪಡೆಯ ಎರಡು ಹಡಗುಗಳು ಇಲ್ಲಿನ ಎನ್‌ಎಂಪಿಟಿಗೆ ಬಂದಿವೆ. ತಲಾ 20 ಟನ್ ಸಾಮರ್ಥ್ಯದ 5 ಟ್ಯಾಂಕ್‌ಗಳಲ್ಲಿ 100 ಟನ್ ದ್ರವೀಕೃತ ಆಮ್ಲಜನಕವನ್ನು ಕುವೈತ್‌ನಿಂದ ಹೊತ್ತು ತಂದಿವೆ.

'ಐಎನ್‌ಎಸ್ ತಬರ್' ಹಡಗು 40 ಟನ್ ಆಮ್ಲಜನಕ, 30 ಟನ್ ಆಮ್ಲಜನಕದ ಸಿಲಿಂಡರ್‌ಗಳನ್ನು ತಂದಿದ್ದು, 'ಐಎನ್‌ಎಸ್ ಕೊಚ್ಚಿ' ಹಡಗು 60 ಟನ್ ಆಮ್ಲಜನಕ ಹಾಗೂ 40 ಟನ್ ಆಮ್ಲಜನಕ ಸಿಲಿಂಡರ್‌ಗಳನ್ನು ತಂದಿದೆ.

ವಾರದಲ್ಲಿ ನಾಲ್ಕು ಹಡಗುಗಳು ಎನ್‌ಎಂಪಿಟಿಗೆ ಬಂದಿದ್ದು, ಒಟ್ಟು 180 ಟನ್ ದ್ರವೀಕೃತ ಆಮ್ಲಜನಕ, ಸಿಲಿಂಡರ್‌ಗಳು, ಕಾನ್ಸ್‌ಟ್ರೇಟರ್‌ಗಳನ್ನು ತಂದಿವೆ.



'ಐಎನ್‌ಎಸ್ ತಬರ್' ಹಡಗು ಹೊತ್ತು ತಂದ ಆಮ್ಲಜನಕದ ಟ್ಯಾಂಕರ್‌ಗಳನ್ನು ಲಾರಿ ಮೂಲಕ ಸಾಗಿಸಲಾಯಿತು


ಸುದ್ದಿ 2 ನಿಮಿಷ

ಉದ್ಧವ್ ಈಗ ಕೋವಿಡ್ ಕುಟುಂಬ ವೈದ್ಯ: 'ಸಾಮ್ನಾ' ಬಣ್ಣನೆ

ಮುಂಬೈ: 'ಕಾಳಜಿಯ ಮನೋಭಾವ ಹೊಂದಿರುವ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು, ಮಹಾರಾಷ್ಟ್ರದಲ್ಲಿ ಕೋವಿಡ್ ಪಿಡುಗು ಅಪಾಯದ ಮಟ್ಟವನ್ನು ಮೀರದಂತೆ ನೋಡಿಕೊಂಡಿದ್ದಾರೆ. ಅವರೀಗ ಇಡೀ ಮಹಾರಾಷ್ಟ್ರದ ಕುಟುಂಬ ವೈದ್ಯರಾಗಿದ್ದಾರೆ ಮತ್ತು 'ಕೋವಿಡ್ ತಜ್ಞ' (ಕೋವಿಡಾಲಜಿಸ್ಟ್) ಎನಿಸಿದ್ದಾರೆ' ಎಂದು ಶಿವಸೇನಾದ ಮುಖವಾಣಿ 'ಸಾಮ್ನಾ' ಬಣ್ಣಿಸಿದೆ.

'ಠಾಕ್ರೆ ಅವರು ಪಿಡುಗಿನ ಬಗ್ಗೆ ಸಂಪೂರ್ಣ ಅಧ್ಯಯನ ನಡೆಸಿದ್ದಾರೆ. ಸೋಂಕಿನ ಪ್ರಮಾಣವನ್ನು ಕಡಿಮೆ ಮಾಡಲು ಅವರು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಆದ್ದರಿಂದ ಅವರು ಒಂದರ್ಥದಲ್ಲಿ ಮಹಾರಾಷ್ಟ್ರದ 12 ಕೋಟಿ ಜನರ ಕುಟುಂಬ ವೈದ್ಯರಾಗಿದ್ದಾರೆ. ಕೋವಿಡ್ ವಿರುದ್ಧ ಹೋರಾಡುವಂತೆ ಠಾಕ್ರೆ ಅವರು ಜನರಲ್ಲಿ ಧೈರ್ಯವನ್ನು ತುಂಬುತ್ತಿದ್ದಾರೆ. ಆದ್ದರಿಂದ ಅವರನ್ನು ಬೆಂಬಲಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ' ಎಂದು ಪತ್ರಿಕೆಯ ಸಂಪಾದಕೀಯದಲ್ಲಿ ಹೇಳಲಾಗಿದೆ.

'ಸೋಂಕು ತಗಲಬಹುದೆಂಬ ಭಯದಿಂದ ಉದ್ಧವ್ ಅವರು ಒಂದು ವರ್ಷದಿಂದ ಮನೆಯಿಂದ ಹೊರಗೆ ಬರುತ್ತಿಲ್ಲ' ಎಂದು ಬಿಜೆಪಿ ಹಾಗೂ ಇತರ ವಿರೋಧಪಕ್ಷಗಳು ಮಾಡಿರುವ ಟೀಕೆಗೆ ಪ್ರತ್ಯುತ್ತರ ನೀಡಿರುವ ಪತ್ರಿಕೆಯು, 'ಅನಗತ್ಯವಾಗಿ ತಿರುಗಾಡುವುದನ್ನು ಅವರು ನಿಲ್ಲಿಸಿದ್ದಾರೆ. ಪಿಡುಗಿನ ಸಂದರ್ಭದಲ್ಲಿ ಕ್ಷುಲ್ಲಕ ರಾಜಕೀಯವನ್ನು ಬಿಟ್ಟು ಕೋವಿಡ್ ನಿರ್ವಹಣೆಯತ್ತಲೇ ಅವರು ಗಮನ ಕೇಂದ್ರೀಕರಿಸಿದ್ದಾರೆ. ಆದ್ದರಿಂದಲೇ ಮಹಾರಾಷ್ಟ್ರ ಮಾದರಿಯನ್ನು ಹೊಗಳದಿರಲು ಪ್ರಧಾನಿ ಮೋದಿಗೂ ಸಾಧ್ಯವಾಗಲಿಲ್ಲ' ಎಂದಿದೆ.



ಸಿ.ಎಂ ಯಡಿಯೂರಪ್ಪ ಭೇಟಿ ಮಾಡಿದ ಸಂತೋಷ್

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಮಂಗಳವಾರ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಸುಮಾರು ಒಂದು ತಾಸು ಮಾತುಕತೆ ನಡೆಸಿದರು.

ರಾಜ್ಯದಲ್ಲಿ ಕೋವಿಡ್ ನಿರ್ವಹಣೆಗೆ ಸಂಬಂಧಿಸಿದಂತೆ ಅವರು ಮುಖ್ಯಮಂತ್ರಿ ಜತೆ ಚರ್ಚೆ ನಡೆಸಿದರು.

'ಕೋವಿಡ್ ನಿರ್ವಹಣೆ ವಿಷಯದಲ್ಲಿ ರಾಜ್ಯಕ್ಕೆ ಅಗತ್ಯವಿರುವ ಎಲ್ಲ ನೆರವುಗಳನ್ನು ಒದಗಿಸಲು ಕೇಂದ್ರದ ಸಚಿವರ ಜತೆ ಮಾತುಕತೆ ನಡೆಸುತ್ತೇನೆ. ಆ ಕುರಿತು ತಮಗೆ ಮಾಹಿತಿ ನೀಡುವಂತೆ ಯಡಿಯೂರಪ್ಪ ಅವರಲ್ಲಿ ಮನವಿ ಮಾಡಿದರು' ಎಂದು ಮೂಲಗಳು ತಿಳಿಸಿವೆ.

ಆ ಬಳಿಕ ಅವರು ಪಕ್ಷದ ಕಚೇರಿಯಲ್ಲಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಇತರ ಮುಖಂಡರನ್ನು ಭೇಟಿಯಾದರು. ಇತ್ತೀಚೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯ ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಮತ್ತು ಬಿ.ವೈ.ವಿಜಯೇಂದ್ರ ಅವರನ್ನು ಕರೆಸಿಕೊಂಡು ಆಮ್ಲಜನಕ ಹಂಚಿಕೆ ಸಂಬಂಧಿಸಿದಂತೆ ಮಾತುಕತೆ ನಡೆಸಿದ್ದರು.

ಲಸಿಕೆ ವಿಷಯದಲ್ಲಿ ರಾಜಕೀಯ ಸಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಲಸಿಕೆ ವಿಚಾರದಲ್ಲಿ ರಾಜಕೀಯ ಮಾಡದೆ ಅರ್ಹ ಎಲ್ಲರಿಗೂ ಒಂದೆರಡು ತಿಂಗಳಲ್ಲಿ ಲಸಿಕೆ ಹಾಕುವ ಮೂಲಕ ರಾಜ್ಯದ ಜನರನ್ನು ಕಾಪಾಡಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಅವರು, 'ಕೋವಿಡ್ ಎರಡನೇ ಅಲೆಯಲ್ಲಿ ಹೆಚ್ಚು ಬಾಧಿತರಾಗಿ ಸಾವು–ನೋವುಗಳಿಗೆ ಗುರಿಯಾಗುತ್ತಿರುವವರು ಯುವಕರೇ ಆಗಿರುವುದರಿಂದ ಆ ವರ್ಗಕ್ಕೆ ಯುದ್ಧೋಪಾದಿಯಲ್ಲಿ ಲಸಿಕೆ ನೀಡಬೇಕು' ಎಂದಿದ್ದಾರೆ.

'ಯುವ ಸಮುದಾಯಕ್ಕೆ ಲಸಿಕೆ ನೀಡುವ ವಿಚಾರದಲ್ಲೂ ಕೇಂದ್ರ ಸರ್ಕಾರ ರಾಜಕಾರಣ ಮಾಡುತ್ತಿದೆ. ಗುಜರಾತ್, ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಯುವಕರಿಗೆ ವ್ಯಾಪಕ ಪ್ರಮಾಣದಲ್ಲಿ ಲಸಿಕೆ ಹಾಕಲಾಗುತ್ತಿದೆ. ದೇಶದ ಯಾವುದೋ ಒಂದು ಭಾಗದ ಜನರಿಗೆ ಲಸಿಕೆ ನೀಡಿ, ಉಳಿದವರು ವಂಚಿತರಾದರೆ ವೈರಸ್ ರೂಪಾಂತರಗೊಂಡು ಲಸಿಕೆಗಳಿಗೂ ಪ್ರತಿರೋಧ ಬೆಳೆಸಿಕೊಂಡರೆ ಹಾಕುವ ಲಸಿಕೆ ನಿರುಪಯುಕ್ತವಾಗುತ್ತವೆ ಎಂದು ತಜ್ಞರು ಎಚ್ಚರಿಕೆ ನೀಡುತ್ತಿದ್ದಾರೆ. ಹೀಗಾದರೆ ಲಸಿಕೆ ಹಾಕಿಸಿಕೊಂಡವರು ಕೂಡಾ ಗಂಡಾಂತರಕ್ಕೆ ತುತ್ತಾಗುತ್ತಾರೆ' ಎಂದಿದ್ದಾರೆ.



ಸಿದ್ದರಾಮಯ್ಯ

'ಲಸಿಕೆ ದರ ₹ 150, ₹ 300, ₹400, ₹ 600 ಎಂದು ವ್ಯಾಪಾರಕ್ಕಿಡಲಾಗಿದೆ. ಈ ವ್ಯತ್ಯಸ್ತ ದರಗಳನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ. ಇದನ್ನು ನೋಡಿದರೆ ಕೇಂದ್ರದ ಬಿಜೆಪಿ ಸರ್ಕಾರ ಅಂಗಡಿ ನಡೆಸುತ್ತಿದೆಯೇ ಎಂಬ ಅನುಮಾನ ಬರುತ್ತಿದೆ. ಮಹಾರಾಷ್ಟ್ರ ಸರ್ಕಾರ ತಮ್ಮ ಅಧೀನದಲ್ಲಿರುವ ಕಂಪನಿಗಳ ಮೂಲಕ ಕೋವ್ಯಾಕ್ಸಿನ್ ಲಸಿಕೆಯನ್ನು ಈಗಾಗಲೇ ಉತ್ಪಾದಿಸುತ್ತಿದೆ ಎಂಬ ವರದಿಗಳಿವೆ. ಕರ್ನಾಟಕವೂ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕು' ಎಂದೂ ಸಲಹೆ ನೀಡಿದ್ದಾರೆ.

'ಹಾಸಿಗೆ, ಆಮ್ಲಜನಕ, ಲಸಿಕೆ ಮಾಹಿತಿ ನೀಡಲಿ'

'ಕೋವಿಡ್ ಮೂರನೇ ಅಲೆ ಬಗ್ಗೆ ಎಚ್ಚರಿಸಿರುವ ಮುಖ್ಯಮಂತ್ರಿ, ಅದಕ್ಕೆ ಸಿದ್ಧತೆ ಮಾಡಿಕೊಳ್ಳಲಿ. ಅದಕ್ಕೂ ಮೊದಲು ಎರಡನೇ ಅಲೆ ನಿಯಂತ್ರಿಸಲು ಕಾರ್ಯಕ್ರಮ ರೂಪಿಸಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಸಿಇಟಿಯಲ್ಲಿ ಯಾವ ಕಾಲೇಜಿನಲ್ಲಿ ಯಾವ್ಯಾವ ಸೀಟು ಎಷ್ಟೆಷ್ಟು ಇದೆ ಎಂದು ತೋರಿಸುವ ರೀತಿಯಲ್ಲಿ ಯಾವ ಆಸ್ಪತ್ರೆಯಲ್ಲಿ ಹಾಸಿಗೆ, ಆಮ್ಲಜನಕ ಇದೆ, ಲಸಿಕೆ ಎಲ್ಲಿ ನೀಡಲಾಗುತ್ತದೆ ಎಂಬ ಮಾಹಿತಿ ಕೊಡಲಿ' ಎಂದು ಆಗ್ರಹಿಸಿದರು.

'ಜನರಿಗೆ ಪರಿಹಾರ ಕೊಡಲು ನೋಟು ಮುದ್ರಿಸುವ ಯಂತ್ರ ಇಲ್ಲ ಎಂದು ಶಿವಮೊಗ್ಗದಲ್ಲಿ ಸಚಿವರೊಬ್ಬರು ಹೇಳಿದ್ದಾರೆ. ಅದೇ ಸಚಿವ ಹಿಂದೆ ನೋಟು ಎಣಿಸುವ ಯಂತ್ರ ಇಟ್ಟುಕೊಂಡಿರಲಿಲ್ಲವೇ? ಪರಿಹಾರ ಕೊಡಲು ಆಗದಿದ್ದರೆ ಸರ್ಕಾರದ ಬಳಿ ದುಡ್ಡಿಲ್ಲ ಎಂದು ಹೇಳಿ. ಲಾಕ್ ಡೌನ್ ಮಾಡಿರುವುದಕ್ಕೆ ಅವರು ಪರಿಹಾರ ಕೇಳುತ್ತಿದ್ದಾರೆ. ನಿಮ್ಮನ್ನು ಪರಿಹಾರ ಕೇಳದೆ ಬೇರೆ ಯಾರನ್ನು ಕೇಳಬೇಕು' ಎಂದು ಪ್ರಶ್ನಿಸಿದರು.



ಶಿವಕುಮಾರ್

ಕೋಮುವಾದದ ವಿಷಬೀಜ: 'ರಾಜ್ಯದಲ್ಲಿ ಕೋಮುವಾದದ ವಿಷಬೀಜಕ್ಕೆ ಇರುವ ಮತ್ತೊಂದು ಹೆಸರು ಸಂಸದ ತೇಜಸ್ವಿ ಸೂರ್ಯ. ಪತ್ರಿಕಾಗೋಷ್ಠಿಯಲ್ಲಿ 17 ಜನರ ಹೆಸರು ಓದಿದ್ದು ಈ ಮಹಾನುಭಾವ ಅಲ್ಲವೇ. ಈಗ ಅಧಿಕಾರಿಗಳು ಕೊಟ್ಟ ಹೆಸರು ಓದಿದೆ ಎನ್ನುತ್ತಿದ್ದಾನೆ. ಅಧಿಕಾರಿಗಳನ್ನು ಸಿಕ್ಕಿಸಲು ನೋಡುತ್ತಿದ್ದಾನೆ' ಎಂದು ಶಿವಕುಮಾರ್ ಆರೋಪಿಸಿದರು.

'ಎರಡು ಕೋಟಿ ಲಸಿಕೆಗೆ ಜಾಗತಿಕ ಟೆಂಡರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ಲಸಿಕೆಗೆ ಬೇಡಿಕೆ ಹೆಚ್ಚುತ್ತಿರುವುದರಿಂದ, ಎರಡು ಕೋಟಿ ಲಸಿಕೆಯನ್ನು ಜಾಗತಿಕ ಟೆಂಡರ್ ಮೂಲಕ ಖರೀದಿಸಲಾಗುವುದು' ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಮಂಗಳವಾರ ತಿಳಿಸಿದರು.

ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಈಗಾಗಲೇ 1 ಕೋಟಿ ಕೋವ್ಯಾಕ್ಸಿನ್ ಮತ್ತು 2 ಕೋಟಿ ಕೋವಿಶೀಲ್ಡ್ ಲಸಿಕೆಗೆ ಬೇಡಿಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರ ಹಂಚಿಕೆ ಮಾಡುತ್ತಿದ್ದ ಲಸಿಕೆ ಬಿಟ್ಟರೆ, ಈವರೆಗೆ ಟೆಂಡರ್ ಕರೆದು ಲಸಿಕೆ ಖರೀದಿಸಿರಲಿಲ್ಲ. ಟೆಂಡರ್ ಪಡೆಯುವ ಕಂಪನಿ ಏಳು ದಿನಗಳ ಒಳಗೆ ಈ ಪ್ರಕ್ರಿಯೆ ಮುಗಿಸಿ, ಪೂರೈಕೆ ಆರಂಭಿಸುವಂತೆ ಸೂಚಿಸಲಾಗಿದೆ' ಎಂದರು.

'ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹಂಚಲು ಒಂದು ಲಕ್ಷ ಪಲ್ಸ್ ಆಕ್ಸಿಮೀಟರ್‌ಗಳನ್ನು ಖರೀದಿಸಲು ಸೂಚಿಸಲಾಗಿದೆ. ಅವುಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವುದು ಮತ್ತು ಸೋಂಕಿತರು ಗುಣಮುಖರಾದ ಬಳಿಕ ವಾಪಸ್ ಪಡೆಯುವುದು ಆಯಾ ವೈದ್ಯಾಧಿಕಾರಿಗಳ ಹೊಣೆ. ಪಲ್ಸ್ ಆಕ್ಸಿಮೀಟರ್‌ಗಳ ಬ್ಯಾಂಕ್ ಮಾಡುವ ಉದ್ದೇಶವಿದೆ' ಎಂದರು.

ಮಹಿಳಾ ಉತ್ತರಾಧಿಕಾರಿ ನೇಮಕಕ್ಕೆ ಒಲವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಉತ್ತರಾಧಿಕಾರಿಗಳನ್ನಾಗಿ ಮೂವರನ್ನು ನೇಮಕ ಮಾಡಿ, ಅವರಲ್ಲಿ ಒಬ್ಬ ಮಹಿಳೆಗೂ ಅವಕಾಶ ಕಲ್ಪಿಸಲು ನಿಡುಮಾಮಿಡಿ ಮಠದ ಪೀಠಾಧಿಪತಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಒಲವು ತೋರಿದ್ದಾರೆ.

ಎರಡನೇ ಬಾರಿಗೆ ಕೋವಿಡ್ ದೃಢಪಟ್ಟಿರುವ ಬೆನ್ನಲ್ಲೇ, ಚಿಕಿತ್ಸೆ ಪಡೆಯುತ್ತಿರುವ ಸ್ವಾಮೀಜಿ ಮಠದ ಭಕ್ತರು, ಅನುಯಾಯಿಗಳು ಮತ್ತು ತಮ್ಮ ಅಭಿಮಾನಿಗಳಿಗೆ ಈ ಸಂಬಂಧ ಸೋಮವಾರ ಬಹಿರಂಗ ಪತ್ರವೊಂದನ್ನು ಬರೆದಿದ್ದಾರೆ. ಮಠಕ್ಕೆ ಮೂವರು ಉತ್ತರಾಧಿಕಾರಿಗಳನ್ನು ನೇಮಿಸಲು ಅವಕಾಶ ನೀಡುವಂತೆ ಪತ್ರದಲ್ಲಿ ಮನವಿ ಮಾಡಿದ್ದಾರೆ.



ನಿಡುಮಾಮಿಡಿ ಸ್ವಾಮೀಜಿ

'ಶಿವ ಪರಂಪರೆಯ ಮಠಗಳಲ್ಲಿ ಸ್ಥಿರ ಪಟ್ಟ ಹಾಗೂ ಚರ ಪಟ್ಟಗಳು ಇವೆ. ಅವುಗಳ ಜತೆಗೆ ವರ ಪಟ್ಟವನ್ನೂ ಸೇರಿಸಲು ನಿಶ್ಚಯಿಸಿದ್ದೇನೆ. ಸ್ಥಿರ ಪೀಠಾಧ್ಯಕ್ಷರು ಮೂಲ ಪೀಠದ ಉಸ್ತುವಾರಿ ಹಾಗೂ ಶಾಖಾ ಮಠಗಳ ಆಸ್ತಿಗಳನ್ನು ಕಾಪಾಡುವ ಹೊಣೆ ಹೊಂದಿರುತ್ತಾರೆ. ಚರ ಪೀಠಾಧ್ಯಕ್ಷರಿಗೆ ಶಾಖಾ ಮಠಗಳ ದೈನಂದಿನ ಪೂಜೆ, ಶಿಷ್ಯಾರ್ಜನೆ, ಸಾಂಸ್ಕೃತಿಕ ಚಟುವಟಿಕೆಗಳ ಉಸ್ತುವಾರಿ ಇರುತ್ತದೆ. ವರ ಪೀಠಾಧ್ಯಕ್ಷರಿಗೆ ಶೈಕ್ಷಣಿಕ ಸಂಸ್ಥೆಗಳನ್ನು ನಿರ್ವಹಣೆ ಮಾಡುವ ಜವಾಬ್ದಾರಿ ಇರುತ್ತದೆ' ಎಂದು ಸ್ವಾಮೀಜಿ ಪತ್ರದಲ್ಲಿ ತಿಳಿಸಿದ್ದಾರೆ.

ಸ್ಥಿರ ಪಟ್ಟದವರು ಗೂಳೂರು ಸಂಸ್ಥಾನದಲ್ಲಿ, ಚರ ಪಟ್ಟದವರು ನಿಡುಮಾಮಿಡಿಯಲ್ಲಿರುವ ಮಠದಲ್ಲಿ ಮತ್ತು ವರ ಪಟ್ಟದವರು ಚಿಕ್ಕಬಳ್ಳಾಪುರ ಅಥವಾ ವಿಜಯಪುರದಲ್ಲಿನ ಮಠಗಳಲ್ಲಿ ಇದ್ದು ಕೆಲಸ ಮಾಡಬೇಕಾಗುತ್ತದೆ ಎಂದು ತಮ್ಮ ಯೋಚನೆಯನ್ನು ಹಂಚಿಕೊಂಡಿದ್ದಾರೆ.

'ಈ ಮೂರೂ ಪಟ್ಟಗಳಿಗೂ ಕೆಲವರನ್ನು ನಾನು ಮನಸ್ಸಿನಲ್ಲಿ ಇರಿಸಿಕೊಂಡಿದ್ದೇನೆ. ಅವರಲ್ಲಿ ಇಬ್ಬರಿಗೆ ಪೀಠದ ವತಿಯಿಂದ ವಿದ್ಯಾಭ್ಯಾಸ ಮಾಡಿಸಿ, ತರಬೇತಿ ನೀಡಿದ್ದೇನೆ. ಜಂಗಮ ಸಮಾಜದ ಮಹಿಳೆಯೊಬ್ಬರನ್ನು ಪಟ್ಟಕ್ಕೆ ನೇಮಿಸಲು ಪ್ರಯತ್ನಿಸುತ್ತಾ ಬಂದಿದ್ದೇನೆ. ಆದರೆ, ಸಮಾಜದಲ್ಲಿ ಅನೇಕ ಸಾಧಕಿಯರಿದ್ದರೂ ಪೀಠ ಸ್ವೀಕರಿಸಲು ಹಿಂದೇಟು ಹಾಕಿದ್ದಾರೆ. ಜಂಗಮೇತರ ಸಮಾಜಗಳಲ್ಲಿನ ಹಲವು ಮಹಿಳೆಯರು ಆಸಕ್ತಿ ತೋರಿದ್ದಾರೆ. ಈಗಲೂ ಶಿವಧರ್ಮ ಮತ್ತು ಶಿವ ಸಂಸ್ಕೃತಿಯಲ್ಲಿ ಸಂಪೂರ್ಣ ಶ್ರದ್ಧೆ ಇರುವ ಜಂಗಮ ವಂಶೀಯ ಅವಿವಾಹಿತ ಮಹಿಳೆ ದೊರೆತರೆ ಅವರಿಗೆ ಅವಕಾಶ ಕಲ್ಪಿಸಲು ಸಿದ್ಧನಿದ್ದೇನೆ' ಎಂದು ಹೇಳಿದ್ದಾರೆ.

₹ 5 ಕೋಟಿಯವರೆಗೂ ಹಣ ಪಡೆದು ಪೀಠಾಧಿಕಾರ ಬಿಟ್ಟುಕೊಡುವಂತೆ ಆಮಿಷ ಬಂದಿದ್ದ ಸಂಗತಿಯನ್ನು ಪತ್ರದಲ್ಲಿ ಉಲ್ಲೇಖಿಸಿರುವ ಸ್ವಾಮೀಜಿ, ಸಾಮಾಜಿಕ ನ್ಯಾಯವನ್ನು ಕಾಯ್ದುಕೊಂಡು ಉತ್ತರಾಧಿಕಾರಿಗಳನ್ನು ನೇಮಿಸುವುದಾಗಿ ಪ್ರಕಟಿಸಿದ್ದಾರೆ.

'ಲಸಿಕೆ ಅಭಿಯಾನ ನಿಷ್ಪ್ರಯೋಜಕ'

ಒಂದನೇ ಪುಟದಿಂದ

'ಮೊದಲ ಡೋಸ್ ಪಡೆದವರಿಗೇ ಎರಡನೇ ಡೋಸ್ ನೀಡಲು ಲಸಿಕೆಯ ಲಭ್ಯತೆ ಇಲ್ಲ. ಪರಿಸ್ಥಿತಿ ಹೀಗಿದ್ದರೂ 18ರಿಂದ 44 ವರ್ಷದವರಿಗೂ ಮೊದಲ ಡೋಸ್ ನೀಡಲು ಉದ್ದೇಶಿಸಲಾಗಿದೆ. ಲಸಿಕೆಯೇ ಇಲ್ಲದೆ ಈ ಯೋಜನೆ ಕಾರ್ಯರೂಪಕ್ಕೆ ತರುವುದು ಹೇಗೆ, ಅಭಿಯಾನಕ್ಕೆ ಸಿದ್ಧಪಡಿಸಿಕೊಂಡಿರುವ ರೂಪರೇಷೆಗಳೇನು. ಎಲ್ಲವನ್ನೂ ಎರಡು ದಿನದಲ್ಲಿ ಮಂಡಿಸಬೇಕು' ಎಂದು ಕಟ್ಟಪ್ಪಣೆ ನೀಡಿತು.

'ಲಸಿಕೆ ಬೇಡಿಕೆ ಪ್ರಮಾಣವನ್ನು ಪೂರೈಸಲಾಗದಷ್ಟು ಹತಾಶ ಸ್ಥಿತಿ ಇರುವುದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು. ರಾಜ್ಯ ಸರ್ಕಾರ ಸಲ್ಲಿಸಿರುವ ಬೇಡಿಕೆ ಪಟ್ಟಿ ಕುರಿತು ಈ ಹಿಂದಿನ ವಿಚಾರಣೆ ವೇಳೆ ನೀಡಲಾದ ನಿರ್ದೇಶನಗಳನ್ನು ಪಾಲಿಸಿರುವ ಕುರಿತು ಅನುಸರಣಾ ವರದಿ ಸಲ್ಲಿಸಬೇಕು' ಎಂದು ಕೇಂದ್ರ ಸರ್ಕಾರಕ್ಕೆ ಪೀಠ ಇದೇ ವೇಳೆ ತಾಕೀತು ಮಾಡಿತು.

ರಾಜಧಾನಿಯಲ್ಲಿ ಲಸಿಕೆಗೆ ಹೆಚ್ಚಿದ ಹಾಹಾಕಾರ

ಒಂದನೇ ಪುಟದಿಂದ

ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆ, ಸಿ.ವಿ.ರಾಮನ್ ಆಸ್ಪತ್ರೆ, ಯಲಹಂಕದ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಾಗಲಗುಂಟೆ, ಹೆಬ್ಬಾಳ, ಚೋಳನಾಯಕನಹಳ್ಳಿ, ಉಲ್ಲಾಳ, ವಿದ್ಯಾಪೀಠ, ಆವಲಹಳ್ಳಿ, ಜೆ.ಸಿ. ರಸ್ತೆಯ ಪಟೇಲ್ ಎಂ.ಕೆಂಪಯ್ಯ ಗಿರಿಯಮ್ಮ ಆಸ್ಪತ್ರೆ, ಬ್ಯಾಟರಾಯನಪುರ– ಹೀಗೆ ನಗರದ ವಿವಿಧೆಡೆ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳ ಎದುರು ಯುವಕರು, ಮಧ್ಯವಯಸ್ಕರು ಹಾಗೂ ಹಿರಿಯ ಜೀವಗಳು ಸಾಲುಗಟ್ಟಿದ್ದು ಮಂಗಳವಾರವೂ ಕಂಡುಬಂತು.

ಪಿಪಿಇ ಕಿಟ್ ಧರಿಸಿ ಬಂದ ಯುವತಿ: ಕೆ.ಸಿ. ಜನರಲ್ ಆಸ್ಪತ್ರೆ ಎದುರು ಲಸಿಕೆಗಾಗಿ 200ಕ್ಕೂ ಅಧಿಕ ಮಂದಿ ಸೇರಿದ್ದರು. ಯುವತಿಯೊಬ್ಬರು ಪಿಪಿಇ ಕಿಟ್ ಧರಿಸಿ ಸಾಲಿನಲ್ಲಿ ನಿಂತಿದ್ದರು. ಕೆಲವರು ಮುಖಗವಸಿನ ಜೊತೆಗೆ ಫೇಸ್‌ಶೀಲ್ಡ್‌ಗಳನ್ನು ಹಾಕಿದ್ದರು. ಕೆಲವೆಡೆ 'ಕೋ ವಿನ್' ಹಾಗೂ 'ಆರೋಗ್ಯ ಸೇತು' ಆ್ಯಪ್‌ಗಳಲ್ಲಿ ಹೆಸರು ನೋಂದಾಯಿಸಿಕೊಂಡಿದ್ದವರೂ ಲಸಿಕೆ ಸಿಗದೆ ಬೇಸರದಿಂದ ಮನೆಗೆ ತೆರಳಿದರು.

'ಎರಡನೇ ಡೋಸ್ ಪಡೆಯುವವರಿಗಷ್ಟೇ ಇಂದು ಕೋವಿಶೀಲ್ಡ್ ಲಸಿಕೆ ನೀಡಲಾಗುತ್ತದೆ. 18 ರಿಂದ 45 ವರ್ಷದೊಳಗಿನ ಕೋವಿಡ್ ಮುಂಚೂಣಿ ಕಾರ್ಯಕರ್ತರು ಗುರುತಿನ ಚೀಟಿ ತೋರಿಸಿ ಲಸಿಕೆ ಪಡೆಯಬಹುದು. ಮೊದಲ ಡೋಸ್‌ಗಾಗಿ ಕೋ ವಿನ್ ಹಾಗೂ ಆರೋಗ್ಯ ಸೇತು ಆ್ಯಪ್ ಮೂಲಕ ಹೆಸರು ನೋಂದಣಿ ಮಾಡಿದವರಿಗೆ ಲಸಿಕೆ ನೀಡಲಾಗುತ್ತದೆ' ಎಂಬ ಫಲಕವನ್ನು ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ಹಾಕಲಾಗಿತ್ತು. ಹಾಗಿದ್ದರೂ ಸರದಿಯಲ್ಲಿ ಕಾಯುವವರ ಸಂಖ್ಯೆ ಕಡಿಮೆ ಇರಲಿಲ್ಲ.

ಚೋಳನಾಯಕನಹಳ್ಳಿಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು 'ಈ ದಿನ ಕೋವಿಶೀಲ್ಡ್‌ನ ಎರಡನೇ ಡೋಸ್ ಮಾತ್ರ ನೀಡಲಾಗುತ್ತದೆ' ಎಂಬ ಫಲಕ ನೇತು ಹಾಕಿದ್ದರೂ ಕೇಂದ್ರದ ಎದುರು ನೂರಾರು ಮಂದಿ ಸೇರಿದ್ದರು. 'ಲಸಿಕೆ ದಾಸ್ತಾನು ಇಲ್ಲ. ಬಂದಾಗ ತಿಳಿಸ್ತೀವಿ' ಎಂದು ಹೇಳಿ ವಾಪಸು ಕಳುಹಿಸಲಾಯಿತು.

ಇವತ್ತು ಲಸಿಕೆ ಹಾಕಿಸಿಕೊಳ್ಳುವಂತೆ ಮೊಬೈಲ್‌ಗೆ ಸಂದೇಶ ಬಂದಿದೆ. ಇವತ್ತೇ ಲಸಿಕೆ ಕೊಡಿ ಎಂದು ಕೆಲವರು ಪಟ್ಟು ಹಿಡಿದಿದ್ದರು. ಕೆಲ ಆರೋಗ್ಯ ಕೇಂದ್ರಗಳ ಎದುರು 'ಲಸಿಕೆ ದಾಸ್ತಾನು ಇಲ್ಲ. ಪೂರೈಕೆಯಾಗುವವರೆಗೂ ಲಸಿಕೆ ನೀಡಲಾಗುವುದಿಲ್ಲ' ಎಂಬ ಭಿತ್ತಿಪತ್ರಗಳನ್ನೂ ಅಂಟಿಸಲಾಗಿತ್ತು.

60–70 ವರ್ಷ ದಾಟಿದ ಕೆಲವರು ಲಸಿಕೆಗಾಗಿ 15 ದಿನಗಳಿಂದ ಅಲೆಯುತ್ತಿದ್ದಾರೆ. ಒಂದು ಆರೋಗ್ಯ ಕೇಂದ್ರದಿಂದ ಮತ್ತೊಂದಕ್ಕೆ ಎಡತಾಕುತ್ತಿದ್ದರೂ ಲಸಿಕೆ ಸಿಗುತ್ತಿಲ್ಲ ಎಂಬ ದೂರು ಸಾಮಾನ್ಯವಾಗಿದೆ.

'ಸುಮ್ಮನೇ ಆಸ್ಪತ್ರೆಗೆ ಅಲೆಸುತ್ತಿದ್ದಾರೆ': 'ಆರೋಗ್ಯ ಸಚಿವರು ಅಡ್ಡಗೋಡೆ ಮೇಲೆ ದೀಪ ಇಟ್ಟಹಾಗೆ ಮಾತನಾಡುತ್ತಾರೆ. ಮುಖ್ಯಮಂತ್ರಿಯವರು ಲಸಿಕೆ ಅಭಾವವಿಲ್ಲ. ಎಲ್ಲರಿಗೂ ಹಂತ ಹಂತವಾಗಿ ಕೊಡುತ್ತೇವೆ ಎನ್ನುತ್ತಿದ್ದಾರೆ. ಲಸಿಕೆ ಕೊರತೆ ಇದೆ ಎಂಬುದನ್ನು ಒಪ್ಪಿಕೊಳ್ಳಲು ಯಾರೂ ತಯಾರಿಲ್ಲ. 15 ದಿನ ಬಿಟ್ಟು ಕೊಡ್ತೀವಿ ಅಂದ್ರೆ ಮುಗೀತು. ನಾವು ಕೆಲಸ ಕಾರ್ಯಗಳನ್ನು ಬಿಟ್ಟು ಬೆಳಿಗ್ಗೆಯಿಂದಲೇ ಇಲ್ಲಿ ನಿಂತು ಕಾಯುವುದಾದರೂ ತಪ್ಪುತ್ತದೆ' ಎಂದು ಕೆ.ಸಿ.ಜನರಲ್ ಆಸ್ಪತ್ರೆ ಎದುರು ನಿಂತಿದ್ದ ವ್ಯಕ್ತಿಯೊಬ್ಬರು ಆಕ್ರೋಶ ವ್ಯಕ್ತಪಡಿಸಿದರು.

'ಸರ್ಕಾರ ಹುಡುಗಾಟಿಕೆ ಮಾಡುತ್ತಿದೆಯಾ. ಇಲ್ಲಿ ಇಷ್ಟು ಜನ ಇದ್ದಾರೆ. ಕೆಲವರು ಅಂತರ ಪಾಲಿಸುತ್ತಿಲ್ಲ. ವಯಸ್ಕರು ಸಾಲಿನಲ್ಲಿ ನಿಂತಿದ್ದಾರೆ. ಅವರಿಗೆ ಸೋಂಕು ತಗುಲಿದರೆ ಯಾರು ಹೊಣೆ' ಎಂದು ಪ್ರಶ್ನಿಸಿದರು.

ಕೋವಿಡ್: 'ನರೇಗಾ'ಕ್ಕೆ ಕುತ್ತು

ಒಂದನೇ ಪುಟದಿಂದ

ಹೆಚ್ಚಿದ ಸೋಂಕು: 'ಅನೇಕ ಗ್ರಾಮ ಪಂಚಾಯಿತಿಗಳು ಕೆರೆ ಹೂಳೆತ್ತುವುದು ಸೇರಿದಂತೆ ವಿವಿಧ ಕಾಮಗಾರಿ ಕೈಗೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ, ಕೆಲವೆಡೆ ಸಾಮೂಹಿಕವಾಗಿ ಕಾಮಗಾರಿ ಕೈಗೊಂಡ ವೇಳೆ ಕೊರೊನಾ ಸೋಂಕು ಹರಡಿದ ಮಾಹಿತಿ ಸಿಕ್ಕಿದೆ. ಸೋಂಕಿನ ಸರಪಳಿ ತುಂಡರಿಸಲು ಕಾಮಗಾರಿ ಸ್ಥಗಿತಕ್ಕೆ ನಿರ್ಧರಿಸಲಾಗಿದೆ' ಎಂದು ಅಧಿಕಾರಿ ತಿಳಿಸಿದರು.

'ಕೆಲಸ ಸ್ಥಳದಲ್ಲಿ ಮಾಸ್ಕ್ ಧರಿಸುವುದು, ಅಂತರ ಕಾಪಾಡುವುದು ಅಸಾಧ್ಯವಾಗಿತ್ತು. ಇದನ್ನು ಅರಿತು ಕೆಲವೆಡೆ ಸಾಮೂಹಿಕ ಕೆಲಸವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ರೋಗದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ' ಎಂದೂ ಹೇಳಿದರು.

'ನರೇಗಾ ಸ್ಥಗಿತ ಗಾಯಕ್ಕೆ ಉಪ್ಪು ಸವರಿದಂತೆ'

ಒಂದನೇ ಪುಟದಿಂದ

'ಗ್ರಾಮೀಣ ಜನರ ಆರೋಗ್ಯದ ದೃಷ್ಟಿಯಿಂದಲೇ ಸರ್ಕಾರ ಈ ತೀರ್ಮಾನ ಕೈಗೊಂಡಿದ್ದರೆ, ಎಲ್ಲ ಅಸಂಘಟಿತ ವಲಯದ ಕಾರ್ಮಿಕರಿಗೆ ಜೀವನ ನಡೆಸಲು ಆರ್ಥಿಕ ನೆರವು ನೀಡಿದ ನಂತರವಷ್ಟೆ ಈ ತೀರ್ಮಾನ ಜಾರಿಗೊಳಿಸಬೇಕು. ಸರ್ಕಾರ ಈ ವಿವೇಕಹೀನ ನಡವಳಿಕೆಯನ್ನು ತಿದ್ದಿಕೊಳ್ಳದಿದ್ದರೆ ಉಗ್ರ ಸ್ವರೂಪದ ಹೋರಾಟ ಕೈಗೆತ್ತಿಕೊಳ್ಳಬೇಕಾದೀತು' ಎಂದೂ ಎಚ್ಚರಿಕೆ ನೀಡಿದ್ದಾರೆ.

ಸರ್ಕಾರ ನಡೆಗೆ ರಾಯಚೂರಿನ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಯ ಅಭಯ್, ಕರ್ನಾಟಕ ಕೃಷಿ ಕೂಲಿ ಕಾರ್ಮಿಕರ ಸಂಘಟನೆಯ ನಿತ್ಯಾನಂದ ಸ್ವಾಮಿ, ಯಾದಗಿರಿಯ ಸ್ವಾತಂತ್ರ್ಯ ಹೋರಾಟಗಾರ ಸಂಗಪ್ಪ ಮಂಟೆ, ಕೊಪ್ಪಳದ ನೇಕಾರರ ಮುಖಂಡ, ಸಾಹಿತಿ ವಿಠ್ಠಪ್ಪ ಗೋರಂಟ್ಲಿ, ಸಾಮಾಜಿಕ ಕಾರ್ಯಕರ್ತರಾದ ಮಂಗಳೂರಿನ ವಿದ್ಯಾ ದಿನಕರ್, ತುಮಕೂರಿನ ಸಿ. ಯತಿರಾಜು (ಪರಿಸರ ತಜ್ಞ), ಬೆಳಗಾವಿಯ ಶಿವಾಜಿ ಕಾಗಣೇಕರ, ಶಾರದಾ ಗೋಪಾಲ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರಕ್ಕೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲಹೆ • ಲಸಿಕೆ ಉತ್ಪಾದನೆಗೆ ವೇಗ–ಅಭಿಮತ

ಇತರ ಕಂಪನಿಗಳಿಗೆ ಲಸಿಕೆ ಸೂತ್ರ ಹಂಚಿ

ಪ್ರಜಾವಾಣಿ ವಾರ್ತೆ


ಅರವಿಂದ ಕೇಜ್ರಿವಾಲ್

ನವದೆಹಲಿ: ಎರಡು ಕಂಪನಿಗಳು ಅಭಿವೃದ್ಧಿಪಡಿಸಿರುವ ಕೋವಿಡ್–19 ಲಸಿಕೆಯ ರಾಸಾಯನಿಕ ಸೂತ್ರವನ್ನು ಇತರ ಔಷಧ ಕಂಪನಿಗಳೊಂದಿಗೆ ಹಂಚಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಇದರಿಂದ ಲಸಿಕೆಯ ಉತ್ಪಾದನೆಗೆ ವೇಗ ನೀಡಲು ಸಾಧ್ಯವಾಗಲಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ದೆಹಲಿಯೂ ಸೇರಿದಂತೆ ದೇಶದ ಹಲವಾರು ರಾಜ್ಯಗಳಲ್ಲಿ ಕೋವಿಡ್–19 ಲಸಿಕೆಯ ಕೊರತೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಕೇಜ್ರಿವಾಲ್ ಈ ಸಲಹೆಯನ್ನು ಮುಂದಿಟ್ಟಿದ್ದಾರೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, 'ಅನೇಕ ರಾಜ್ಯಗಳಲ್ಲಿ ಲಸಿಕೆಯ ಕೊರತೆ ಕಂಡು ಬಂದಿದೆ. ಕೆಲವು ರಾಜ್ಯಗಳು 18–44 ವಯೋಮಾನದವರಿಗೆ ಲಸಿಕೆ ನೀಡುವ ಕಾರ್ಯಕ್ರಮವನ್ನೇ ಆರಂಭಿಸಿಲ್ಲ' ಎಂದೂ ಹೇಳಿದ್ದಾರೆ.

'ಎಲ್ಲರಿಗೂ ಲಸಿಕೆ ನೀಡುವ ವಿಷಯದಲ್ಲಿ ದೇಶವು ದೊಡ್ಡ ಸವಾಲನ್ನೇ ಎದುರಿಸುತ್ತಿದೆ. ಹೀಗಾಗಿ ಲಸಿಕೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ನೀತಿಯೊಂದನ್ನು ರೂಪಿಸುವ ಅಗತ್ಯ ಇದೆ' ಎಂದು ಅವರು ಪ್ರತಿಪಾದಿಸಿದ್ದಾರೆ.

ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕೋವಿಶೀಲ್ಡ್ ಲಸಿಕೆಯನ್ನು, ಭಾರತ್ ಬಯೋಟೆಕ್ ಕಂಪನಿ ಕೋವ್ಯಾಕ್ಸಿನ್ ಉತ್ಪಾದಿಸುತ್ತಿವೆ. ಈ ಎರಡೂ ಕಂಪನಿಗಳು ತಿಂಗಳಿಗೆ 6–7 ಕೋಟಿ ಡೋಸ್ ಉತ್ಪಾದಿಸುತ್ತಿವೆ. ಇದೇ ಗತಿಯಲ್ಲಿ ಸಾಗಿದರೆ, ದೇಶದ ಎಲ್ಲರಿಗೂ ಲಸಿಕೆ ನೀಡಲು ಕನಿಷ್ಠ ಎರಡು ವರ್ಷಗಳಾದರೂ ಬೇಕಾಗುತ್ತದೆ' ಎಂದು ಹೇಳಿದ್ದಾರೆ.

'ಸಂಕಷ್ಟದ ಈ ಸಮಯದಲ್ಲಿ, ಲಸಿಕೆಯ ರಾಸಾಯನಿಕ ಸೂತ್ರವನ್ನು ಇತರ ಕಂಪನಿಗಳೊಂದಿಗೆ ಹಂಚಿಕೊಳ್ಳುವಂತೆ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಸೂತ್ರವನ್ನು ಹಂಚಿಕೊಳ್ಳುವ ಈ ಎರಡು ಕಂಪನಿಗಳಿಗೆ ಸೂಕ್ತ ಗೌರವಧನ ನೀಡುವ ವ್ಯವಸ್ಥೆಯೂ ಆಗಬೇಕು' ಎಂದರು.


ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನ ಮೋತಿಲಾಲ್ ನೆಹರು ಸ್ಮಾರಕ ವೈದ್ಯಕೀಯ ಕಾಲೇಜಿನಲ್ಲಿ ಮಂಗಳವಾರ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವ ಸಂದರ್ಭದಲ್ಲಿ ಮಹಿಳೆಯೊಬ್ಬರು ಸೆಲ್ಫಿ ತೆಗೆದುಕೊಂಡರು —ಪಿಟಿಐ ಚಿತ್ರ

12 ವರ್ಷ ಮೇಲ್ಪಟ್ಟವರಿಗೂ ಫೈಜರ್ ಲಸಿಕೆ: ತುರ್ತು ಬಳಕೆಗೆ ಅಮೆರಿಕ ಅನುಮತಿ

ವಾಷಿಂಗ್ಟನ್ (ಎಎಫ್‌ಪಿ) : 12 ವರ್ಷ ಮೇಲ್ಪಟ್ಟವರಿಗೆ ಫೈಜರ್–ಬಯೊಎನ್‌ಟೆಕ್ ಲಸಿಕೆಯ ತುರ್ತು ಬಳಕೆಗೆ ಅಮೆರಿಕ ಅನುಮತಿ ನೀಡಿದೆ.

12–15 ವರ್ಷ ವಯಸ್ಸಿನವರಿಗೂ ಕೋವಿಡ್ ಲಸಿಕೆ ನೀಡಲು ಅನುಮತಿ ನೀಡುವಂತೆ ಫೈಜರ್–ಬಯೊಎನ್‌ಟೆಕ್ ಅಮೆರಿಕ ಸರ್ಕಾರಕ್ಕೆ ಕಳೆದ ವಾರ ಮನವಿ ಸಲ್ಲಿಸಿತ್ತು.

ಲಸಿಕೆಯ ತುರ್ತು ಬಳಕೆಗೆ ಎಫ್‌ಡಿಎ (ಆಹಾರ ಮತ್ತು ಔಷಧ ನಿಯಂತ್ರಣ ಪ್ರಾಧಿಕಾರ) ಅನುಮತಿ ನೀಡಿದೆ. ಇದಕ್ಕಾಗಿ ಲಸಿಕೆ ಬಳಕೆಯ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಸದ್ಯ ಫೈಜರ್–ಬಯೊಎನ್‌ಟೆಕ್ ಕೋವಿಡ್ ಲಸಿಕೆಯನ್ನು 16 ವರ್ಷ ಮೇಲ್ಪಟ್ಟವರಿಗೆ ನೀಡಲು ಅಮೆರಿಕದಲ್ಲಿ ಅನುಮತಿ ಇದೆ.

ಮಹಾರಾಷ್ಟ್ರ: 45 ವರ್ಷ ಮೇಲ್ಪಟ್ಟವರಿಗೆ ಲಸಿಕೆಗೆ ಆದ್ಯತೆ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿಯೂ ಕೋವಿಡ್–19 ಲಸಿಕೆಯ ಕೊರತೆ ಕಂಡು ಬಂದಿದೆ. ಹೀಗಾಗಿ, 18–44 ವರ್ಷ ವಯೋಮಾನದವರಿಗೆ ನೀಡುವ ಉದ್ದೇಶದಿಂದ ತೆಗೆದಿರಿಸಿದ್ದ ಕೋವ್ಯಾಕ್ಸಿನ್ ಲಸಿಕೆಯ 3 ಲಕ್ಷ ಡೋಸ್‌ಗಳನ್ನು 45 ವರ್ಷ ಮೇಲ್ಪಟ್ಟವರಿಗೆ ನೀಡಲು ಮಹಾರಾಷ್ಟ್ರ ಸರ್ಕಾರ ಮಂಗಳವಾರ ನಿರ್ಧರಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ರಾಜೇಶ್ ಟೋಪೆ, '45 ವರ್ಷ ಮೇಲ್ಪಟ್ಟ ವಯೋಮಾನದ 5 ಲಕ್ಷಕ್ಕೂ ಹೆಚ್ಚು ಜನರಿಗೆ ಲಸಿಕೆಯ ಎರಡನೇ ಡೋಸ್ ನೀಡಬೇಕಿದೆ' ಎಂದರು.

'ನಿಗದಿತ ಅವಧಿಯೊಳಗಾಗಿ ಎರಡನೇ ಡೋಸ್ ನೀಡದೇ ಇದ್ದರೆ, ಲಸಿಕೆ ಪರಿಣಾಮಕಾರಿಯಾಗದು. ಇದು ಪುನಃ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ಎಡೆ ಮಾಡುತ್ತದೆ. ಇಂಥ ಸಂಕಷ್ಟ ಉದ್ಭವಿಸುವುದನ್ನು ತಡೆಯಲು 18–44 ವಯೋಮಾನದವರಿಗೆ ನೀಡಲು ತೆಗೆದಿಸಿರುವ ಕೋವ್ಯಾಕ್ಸಿನ್ ಲಸಿಕೆಯನ್ನು 45 ವರ್ಷ ಮೇಲ್ಪಟ್ಟವರಿಗೆ ನೀಡಲು ನಿರ್ಧರಿಸಲಾಗಿದೆ' ಎಂದರು.

'45 ವರ್ಷ ಮೇಲ್ಪಟ್ಟವರಿಗೆ ಎರಡನೇ ಡೋಸ್ ನೀಡಲು ಸರ್ಕಾರದ ಬಳಿ ಕೋವ್ಯಾಕ್ಸಿನ್‌ನ 35,000 ವಯಲ್‌ಗಳು ಮಾತ್ರ ಇವೆ' ಎಂದೂ ಟೋಪೆ ಹೇಳಿದರು.

'ರಾಜ್ಯಗಳಿಗೆ ಹೆಚ್ಚುವರಿ 7 ಲಕ್ಷ ಡೋಸ್'

ನವದೆಹಲಿ (ಪಿಟಿಐ): ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಬಳಿ ಸದ್ಯ ಕೋವಿಡ್–19 ಲಸಿಕೆಯ 90 ಲಕ್ಷಕ್ಕೂ ಅಧಿಕ ಡೋಸ್‌ಗಳು ಲಭ್ಯ ಇವೆ. ಇನ್ನು, ಮೂರು ದಿನಗಳ ಒಳಗಾಗಿ ಇವುಗಳಿಗೆ ಹೆಚ್ಚುವರಿಯಾಗಿ 7 ಲಕ್ಷ ಡೋಸ್‌ಗಳನ್ನು ಒದಗಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಂಗಳವಾರ ಹೇಳಿದೆ.

ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಈ ವರೆಗೆ ಲಸಿಕೆಯ 18 ಕೋಟಿಗೂ ಅಧಿಕ ಡೋಸ್‌ಗಳನ್ನು ಉಚಿತವಾಗಿ ನೀಡಿದೆ. ಈ ಪೈಕಿ, ಒಟ್ಟು 17,09,71,429 ಡೋಸ್‌ಗಳನ್ನು ಬಳಕೆ ಮಾಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

'ಕೆಲವು ರಾಜ್ಯಗಳು ಲಸಿಕೆಯ ಕೊರತೆ ಬಗ್ಗೆ ಹೇಳಿಕೊಂಡಿವೆ. ಅವುಗಳಿಗೆ ಪೂರೈಕೆಯಾದ ಲಸಿಕೆಯ ಪ್ರಮಾಣಕ್ಕಿಂತಲೂ ಬಳಕೆಯೇ ಜಾಸ್ತಿಯಾಗಿದೆ ಎಂಬ ಮಾಹಿತಿಯನ್ನು ನೀಡಿವೆ. ಆದರೆ, ಈ ರಾಜ್ಯಗಳು ಸಶಸ್ತ್ರ ಪಡೆಗಳಿಗೆ ತಾವು ಪೂರೈಕೆ ಮಾಡಿರುವ ಲಸಿಕೆಯ ಪ್ರಮಾಣವನ್ನು ಪರಿಗಣನೆಗೆ ತೆಗೆದುಕೊಳ್ಳದೇ ಈ ಅಂಕಿ–ಅಂಶ ನೀಡಿವೆ' ಎಂದು ಸಚಿವಾಲಯ ಹೇಳಿದೆ.

ಹಿಂದೂವಿನ ಅಂತ್ಯಸಂಸ್ಕಾರ ಮಾಡಿದ ಮುಸ್ಲಿಂ ಮಹಿಳೆ

ಮುಂಬೈ (ಪಿಟಿಐ): ಕೋವಿಡ್–19 ಸೋಂಕಿನಿಂದ ಮೃತರಾದ ಹಿಂದೂ ವ್ಯಕ್ತಿಯೊಬ್ಬರ ಅಂತ್ಯಸಂಸ್ಕಾರವನ್ನು ಮುಸ್ಲಿಂ ಮಹಿಳೆಯೊಬ್ಬರು ನೆರವೇರಿಸಿದ ಘಟನೆ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ನಡೆದಿದೆ.

ಕೊಲ್ಹಾಪುರದ ಅಸ್ಟರ್ ಅಧರ್ ಆಸ್ಪತ್ರೆಯಲ್ಲಿ ಹಿರಿಯ ವ್ಯವಸ್ಥಾಪಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಯೇಷಾ ರೌತ್, ಹಿಂದೂ ವ್ಯಕ್ತಿಯ ಅಂತಿಮ ವಿಧಿವಿಧಾನ ನೆರವೇರಿಸಿದ ಮಹಿಳೆ.

ಕೋವಿಡ್ ಸೋಂಕಿಗೊಳಗಾಗಿದ್ದ ಸುಧಾಕರ್ ವೇದಕ್ (81) ಅವರು ಮೇ 9ರಂದು ಸಾವಿಗೀಡಾಗಿದ್ದರು. ವೇದಕ್ ಅವರ ಕುಟುಂಬದ ಸದಸ್ಯರೂ ಕೋವಿಡ್ ಪೀಡಿತರಾಗಿದ್ದರಿಂದ ಅವರ ಅಂತ್ಯಸಂಸ್ಕಾರದ ಅಂತಿಮ ವಿಧಿ–ವಿಧಾನದ ಸಂದರ್ಭದಲ್ಲಿ ಯಾರೂ ಪಾಲ್ಗೊಳ್ಳಲು ಆಗಲಿಲ್ಲ. ಆಗ ಸುಧಾಕರ್ ವೇದಕ್ ಅವರ ಮಗಳು ಡಾ.ಹರ್ಷಲಾ ವೇದಕ್ ಅವರ ಮನವಿಯ ಮೇರೆಗೆ ಆಯೇಷಾ ರೌತ್ ಅವರು ಅಂತ್ಯಸಂಸ್ಕಾರದ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿದರು.

'ಅಂತಿಮ ವಿಧಿ–ವಿಧಾನ ನೆರವೇರಿಸುವಾಗ ನಾನು ಮುಸ್ಲಿಂ, ಹಿಂದೂಗಳ ವಿಧಿವಿಧಾನ ಮಾಡುತ್ತಿದ್ದೇನೆ ಎಂದು ಒಂದು ಸೆಕೆಂಡ್ ಕೂಡಾ ಯೋಚಿಸಲಿಲ್ಲ. ನಾನು ವೇದಕ್ ಅವರ ಕುಟುಂಬಕ್ಕೆ ಸ್ವಲ್ಪ ಸಮಾಧಾನ ನೀಡಬಲ್ಲೆ ಎಂದಷ್ಟೇ ಯೋಚಿಸಿದೆ' ಎಂದು ಆಯೇಷಾ ರೌತ್ ತಿಳಿಸಿದ್ದಾರೆ.

ಸೇವೆಯಿಂದ ಸಚಿನ್ ವಾಜೆ ವಜಾ

ಪ್ರಜಾವಾಣಿ ವಾರ್ತೆ

ಮುಂಬೈ: ವಿವಾದಿತ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ಸೇವೆಯಿಂದ ವಜಾಗೊಳಿಸಿ ಮುಂಬೈ ಪೊಲೀಸ್ ಕಮಿಷನರ್ ಹೇಮಂತ್ ನಾಗರಾಳೆ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಅವರು ಸಿಐಡಿಯ ಕ್ರೈಂ ಬ್ರ್ಯಾಂಚ್‌ಗೆ ಹೊಂದಿಕೊಂಡಿರುವ ಕ್ರೈಂ ಇಂಟೆಲಿಜೆನ್ಸ್ ಘಟಕದಲ್ಲಿ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದರು.


ಸಚಿನ್ ವಾಜೆ

ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕಗಳು ತುಂಬಿದ್ದ ವಾಹನ ನಿಲ್ಲಿಸಿದ ಪ್ರಕರಣ ಹಾಗೂ ಈ ವಾಹನದ ಮಾಲೀಕ ಮನಸುಖ್ ಹಿರೇನ್ ಹತ್ಯೆ ಪ್ರಕರಣದಲ್ಲಿ ವಾಜೆ ಪ್ರಮುಖ ಆರೋಪಿಯಾಗಿದ್ದು, ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ನಿಧನ ವಾರ್ತೆ

ಕಮ್ಯುನಿಸ್ಟ್ ನಾಯಕಿ ಕೆ.ಆರ್. ಗೌರಿ ಅಮ್ಮ



ತಿರುವನಂತಪುರ (ಪಿಟಿಐ): ಕೇರಳದ ಕಮ್ಯುನಿಸ್ಟ್ ನಾಯಕಿ ಕೆ.ಆರ್. ಗೌರಿ ಅಮ್ಮ (102) ಅವರು ಆಸ್ಪತ್ರೆಯಲ್ಲಿ ಮಂಗಳವಾರ ಬೆಳಿಗ್ಗೆ 7ಗಂಟೆಗೆ ನಿಧನರಾದರು.

ಕೇರಳದ ಪ್ರಭಾವಿ ನಾಯಕರಲ್ಲಿ ಒಬ್ಬರಾದ ಗೌರಿ ಅವರನ್ನು ಜನರು ಪ್ರೀತಿಯಿಂದ 'ಗೌರಿ ಅಮ್ಮ' ಎಂದೇ ಕರೆಯುತ್ತಿದ್ದರು. ಇ.ಎಂ.ಎಸ್. ನಂಬೂದಿರಿಪಾಡ್ ನೇತೃತ್ವದ ಕೇರಳದ ಪ್ರಥಮ ಕಮ್ಯುನಿಸ್ಟ್ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದ ಗೌರಿ ಅವರು, ಕ್ರಾಂತಿಕಾರಿ ಕೃಷಿಕ ಸಂಬಂಧ ಮಸೂದೆ ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಸಂಪುಟ ಸಹೋದ್ಯೋಗಿ ಟಿ.ವಿ. ಥಾಮಸ್ ಅವರನ್ನು ವಿವಾಹವಾಗಿದ್ದರು. 1964ರಲ್ಲಿ ಕಮ್ಯುನಿಸ್ಟ್ ಪಕ್ಷ ವಿಭಜನೆಗೊಂಡ ಬಳಿಕ ಗೌರಿ ಅವರು ಸಿಪಿಎಂ ಸೇರಿದ್ದರು.

1994ರಲ್ಲಿ ಸಿಪಿಐ (ಎಂ) ಪಕ್ಷದಿಂದ ಉಚ್ಚಾಟನೆಗೊಂಡ ಗೌರಿ ಅವರು ಜನತಿಪತಿಯ ಸಂರಕ್ಷಣ ಸಮಿತಿ (ಜೆಎಸ್‌ಎಸ್) ಪಕ್ಷವನ್ನು ಸ್ಥಾಪಿಸಿದ್ದರು. ಇದು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಒಂದು ಘಟಕವಾಗಿದೆ.

ಕೋವಿಡ್ ಮಾರ್ಗಸೂಚಿಗಳ ಅನುಸರಿಸಿ, ಗೌರಿ ಅವರ ಮೃತ ದೇಹವನ್ನು ಇಲ್ಲಿನ ಅಯ್ಯನ್‌ಕಾಳಿ ಸಭಾಂಗಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಅವರ ತವರು ಜಿಲ್ಲೆ ಅಲಪ್ಪುಳದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಸಂಕ್ಷಿಪ್ತ ಸುದ್ದಿ

'ಆಮ್ಲಜನಕ ಸಾಗಣೆ: 500 ಚಾಲಕರಿಗೆ ತರಬೇತಿ'

ನವದೆಹಲಿ (ಪಿಟಿಐ): ದೇಶದ ವಿವಿಧ ಭಾಗಗಳಿಗೆ ತ್ವರಿತವಾಗಿ ಆಮ್ಲಜನಕವನ್ನು ಸಾಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ಗೃಹ ಸಚಿವಾಲಯ ಮಂಗಳವಾರ ಹೇಳಿದೆ.

'ಖಾಲಿಯಾಗಿರುವ ಟ್ಯಾಂಕರ್‌ಗಳನ್ನು ವಿಮಾನಗಳ ಮೂಲಕ ಒಯ್ದು, ಮರುಭರ್ತಿ ಘಟಕಗಳಿಗೆ ತಲುಪಿಸುವುದು, 500 ಚಾಲಕರಿಗೆ ತರಬೇತಿ ನೀಡುವುದು ಈ ಕ್ರಮಗಳಲ್ಲಿ ಸೇರಿವೆ' ಎಂದು ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಪೀಯೂಷ್ ಗೋಯಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಭವಿಷ್ಯದ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ವಿದೇಶಗಳಿಂದ 5,805 ಟನ್ ದ್ರವೀಕೃತ ವೈದ್ಯಕೀಯ ಆಮ್ಲಜನಕ ಆಮದು ಮಾಡಿಕೊಳ್ಳಲಾಗುತ್ತಿದೆ' ಎಂದರು.

ರಷ್ಯಾ ಶಾಲೆಯಲ್ಲಿ ಗುಂಡಿನ ದಾಳಿ: 9 ಮಂದಿ ಸಾವು

ಮಾಸ್ಕೊ (ಎಎಫ್‌ಪಿ): ' ರಷ್ಯಾದ ಕಜಾನ್ ನಗರದ ಹೈಸ್ಕೂಲ್‌ವೊಂದರಲ್ಲಿ ಮಂಗಳವಾರ ನಡೆದ ಗುಂಡಿನ ದಾಳಿಯಲ್ಲಿ 7 ವಿದ್ಯಾರ್ಥಿಗಳು, ಒಬ್ಬ ಶಿಕ್ಷಕ ಹಾಗೂ ಶಾಲಾ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ. ಇತರ 21 ಮಂದಿ ಗಾಯಗೊಂಡಿದ್ದಾರೆ.

ಕಜಾನ್ ನಗರ ಟಾಟರ್ಸ್ತಾನ ಪ್ರಾಂತ್ಯದ ರಾಜಧಾನಿ. 'ಇಬ್ಬರು ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದು, ಈ ಪೈಕಿ 19 ವರ್ಷದ ದಾಳಿಕೋರನೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ' ಎಂದು ಪ್ರಾಂತ್ಯದ ಗವರ್ನರ್ ರುಸ್ತಂ ಮಿನ್ನಿಖನೋವ್ ಹೇಳಿದ್ದಾರೆ.

ಮೃತರ ಗೌರವಾರ್ಥ ನಗರದ ಎಲ್ಲಾ ಶಾಲೆಗಳಿಗೆ ಬುಧವಾರ ರಜೆ ಘೋಷಿಸಲಾಗಿದೆ. ಘಟನೆ ನಂತರ ಎಲ್ಲಾ ಶಾಲೆಗಳಲ್ಲಿ ಬೋಧನೆಯನ್ನು ಸ್ಥಗಿತಗೊಳಿಸಲಾಯಿತು. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಘಟನೆ ಕುರಿತು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

'ಶಾಲೆ ಮೇಲೆ ದಾಳಿ ಮಾಡಿರುವ ವ್ಯಕ್ತಿ ಅದೇ ಶಾಲೆಯ ಹಳೆಯ ವಿದ್ಯಾರ್ಥಿ. ಅಪಾರ ಸಂಖ್ಯೆಯಲ್ಲಿ ಜನರನ್ನು ಈ ದಿನ ಹತ್ಯೆ ಮಾಡುವುದಾಗಿ ಟೆಲಿಗ್ರಾಂ ಖಾತೆಯಲ್ಲಿ ಬರೆದುಕೊಂಡಿದ್ದ' ಎಂದು ಮಾಧ್ಯಮಗಳು ವರದಿ ಮಾಡಿವೆ.

ಉತ್ತರಪ್ರದೇಶ: ಗಂಗೆಯಲ್ಲೂ ತೇಲಿಬಂದ ಹೆಣಗಳು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಜತೆ ಗಡಿ-ಹಂಚಿಕೊಂಡಿರುವ ಬಿಹಾರದ ಬಕ್ಸರ್ ಜಿಲ್ಲೆಯಲ್ಲಿ ಗಂಗಾನದಿಯಲ್ಲಿ ಹೆಣಗಳು ತೇಲಿಬಂದ ಮರುದಿನವೇ, ಉತ್ತರ ಪ್ರದೇಶದ ಗಾಜಿಪುರದಲ್ಲೂ ನದಿಯಲ್ಲಿ ಹೆಣಗಳು ತೇಲಿಬಂದಿವೆ. ಗಾಜಿಪುರ ಜಿಲ್ಲೆಯ ಬಲಿಯಾ ಬಳಿ ಮಂಗಳವಾರ ಹೆಣಗಳು ಕಾಣಿಸಿಕೊಂಡವು.

ಜಿಲ್ಲೆಯ ಬುರಾಲಿ, ನಾರ್ವಾ ಮತ್ತು ಬುಲಕಿ ದಾಸ್ ಘಾಟ್‌ಗಳಲ್ಲಿ ಹೆಣಗಳು ತೇಲಿಬಂದಿವೆ. ಹೆಣಗಳನ್ನು ಸ್ಥಳೀಯಾಡಳಿತ ಸಿಬ್ಬಂದಿ ಕಲೆಹಾಕಿ, ನಂತರ ಅಂತ್ಯಸಂಸ್ಕಾರ ನಡೆಸಿದ್ದಾರೆ. ಈ ಹೆಣಗಳು ಎಲ್ಲಿಂದ ತೇಲಿ ಬರುತ್ತಿವೆ ಎಂಬುದರ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ಗಾಜಿಪುರದ ಗಹ್ಮಾರ್ ಗಡಿಗ್ರಾಮವಾಗಿದೆ. ಬಕ್ಸರ್‌ನಲ್ಲಿ ಪತ್ತೆಯಾದ ಹೆಣಗಳು ಉತ್ತರ ಪ್ರದೇಶದಿಂದ ತೇಲಿಬಂದಿರಬಹುದು ಎಂದು ಶಂಕಿಸಲಾಗಿದೆ.

'ಹೆಣಗಳನ್ನು ಸುಡಲು ಅಗತ್ಯವಿರುವ ಕಟ್ಟಿಗೆಯ ಕೊರತೆ ಉಂಟಾಗಿದೆ. ಹೀಗಾಗಿ ಹೆಣಗಳನ್ನು ನದಿಗೆ ಬಿಸಾಡಲಾಗಿದೆ. ಕಟ್ಟಿಗೆಯ ಬೆಲೆ ವಿಪರೀತ ಏರಿಕೆಯಾಗಿದೆ. ಹೀಗಾಗಿ ಯಾರೂ ಹೆಣಗಳನ್ನು ಸುಡುತ್ತಿಲ್ಲ' ಎಂದು ಕಾನ್ಪುರದ ನಿವಾಸಿಯೊಬ್ಬರು ಹೇಳಿದ್ದಾರೆ.


ಬಿಹಾರದ ಬಕ್ಸರ್‌ನಲ್ಲಿ ಸೋಮವಾರ ನದಿದಡಕ್ಕೆ ಬಂದುಬಿದ್ದಿದ್ದ ಹೆಣಗಳು ಪಿಟಿಐ ಚಿತ್ರ

ಕಟ್ಟಿಗೆ ಇಲ್ಲದ ಕಾರಣ ಉತ್ತರ ಪ್ರದೇಶದ ಉನ್ನಾವ್ ಜಿಲ್ಲೆಯಲ್ಲಿ ನದಿದಂಡೆಯಲ್ಲೇ ಹೆಣಗಳನ್ನು ಹೂಳಲಾಗಿದೆ. ತರಾತುರಿಯಲ್ಲಿ ಕೇವಲ 3-4 ಅಡಿ ಆಳದಲ್ಲಿ ಹೆಣಗಳನ್ನು ಹೂಳಲಾಗಿದೆ. ನದಿ ನೀರಿನ ಮಟ್ಟ ಏರಿಕೆಯಾದ ಕಾರಣ, ಆ ಹೆಣಗಳು ಕೊಚ್ಚಿ ಬಂದಿರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸೇತುವೆ ಮೇಲೆ ನಿಂತಿದ್ದ ಆಂಬುಲೆನ್ಸ್ ಒಂದರಿಂದ ಹೆಣಗಳನ್ನು ನದಿಗೆ ಎಸೆಯುತ್ತಿರುವ ದೃಶ್ಯವಿರುವ ವಿಡಿಯೊ ಮಂಗಳವಾರ ವೈರಲ್ ಆಗಿದೆ. ಇದು ಉತ್ತರ ಪ್ರದೇಶದ್ದೇ ಆಂಬುಲೆನ್ಸ್ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಲಾಗಿದೆ. ಈ ವಿಡಿಯೊವನ್ನು ಆಧರಿಸಿ ಎನ್‌ಡಿಟಿವಿ ವರದಿಯನ್ನು ಸಹ ಪ್ರಕಟಿಸಿದೆ.

71 ಹೆಣಗಳು: ಬಿಹಾರದ ಬಕ್ಸರ್‌ನಲ್ಲಿ ಸೋಮವಾರ 15ಕ್ಕೂ ಹೆಚ್ಚು ಹೆಣಗಳು ತೇಲಿಬಂದಿದ್ದವು. ಆ ಹೆಣಗಳ ಮರಣೋತ್ತರ ಪರಿಕ್ಷೆ ನಡೆಸಿ, ಅಂತ್ಯಸಂಸ್ಕಾರ ಮಾಡಲಾಗಿದೆ. ಆದರೆ ಮಂಗಳವಾರ ಮತ್ತೆ 71 ಹೆಣಗಳು ಈ ರೀತಿ ತೇಲಿಬಂದಿವೆ. ಈ ಹೆಣಗಳು ಎಲ್ಲಿಂದ ತೇಲಿ ಬರುತ್ತಿವೆ ಎಂಬುದನ್ನು ಪತ್ತೆ ಮಾಡಲು, ಬಕ್ಸರ್ ಜಿಲ್ಲಾಧಿಕಾರಿ ತನಿಖೆಗೆ ಆದೇಶಿಸಿದ್ದಾರೆ.

ಅನಿಲ್ ದೇಶಮುಖ್ ವಿರುದ್ಧ ಇ.ಡಿ ಪ್ರಕರಣ ದಾಖಲು

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಜಾರಿ ನಿರ್ದೇಶನಾಲಯ(ಇಡಿ) ಅಕ್ರಮ ಹಣ ವರ್ಗಾವಣೆ ವಿರೋಧಿ ಕಾನೂನಿನಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದೆ ಎಂದು ಮಂಗಳವಾರ ಅಧಿಕೃತ ಮೂಲಗಳು ತಿಳಿಸಿವೆ.

ಅನಿಲ್ ದೇಶಮುಖ್ ವಿರುದ್ಧ ಇತ್ತೀಚೆಗೆ ಕೇಂದ್ರ ತನಿಖಾ ಸಂಸ್ಥೆ (ಸಿಬಿಐ) ದಾಖಲಿಸಿದ ಎಫ್‌ಐಆರ್ ಅಧ್ಯಯನದ ನಂತರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಈಗ ಪ್ರಕರಣದ ಇತರೆ ಆರೋಪಿಗಳನ್ನು ಹೊರತುಪಡಿಸಿ ಅನಿಲ್ ಅವರಿಗೆ ಸಮನ್ಸ್ ನೀಡುವ ಸಾಧ್ಯತೆ ಇದೆ. ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್ ವೀರ್ ಸಿಂಗ್ ಅವರು ಅನಿಲ್ ದೇಶಮುಖ್ ವಿರುದ್ಧ ಲಂಚದ ಆರೋಪ ಹೊರಿಸಿದ್ದರು. ಇದನ್ನು ಪರಿಶೀಲಿಸುವಂತೆ ಬಾಂಬೆ ಹೈಕೋರ್ಟ್ ಆದೇಶ ನೀಡಿತ್ತು. ಈ ಆದೇಶದ ಅನ್ವಯ ಸಿಬಿಐ ಪ್ರಾಥಮಿಕ ವಿಚಾರಣೆ ನಡೆಸಿತು.

ಪಾಸಿಟಿವ್ ದರ: ರಾಜ್ಯದ 26 ಜಿಲ್ಲೆಗಳಲ್ಲಿ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಒಟ್ಟು 734 ಜಿಲ್ಲೆಗಳ ಪೈಕಿ 310 ಜಿಲ್ಲೆಗಳಲ್ಲಿ ಕೋವಿಡ್ ದೃಢಪಡುವಿಕೆ ದರವು (ಪಾಸಿಟಿವ್ ದರ) ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು ಇದೆ. ಈ ಜಿಲ್ಲೆಗಳಲ್ಲಿ ಕರ್ನಾಟಕದ 26 ಜಿಲ್ಲೆಗಳು ಸೇರಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಪಾಸಿಟಿವ್ ದರದಲ್ಲಿ ಉತ್ತರ ಕನ್ನಡ ಮೊದಲ ಸ್ಥಾನದಲ್ಲಿದೆ. ಇಲ್ಲಿನ ಪಾಸಿಟಿವ್ ಪ್ರಮಾಣ ಶೇ 45.7. ನಂತರದ ಸ್ಥಾನಗಳಲ್ಲಿ ಬಳ್ಳಾರಿ (ಶೇ 44.3), ಹಾಸನ (ಶೇ 42.1) ಮತ್ತು ಮೈಸೂರು (ಶೇ 41.3) ಇವೆ. ಪಾಸಿಟಿವ್ ಪ್ರಮಾಣದ ರಾಷ್ಟ್ರೀಯ ಸರಾಸರಿ ಶೇ 21ರಷ್ಟಿದೆ. ಪಾಸಿಟಿವ್ ದರ ಎಂದರೆ ಪರೀಕ್ಷೆ ಮಾಡಿಸಿಕೊಳ್ಳುವವರಲ್ಲಿ ಕೋವಿಡ್ ದೃಢಪಡುವವರ ಪ್ರಮಾಣ.

ಕರ್ನಾಟಕದಲ್ಲಿ ಅತಿ ಹೆಚ್ಚು ಪ್ರಕರಣಗಳು ವರದಿಯಾಗುತ್ತಿರುವ ಬೆಂಗಳೂರು ನಗರ ಜಿಲ್ಲೆಯಲ್ಲಿ ಪಾಸಿಟಿವ್ ದರವು ಶೇ 34.7ರಷ್ಟು ಇದೆ.


ದೇಶದ ಒಟ್ಟು 533 ಜಿಲ್ಲೆಗಳಲ್ಲಿ ಕೋವಿಡ್ ಪಾಸಿಟಿವ್ ದರವು ಶೇ 10ಕ್ಕಿಂತ ಹೆಚ್ಚು ಇದೆ. ಇವುಗಳಲ್ಲಿ ಮಧ್ಯ ಪ್ರದೇಶದ 45 ಮತ್ತು ಮಹಾರಾಷ್ಟ್ರದ 36 ಜಿಲ್ಲೆಗಳು ಸೇರಿವೆ.

ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸಿ, ಅಗೋಚರವಾಗಿರುವ ಸೋಂಕುಗಳನ್ನು ಕೂಡ ಪತ್ತೆ ಮಾಡಬೇಕು. ಅದಕ್ಕಾಗಿ ನಗರಗಳು, ಪಟ್ಟಣಗಳು, ಗ್ರಾಮಗಳಲ್ಲಿರುವ ಸರ್ಕಾರಿ ಮತ್ತು ಖಾಸಗಿ ಸ್ವಾಮ್ಯದ ಎಲ್ಲ ಆಸ್ಪತ್ರೆಗಳಲ್ಲಿಯೂ ಪರೀಕ್ಷಾ ಸೌಲಭ್ಯ ಒದಗಿಸಬೇಕು. ಪರೀಕ್ಷಾ ಸೌಲಭ್ಯ ಒದಗಿಸಲು ಮಾನ್ಯತೆಯ ಅಗತ್ಯ ಇಲ್ಲ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಹೇಳಿದೆ.

ಪ್ರತಿ ದಿನ 16 ಲಕ್ಷ ಆರ್‌ಟಿಪಿಸಿಆರ್ ಮತ್ತು 17 ಲಕ್ಷ ಆರ್‌ಎಟಿ ಪರೀಕ್ಷೆ ನಡೆಸುವ ಸಾಮರ್ಥ್ಯ ದೇಶಕ್ಕೆ ಇದೆ ಎಂದು ಐಸಿಎಂಆರ್ ಪ್ರಧಾನ ನಿರ್ದೇಶಕ ಬಲರಾಂ ಭಾರ್ಗವ ಹೇಳಿದ್ದಾರೆ. ದಿನಕ್ಕೆ 33 ಲಕ್ಷ ಪರೀಕ್ಷೆಯ ಸಾಮರ್ಥ್ಯ ಇದ್ದರೂ ಒಂದು ದಿನವೂ ಪರೀಕ್ಷೆಯ ಸಂಖ್ಯೆ 20 ಲಕ್ಷ ದಾಟದಿರಲು ಕಾರಣವೇನು ಎಂಬುದನ್ನು ಅವರು ತಿಳಿಸಿಲ್ಲ.

ವಿವಿಧ ರಾಜ್ಯಗಳಲ್ಲಿ ಸೋಂಕು ದೃಢಪಡುವ ಸಂಖ್ಯೆ ಹೆಚ್ಚಿದಂತೆ ಪರೀಕ್ಷೆಗಳ ಸಂಖ್ಯೆಯಲ್ಲಿ ಕಡಿಮೆಯಾಗಿದೆ. ಹೀಗಾದರೆ ಸಣ್ಣ ಪಟ್ಟಣಗಳು ಮತ್ತು ಗ್ರಾಮಗಳಲ್ಲಿ ಸೋಂಕು ಅಗೋಚರವಾಗಿ ಉಳಿದು, ಹರಡುವಿಕೆ ಹೆಚ್ಚಬಹುದು ಎಂಬ ಆತಂಕವನ್ನು ಪರಿಣತರು ವ್ಯಕ್ತಪಡಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,942
ಇಂದಿನ ಅಂತ್ಯ	14,851
▼	91
ದಿನದ ಕನಿಷ್ಠ	14,7717

ವಿನಿಮಯ ದರ

$ ಡಾಲರ್	73.34
£ ಪೌಂಡ್	103.64
€ ಯುರೊ	89.21
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಪ್ರಶ್ನೋತ್ತರ


ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಗಜೇಂದ್ರ, ಬಾಣಾವರ

• **ಪ್ರಶ್ನೆ: ನಾನು, ನನ್ನ ಹೆಂಡತಿ ಇಬ್ಬರೂ ಹಿರಿಯ ನಾಗರಿಕರು. ಅಂಚೆ ಕಚೇರಿ ಹಿರಿಯ ನಾಗರಿಕರ ಠೇವಣಿ ಹಾಗೂ ವಯೋ ವಂದನಾ ಯೋಜನೆ ಈ ಎರಡು ಹೂಡಿಕೆಗಳಲ್ಲಿ ನನಗೆ ಗೊಂದಲ ಇದೆ. ಪರಿಹರಿಸಿ. ನನ್ನ ಪ್ರಶ್ನೆ: ನಾನು ಅಂಚೆ ಕಚೇರಿಯಲ್ಲಿ ಹಿರಿಯ ನಾಗರಿಕರ ಠೇವಣಿಯಲ್ಲಿ ₹ 15 ಲಕ್ಷ ಇರಿಸಿದ್ದೇನೆ. ಈ ಠೇವಣಿ ಬ್ಯಾಂಕ್‌ಗಳಲ್ಲಿಯೂ ಲಭ್ಯವಿದೆ. ಅಂಚೆ ಕಚೇರಿಯಲ್ಲಿ ಇರಿಸಿದ ₹ 15 ಲಕ್ಷ ಹೊರತುಪಡಿಸಿ, ಬ್ಯಾಂಕ್‌ನಲ್ಲಿ ಮತ್ತೆ ಇದೇ ಯೋಜನೆಯಲ್ಲಿ ಠೇವಣಿ ಇಡಬಹುದೇ? ಈಗಿರುವ ಅಂಚೆ ಕಚೇರಿ ಹಿರಿಯ ನಾಗರಿಕರ ಠೇವಣಿ ಮುಂದುವರಿಸಿ, ಪ್ರಧಾನ ಮಂತ್ರಿ ವಯೋವಂದನಾ ಯೋಜನೆಯಲ್ಲಿ ₹ 15 ಲಕ್ಷ ಹಣ ಇಡಬಹುದೇ? ಇದೇ ರೀತಿ ನನ್ನ ಹೆಂಡತಿ ಹೆಸರಿನಲ್ಲಿಯೂ ಈ ಎರಡು ಯೋಜನೆಗಳಲ್ಲಿ ಹಣ ಇರಿಸಬಹುದೇ?**

ಉತ್ತರ: ಹಿರಿಯ ನಾಗರಿಕನಾದವನು ಆತನ ಹೆಸರಿನಲ್ಲಿ ಅಂಚೆ ಕಚೇರಿ ಅಥವಾ ಬ್ಯಾಂಕ್‌ನಲ್ಲಿ ಗರಿಷ್ಠ ₹ 15 ಲಕ್ಷ ಠೇವಣಿಯನ್ನು ಹಿರಿಯ ನಾಗರಿಕರ ಠೇವಣಿ ಯೋಜನೆಯಲ್ಲಿ ಇರಿಸಬಹುದು. ನೀವು ಈಗಾಗಲೇ ₹ 15 ಲಕ್ಷವನ್ನು ಅಂಚೆ ಕಚೇರಿಯಲ್ಲಿ ಇಟ್ಟಿರುವುದರಿಂದ ಇದೇ ಯೋಜನೆಯಲ್ಲಿ ಬ್ಯಾಂಕ್‌ನಲ್ಲಿ ಹಣ ಇಡುವಂತಿಲ್ಲ. ಈ ಯೋಜನೆ ಅಂಚೆ ಕಚೇರಿ ಹಾಗೂ ಬ್ಯಾಂಕ್‌ಗಳಲ್ಲಿ ಲಭ್ಯ ಇರುವುದರಿಂದ ಹಲವರಿಗೆ ಈ ಗೊಂದಲ ಮೂಡಿದೆ. ಇದೇ ವೇಳೆ, ಅಂಚೆ ಕಚೇರಿಯಲ್ಲಿ ಗರಿಷ್ಠ ₹ 15 ಲಕ್ಷ ಹಿರಿಯ ನಾಗರಿಕ ಠೇವಣಿಯಲ್ಲಿ ಇರಿಸಿ, ಈ ಠೇವಣಿ ಹೊರತುಪಡಿಸಿ, ಎಲ್‌ಐಸಿಯ ಪ್ರಧಾನ ಮಂತ್ರಿ ವಯೋ ವಂದನಾ ಯೋಜನೆಯಲ್ಲಿಯೂ ₹ 15 ಲಕ್ಷ ಹಣ ಇಡಬಹುದು. ಈ ಎರಡೂ ಯೋಜನೆಗಳಲ್ಲಿ ಹಿರಿಯ ನಾಗರಿಕರಾದ ನಿಮ್ಮ ಪತ್ನಿ ಹಾಗೂ ನೀವು ಕ್ರಮವಾಗಿ ₹ 15 ಲಕ್ಷ ಠೇವಣಿ ಮಾಡಬಹುದು.

ಹಿರಿಯ ನಾಗರಿಕರಲ್ಲಿ ಒಂದು ಮನವಿ: ಈ ಎರಡೂ ಠೇವಣಿಗಳ ಮೇಲಿನ ಇಂದಿನ ಬಡ್ಡಿದರ ಶೇ 7.4ರಷ್ಟಿದೆ. ಇದು ಮುಂದಿನ ದಿನಗಳಲ್ಲಿ ಕಡಿಮೆ ಆಗುವ ಸಾಧ್ಯತೆ ಇಲ್ಲದಿಲ್ಲ. ಹಾಗಾಗಿ, ಆದಷ್ಟು ಬೇಗ ಈ ಯೋಜನೆಗಳ ಇಂದಿನ ಬಡ್ಡಿದರದ ಪ್ರಯೋಜನ ಪಡೆಯುವುದು ಜಾಣತನ. ಠೇವಣಿ ಇರಿಸುವಾಗ ಇರುವ ಬಡ್ಡಿದರವನ್ನು ಠೇವಣಿ ಅವಧಿ ಮುಗಿಯುವ ತನಕ ಕಡಿಮೆ ಮಾಡುವಂತಿಲ್ಲ.

ಹೆಸರು, ಊರು ಬೇಡ

• **ಪ್ರಶ್ನೆ: ನಮಸ್ತೆ ಸರ್. ನಾನು ಗೃಹಿಣಿ. ವಿದ್ಯಾಭ್ಯಾಸ ಎಂ.ಎ. ಬಿಎಡ್. ಸದ್ಯ ಕೆಲಸದಲ್ಲಿಲ್ಲ. ನನಗೆ 9 ತಿಂಗಳ ಗಂಡು ಮಗು ಇದೆ. ನನ್ನ ಯಜಮಾನರು ಪ್ರಾಥಮಿಕ ಶಾಲಾ ಶಿಕ್ಷಕರು. ಅವರ ತಿಂಗಳ ಸಂಬಳ ₹ 39 ಸಾವಿರ. ಕಡಿತ; ಕೆ.ಜಿ.ಐಡಿ. ₹ 1000, ಎಲ್‌ಐಸಿ ₹ 952, ಎನ್‌ಪಿಎಸ್ ₹ 3,293, ಪಿಎಲ್‌ಐ ₹ 2,642, ಸೊಸೈಟಿ ಸಾಲ ₹ 1,000, ಇತರೆ ₹500, ಗೃಹ ಸಾಲದ ಕಂತು ₹ 17,345, ಮನೆ ಬಾಡಿಗೆ ₹ 3 ಸಾವಿರ. ಇತರೆ ಖರ್ಚು ₹ 3 ಸಾವಿರ. ಎಲ್ಲಾ ಕಳೆದು ₹ 5 ಸಾವಿರ ಉಳಿಸಬಹುದು. ನನ್ನ ಯಜಮಾನರಿಗೆ ಇನ್ನು 26 ವರ್ಷ ಸೇವಾವಧಿ ಇದೆ. ಸಾಲ ತೀರಿಸಲು ಹಾಗೂ ಮಗುವಿನ ಭವಿಷ್ಯದ ಬಗ್ಗೆ ಸಲಹೆ ನೀಡಿ.**

ಉತ್ತರ: ನಿಮ್ಮ ಗಂಡನ ಸಂಬಳದ ಹೆಚ್ಚಿನ ಪಾಲು ಜೀವ ವಿಮೆಗೆ ಮುಡುಪಾಗಿ ಇಟ್ಟಿದ್ದಾರೆ. ಓರ್ವ ವ್ಯಕ್ತಿ ಆತನ ಆದಾಯದ ಶೇ 10ರಿಂದ ಶೇ 15ರಷ್ಟು ಮೊತ್ತವನ್ನು ಮಾತ್ರ ಜೀವ ವಿಮೆಗೆ ತೆಗೆದಿಟ್ಟರೆ ಸಾಕು. ಸೊಸೈಟಿ ಸಾಲ ಆದಷ್ಟು ಬೇಗ ತೀರಿಸಿ. ಗೃಹ ಸಾಲದ ಕಂತುಗಳನ್ನು ಕ್ರಮಬದ್ಧವಾಗಿ ತುಂಬುತ್ತಾ ಬನ್ನಿ. ನೀವು ಉಳಿಸಬಹುದಾದ ₹ 5 ಸಾವಿರದಲ್ಲಿ 10 ವರ್ಷಗಳ ಆರ್.ಡಿಯನ್ನು ಸಂಬಳ ಪಡೆಯುವ ಬ್ಯಾಂಕ್‌ನಲ್ಲಿ ಮಾಡಿ. ಶೇ 5.5ರ ಬಡ್ಡಿದರದಲ್ಲಿ 10 ವರ್ಷಗಳ ಅಂತ್ಯಕ್ಕೆ ₹ 8,00,050 ಪಡೆಯುವಿರಿ. ವಾರ್ಷಿಕ ಇನ್‌ಕ್ರಿಮೆಂಟ್ ಹಾಗೂ ಅರ್ಧ ವಾರ್ಷಿಕ ತುಟ್ಟಿಭತ್ಯೆಯಲ್ಲಿ ಕನಿಷ್ಠ ಶೇ 50ರಷ್ಟನ್ನು 10 ವರ್ಷಗಳ ಆರ್.ಡಿ. ಮಾಡುತ್ತಾ ಬನ್ನಿ. ಈ ಪ್ರಕ್ರಿಯೆ ನಿರಂತರವಾಗಿರಲಿ. ಹೀಗೆ ಕೂಡಿಟ್ಟ ಹಣ ಜೀವನದ ಸಂಜೆಯಲ್ಲಿ ಉಪಯುಕ್ತವಾಗುತ್ತದೆ.

ಪ್ರಭಾಕರ್, ಕೋಣನಕುಂಟೆ, ಬೆಂಗಳೂರು

• **ಪ್ರಶ್ನೆ: ನಾನು ಐ.ಟಿ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ತಿಂಗಳ ಸಂಬಳದಲ್ಲಿ ಎಲ್ಲಾ ಖರ್ಚು ಕಳೆದು ₹ 60 ಸಾವಿರ ಉಳಿಯುತ್ತದೆ. ಅವಿವಾಹಿತ. ಎರಡು ವರ್ಷಗಳಲ್ಲಿ ಮದುವೆ ಆಗಬೇಕು. ನನಗೆ ಉತ್ತಮ ಹೂಡಿಕೆ ತಿಳಿಸಿ.**



ಉತ್ತರ: ನೀವು ತೆರಿಗೆ ಉಳಿಸಲು ವಿಮೆ, ಪಿಪಿಎಫ್ ಇವೆರಡರಲ್ಲಿ ಒಟ್ಟಾರೆ ವಾರ್ಷಿಕ ₹ 1.50 ಲಕ್ಷ ಹೂಡಿಕೆ ಮಾಡಿ. ಸೆಕ್ಷನ್ 80ಸಿ ಆಧಾರದ ಮೇಲೆ ವಿನಾಯಿತಿ ಪಡೆಯಿರಿ. ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ವಾರ್ಷಿಕ ₹ 50 ಸಾವಿರ ಎನ್‌ಪಿಎಸ್‌ನಲ್ಲಿ ಹೂಡಿ ವಿನಾಯಿತಿ ಪಡೆಯಿರಿ. ಈ ಎರಡೂ ಹೂಡಿಕೆ ನಂತರವೂ ನಿಮ್ಮೊಡನೆ ₹ 40 ಸಾವಿರ ಉಳಿಯುತ್ತದೆ. ಅದನ್ನು ವಿಂಗಡಿಸಿ ₹ 20 ಸಾವಿರದಂತೆ ಎರಡು ವರ್ಷಗಳ ಆರ್.ಡಿ. ಮಾಡಿ. ಅಷ್ಟರಲ್ಲಿ ನಿಮ್ಮ ಮದುವೆ ನಿಶ್ಚಯವಾಗಬಹುದು. ಮದುವೆ ನಂತರ ಆರ್.ಡಿ. ಬದಲಾಗಿ ಗೃಹ ಸಾಲ ಪಡೆದು ಈಗ ಆರ್.ಡಿಗೆ ಕಟ್ಟುವ ಹಣ ಗೃಹ ಸಾಲದ ಕಂತಿಗೆ ತುಂಬಿ. ಹಣ ಉಳಿಸುವುದು ಒಂದು ಕಲೆ. ಇನ್ನೂ ಹೆಚ್ಚಿನ ಮಾಹಿತಿಗೆ ನನಗೆ ಕರೆ ಮಾಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಕೋವಿಡ್–19 ವಿರುದ್ಧ ರೋಗನಿರೋಧಕ ಶಕ್ತಿ ಹೆಚ್ಚಿಸುವ ನಂಬಿಕೆ

ಸಗಣಿ, ಗೋಮೂತ್ರದಿಂದ ಚಿಕಿತ್ಸೆ ಬೇಡ: ವೈದ್ಯರ ಎಚ್ಚರಿಕೆ

ಅಹಮದಾಬಾದ್ (ರಾಯಿಟರ್ಸ್): ಹಸುವಿನ ಸಗಣಿಯಲ್ಲಿ ಕೋವಿಡ್–19 ನಿವಾರಿಸುವ ಗುಣ ಹೊಂದಿದೆ ಎಂಬ ನಂಬಿಕೆ ಕೆಲವರಲ್ಲಿದ್ದು, ಸಗಣಿಯನ್ನು ಮೈಗೆ ಹಚ್ಚಿಕೊಳ್ಳುವುದರ ಬಗ್ಗೆ ವೈದ್ಯರು ಎಚ್ಚರಿಕೆ ನೀಡಿದ್ದಾರೆ.

ಸಗಣಿ ಬಳಕೆಯಿಂದ ಕೊರೊನಾ ವೈರಸ್ ಸೋಂಕನ್ನು ಹೋಗಲಾಡಿಸಬಹುದು ಎಂಬ ಬಗ್ಗೆ ಯಾವುದೇ ವೈಜ್ಞಾನಿಕ ಆಧಾರಗಳು ಇಲ್ಲ. ಸಗಣಿಯ ಬಳಕೆಯಿಂದ ಕೋವಿಡ್–19 ನಿವಾರಣೆಯಾಗುವ ಬದಲು ಇತರ ರೋಗಗಳು ಹರಡುವ ಸಾಧ್ಯತೆಗಳೇ ಹೆಚ್ಚು ಎಂದೂ ಎಚ್ಚರಿಸಿದ್ದಾರೆ.

ಗುಜರಾತ್‌ನ ಕೆಲವೆಡೆ ಜನರು ವಾರದಲ್ಲಿ ಒಂದು ಬಾರಿ ಗೋ ಶಾಲೆಗಳಿಗೆ ಹೋಗುತ್ತಿದ್ದು, ಮೈಗೆಲ್ಲ ಸಗಣಿ ಹಾಗೂ ಗೋಮೂತ್ರ ಸವರಿಕೊಳ್ಳುತ್ತಿದ್ದಾರೆ. ಹೀಗೆ ಮಾಡುವುದರಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂಬ ನಂಬಿಕೆಯಿಂದ ಈ ರೀತಿ ಮಾಡುತ್ತಿದ್ದಾರೆ ಎಂದು ವೈದ್ಯರು ಹೇಳಿದ್ದಾರೆ.

ಜನರು ಗೋಶಾಲೆಗಳಿಗೆ ತೆರಳಿ, ಸಗಣಿ ಹಾಗೂ ಗೋಮೂತ್ರವನ್ನು ಮೈಗೆ ಹಚ್ಚಿಕೊಳ್ಳುತ್ತಿರುವುದು, ಕೆಲವರು ಅದರಿಂದಲೇ ಸ್ನಾನ ಮಾಡುತ್ತಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿವೆ.


ಗುಜರಾತ್‌ನ ಅಹಮದಾಬಾದ್ ಬಳಿಯ ಭರೋಡಿ ಎಂಬಲ್ಲಿ ಶ್ರೀ ಸ್ವಾಮಿ ನಾರಾಯಣ ಗುರುಕುಲ ವಿಶ್ವವಿದ್ಯಾ ಪ್ರತಿಷ್ಠಾನಕ್ಕೆ ಸೇರಿದ ಗೋಶಾಲೆಯಲ್ಲಿ ಜನರು ಮೈಗೆ ಹಸುವಿನ ಸಗಣಿ ಬಳಿದುಕೊಂಡಿದ್ದಾರೆ —ರಾಯಿಟರ್ಸ್ ಚಿತ್ರ

ಗುಜರಾತ್‌ನ ಅಹಮದಾಬಾದ್ ಬಳಿಯ ಭರೋಡಿ ಎಂಬಲ್ಲಿ ಶ್ರೀ ಸ್ವಾಮಿ ನಾರಾಯಣ ಗುರುಕುಲ ವಿಶ್ವವಿದ್ಯಾ ಪ್ರತಿಷ್ಠಾನ ಇದ್ದು, ಇದು ಗೋಶಾಲೆಯೊಂದನ್ನು ನಡೆಸುತ್ತಿದೆ. ಇಲ್ಲಿಗೆ ಸಾಕಷ್ಟು ಜನರು ಭೇಟಿ ನೀಡುತ್ತಿದ್ದಾರೆ.

ಕೋವಿಡ್–19 ಲಸಿಕೆಯನ್ನು ಅಭಿವೃದ್ಧಿಪಡಿಸುತ್ತಿರುವ ಝೈಡಸ್–ಕ್ಯಾಡಿಲಾ ಕಂಪನಿಯಲ್ಲಿ ಸಹಾಯಕ ವ್ಯವಸ್ಥಾಪಕರಾಗಿರುವ ಗೌತಮ್ ಮಣಿಲಾಲ್ ಬೋರಿಸಾ ಅವರೂ ಈ ಗೋಶಾಲೆಗೆ ಭೇಟಿ ನೀಡಿ, ಸಗಣಿ–ಗೋಮೂತ್ರದ ಚಿಕಿತ್ಸೆ ಪಡೆದಿದ್ದಾರೆ.

'ಈ ಗೋಶಾಲೆಗೆ ವೈದ್ಯರು ಸೇರಿದಂತೆ ಸಾಕಷ್ಟು ಜನರು ಬರುತ್ತಾರೆ. ಸಗಣಿ–ಗೋಮೂತ್ರ ಬಳಸಿ ನೀಡುವ ಚಿಕಿತ್ಸೆಯಿಂದ ನಮ್ಮಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ನಂತರ ನಾವು ಯಾವುದೇ ಹೆದರಿಕೆ ಇಲ್ಲದೆ ಕೋವಿಡ್ ರೋಗಿಗಳ ಬಳಿ ತೆರಳಿ ಅವರಿಗೆ ಚಿಕಿತ್ಸೆ ನೀಡಬಹುದು ಎಂಬ ನಂಬಿಕೆ ಅವರಲ್ಲಿದೆ' ಎಂದು ಗೌತಮ್ ಹೇಳಿದರು.

'ಕಳೆದ ವರ್ಷ ನನಗೂ ಕೊರೊನಾ ಸೋಂಕು ತಗುಲಿತ್ತು. ನಾನೂ ಸಗಣಿ–ಗೋಮೂತ್ರ ಚಿಕಿತ್ಸೆ ಪಡೆದೆ. ಕೋವಿಡ್‌ನಿಂದ ಚೇತರಿಸಿಕೊಳ್ಳಲು ಈ ಚಿಕಿತ್ಸೆ ನೆರವಾಯಿತು' ಎಂದೂ ಅವರು ಹೇಳಿದರು.

'ಸಗಣಿ, ಗೋಮೂತ್ರ ಬಳಕೆಯಿಂದ ರೋಗ ನಿರೋಧಶಕ್ತಿ ಹೆಚ್ಚುತ್ತದೆ ಎಂಬ ಕುರಿತು ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಇದು ನಂಬಿಕೆ ಮಾತ್ರ' ಎಂದು ಭಾರತೀಯ ವೈದ್ಯಕೀಯ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷ ಡಾ.ಜೆ.ಎ.ಜಯಲಾಲ್ ಹೇಳಿದರು.

'ಸಗಣಿ, ಗೋಮೂತ್ರದಿಂದ ಮಾಡಿದ ಉತ್ಪನ್ನಗಳ ವಾಸನೆ ತೆಗೆದುಕೊಳ್ಳುವುದರಿಂದ ಇಲ್ಲವೇ ಅವುಗಳನ್ನು ಸೇವಿಸುವುದರಿಂದ ಆರೋಗ್ಯ ಸಂಬಂಧಿ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ' ಎಂದೂ ಎಚ್ಚರಿಸಿದರು.

ಮುಂಬೈ ಧಾರಣೆ

ಶೇಂಗಾ

11-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9100
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಸೋಯಾ ಕಚ್ಚಾ	1430 (1445)
ಪಾಮ್ ವಾರದ ಡೆಲಿವರಿ	1358 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1660 (1680)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,400 (47,750)
ಬೆಳ್ಳಿ ಕೆ.ಜಿ 70,800 (71,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹1465 (1460)
ಸೂರ್ಯಕಾಂತಿ (ರಿಫೈನ್ಡ್)	₹1720 (1730)
ಪಾಮೋಲಿನ್	₹1360(1360)

ಬೆಂಗಳೂರು ಈರುಳ್ಳಿ ಧಾರಣೆ



ಕ್ವಿಂಟಲ್‌ಗೆ

ದೊಡ್ಡ	₹1500-1700
ಮಧ್ಯಮ	₹1200-1500
ಸಣ್ಣ	₹800-1200

ದೇಶದಾದ್ಯಂತ ಮಾರುಕಟ್ಟೆ ಧಾರಣೆ


ಏಲಕ್ಕಿ ಧಾರಣೆ(ಸಕಲೇಶಪುರ)

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	340

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10450	---	10,300	--- ಸೆಂಟ್ಸ್
ಎಸಿ	4200	---	4000	
ಆರ್‌ಪಿ	5100	---	5175	ಲಂಡನ್
ಆರ್‌ಸಿ	3000	---	3000	--- ಡಾಲರ್ಸ್

ಚಿನ್ನದ ದರ ₹ 212, ಬೆಳ್ಳಿ ₹ 973 ಇಳಿಕೆ



ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ದರ 10 ಗ್ರಾಂಗೆ ₹ 212ರಷ್ಟು ಇಳಿಕೆಯಾಗಿ ₹ 47,308ಕ್ಕೆ ತಲುಪಿತು. ಬೆಳ್ಳಿ ಧಾರಣೆ ಕೆ.ಜಿಗೆ ₹ 973ರಷ್ಟು ಇಳಿಕೆ ಕಂಡು ₹ 70,646ರಂತೆ ಮಾರಾಟವಾಯಿತು.

ನಿಧಿ ಸಂಗ್ರಹಕ್ಕಾಗಿ ಚೆಸ್: ಆನಂದ್, ನಾಲ್ವರು ಭಾಗಿ



ನವದೆಹಲಿ (ಪಿಟಿಐ): ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಹಾಗೂ ಭಾರತದ ಇತರ ನಾಲ್ವರು ಗ್ರ್ಯಾಂಡ್‌ಮಾಸ್ಟರ್‌ಗಳು, ಕೋವಿಡ್ ಪರಿಹಾರ ನಿಧಿ ಸಂಗ್ರಹಕ್ಕಾಗಿ ಗುರುವಾರ ಆನ್‌ಲೈನ್ ಪ್ರದರ್ಶನ ಪಂದ್ಯಗಳಲ್ಲಿ ಆಡಲಿದ್ದಾರೆ.

ಆನಂದ್, ಕೊನೇರು ಹಂಪಿ, ದ್ರೋಣವಲ್ಲಿ ಹರಿಕಾ, ನಿಹಾಲ್ ಸರಿನ್ ಹಾಗೂ ಆರ್. ಪ್ರಗ್ಯಾನಂದ ಪಂದ್ಯಗಳಲ್ಲಿ ಪಾಲ್ಗೊಳ್ಳುವವರು.

ಚೆಸ್ ಡಾಟ್ ಕಾಮ್ ಬ್ಲಿಟ್ಜ್ ಅಥವಾ 2000ಕ್ಕಿಂತ ಕಡಿಮೆ ಫಿಡೆ ರೇಟಿಂಗ್ ಹೊಂದಿರುವ ಯಾವುದೇ ಆಟಗಾರರು, ಆನಂದ್ ಅವರ ಜೊತೆ, ₹ 11,000 ದೇಣಿಗೆ ನೀಡುವ ಮೂಲಕ ಮತ್ತು ಇತರ ನಾಲ್ಕು ಗ್ರ್ಯಾಂಡ್‌ಮಾಸ್ಟರ್‌ಗಳೊಂದಿಗೆ ₹ 1800 ನೋಂದಣಿ ಮೊತ್ತವಾಗಿ ಪಾವತಿಸುವ ಮೂಲಕ ಆಡಬಹುದು.

ತರಬೇತಿಯೊಂದಿಗೆ ಸ್ಪರ್ಧೆಗಳಲ್ಲಿ ಭಾಗವಹಿಸಲು ಕ್ರೊವೇಷ್ಯಾಕ್ಕೆ ತೆರಳಿದ ಭಾರತದ ಅಥ್ಲೀಟ್‌ಗಳು

ಒಲಿಂಪಿಕ್ಸ್‌ಗೆ ಶೂಟರ್‌ಗಳ ತಾಲೀಮು

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಭಾರತದ ಶೂಟಿಂಗ್ ಪಟುಗಳು ಸುಮಾರು ಎರಡೂವರೆ ತಿಂಗಳುಗಳ ತರಬೇತಿ ಮತ್ತು ಸ್ಪರ್ಧೆಗಳಿಗಾಗಿ ಮಂಗಳವಾರ ಕ್ರೊವೇಷ್ಯಾಕ್ಕೆ ತೆರಳಿದರು.

ಟೋಕಿಯೊ ಕೂಟಕ್ಕೆ ಸಜ್ಜಾಗಲು ಇದು ಅವರಿಗೆ ಕೊನೆಯ ತಾಲೀಮು. ತರಬೇತುದಾರರು, ನೆರವು ಸಿಬ್ಬಂದಿ ಹಾಗೂ 13 ಮಂದಿಯ ಶೂಟರ್‌ಗಳ ತಂಡವು ಕ್ರೊವೇಷ್ಯಾದ ರಾಜಧಾನಿ ಜಾಗ್ರೇಬ್‌ಗೆ ತೆರಳಿತು. ಮೊದಲು ತರಬೇತಿಯಲ್ಲಿ ಪಾಲ್ಗೊಳ್ಳುವ ಭಾರತದ ಶೂಟರ್‌ಗಳು ಬಳಿಕ ಒಸಿಜೆಕ್‌ನಲ್ಲಿ ನಡೆಯುವ ಯೂರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ (ಮೇ 20ರಿಂದ ಜೂನ್ 6) ಭಾಗವಹಿಸುವರು.

ಇದಾದ ಬಳಿಕ ಜೂನ್ 22ರಿಂದ ಜುಲೈ ಮೂರರವರೆಗೆ ನಿಗದಿಯಾಗಿರುವ ಐಎಸ್‌ಎಸ್‌ಎಫ್ ಸಂಯೋಜಿತ ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

'ಭಾರತ ತಂಡ ಕ್ರೊವೇಷ್ಯಾ ವಿಮಾನವೇರುತ್ತಿದೆ. ಪ್ರಯಾಣಕ್ಕೆ ಶುಭವಾಗಲಿ, ಯಶಸ್ಸಿಗೆ ನಿರಂತರವಾಗಿ ಶ್ರಮಿಸಿ' ಎಂದು ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆಯ (ಎನ್‌ಆರ್‌ಎಐ) ಅಧ್ಯಕ್ಷ ರಣಿಂದರ್ ಸಿಂಗ್ ಅವರು, ತಂಡವು ಕ್ರೊವೇಷ್ಯಾಕ್ಕೆ ತೆರಳುವ ಮೊದಲು ಟ್ವೀಟ್ ಮಾಡಿದರು.

ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿರುವ ಭಾರತದ ಸ್ಕೀಟ್ ವಿಭಾಗದ ಶೂಟರ್‌ಗಳಾದ ಅಂಗದ್ ವೀರ್ ಸಿಂಗ್ ಬಜ್ವಾ ಹಾಗೂ ಮೈರಾಜ್ ಅಹಮದ್ ಖಾನ್ ಸದ್ಯ ಇಟಲಿಯಲ್ಲಿದ್ದಾರೆ. ಇವರಿಬ್ಬರು ಹಾಗೂ ಗುರುಜೋತ್ ಸಿಂಗ್ ಖಂಗುರಾ ಸದ್ಯ ಇಟಲಿಯ ಲೊನಾಟೊದಲ್ಲಿ ನಡೆಯುತ್ತಿರುವ ಶಾಟ್‌ಗನ್ ವಿಶ್ವಕಪ್ ಟೂರ್ನಿಯಲ್ಲಿ ಭಾಗವಹಿಸಿದ್ದಾರೆ. ಆದರೆ ಟೂರ್ನಿಯ ಫೈನಲ್ ತಲುಪಲು ಸೋಮವಾರ ಅವರು ವಿಫಲರಾಗಿದ್ದರು.

'ಭಾರತ್ ಮಾತಾ ಕೀ ಜೈ ಘೋಷಣೆಯೊಂದಿಗೆ ನಾವು ಕ್ರೊವೇಷ್ಯಾಕ್ಕೆ ತೆರಳುತ್ತಿದ್ದೇವೆ. ಅಲ್ಲಿಂದ ನೇರವಾಗಿ ಜಪಾನಿಗೆ ಒಲಿಂಪಿಕ್ಸ್‌ಗೆ ಪಯಣಿಸಲಿದ್ದೇವೆ. ಒಟ್ಟು 80 ದಿನದ ಪ್ರವಾಸ. ಶೂಟಿಂಗ್ ತಂಡವು ನಿಮ್ಮ ಹಾರೈಕೆಗಳನ್ನು ನಿರೀಕ್ಷಿಸುತ್ತದೆ' ಎಂದು ರಾಷ್ಟ್ರೀಯ ರೈಫಲ್ ತಂಡದ ಹೈ ಪರ್ಫಾರ್ಮೆನ್ಸ್ ಕೋಚ್ ಸುಮಾ ಶಿರೂರು ಟ್ವೀಟ್ ಮಾಡಿದ್ದಾರೆ.

ರೈಫಲ್ ಹಾಗೂ ಪಿಸ್ತೂಲ್ ವಿಭಾಗದಲ್ಲಿ ಸ್ಪರ್ಧಿಸುವ 13 ಮಂದಿ ಶೂಟರ್‌ಗಳಿಗೆ ಒಂಬತ್ತು ಮಂದಿ ಕೋಚ್‌ಗಳಿದ್ದಾರೆ. ಆದರೆ ತರಬೇತುದಾರರಾದ ಸಮರೇಶ್ ಜಂಗ್, ಜಸ್ಪಾಲ್ ರಾಣಾ ಹಾಗೂ ರೋನಕ್ ಪಂಡಿತ್ ಅವರು ಕಾರಣಾಂತರಗಳಿಂದಾಗಿ ತಂಡದೊಂದಿಗೆ ತೆರಳುತ್ತಿಲ್ಲ.

ಕ್ರೊವೇಷ್ಯಾದಲ್ಲಿ ತರಬೇತಿಗೂ ಮೊದಲು ಭಾರತ ತಂಡವು ಕಡ್ಡಾಯ ಕ್ವಾರಂಟೈನ್ ಅವಧಿ ಪೂರ್ಣಗೊಳಿಸಬೇಕಿದೆ.



ಶೂಟರ್‌ಗಳಾದ (ಎಡದಿಂದ)ರಾಹಿ ಸರ್ನೋಬತ್, ಚಿಂಕಿ ಯಾದವ್ ಹಾಗೂ ಮನು ಭಾಕರ್– ಎಎಫ್‌ಪಿ ಚಿತ್ರ

ವಿದೇಶಗಳಲ್ಲಿನ ಕೋವಿಡ್ ನಿಯಮ ಉಲ್ಲಂಘಿಸಬೇಡಿ: ರಿಜಿಜು



ಕಿರಣ್ ರಿಜಿಜು

ನವದೆಹಲಿ (ಪಿಟಿಐ): ಬೇರೆ ದೇಶಗಳಿಗೆ ತರಬೇತಿ ಅಥವಾ ಸ್ಪರ್ಧೆಗೆ ತೆರಳಿರುವ ಸಂದರ್ಭದಲ್ಲಿ ಅಲ್ಲಿ ಜಾರಿಯಲ್ಲಿರುವ ಕೋವಿಡ್ ತಡೆ ನಿಯಮಾವಳಿಗಳನ್ನು ಉಲ್ಲಂಘಿಸದಿರಿ ಎಂದು ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಅವರು ಭಾರತ ಅಥ್ಲೀಟ್‌ಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಒಲಿಂಪಿಕ್ಸ್ ಅರ್ಹತೆ ಗಳಿಸಿರುವ ಭಾರತದ ಶೂಟರ್‌ಗಳು ಕ್ರೊವೇಷ್ಯಾ ಪ್ರವಾಸಕ್ಕೆ ತೆರಳುತ್ತಿರುವ ಸಂದರ್ಭದಲ್ಲಿ ಅವರಿಗೆ ಶುಭ ಹಾರೈಸಿ ರಿಜಿಜು ಟ್ವೀಟ್ ಮಾಡಿದ್ದಾರೆ.

'ಪ್ರಯಾಣ ಸುರಕ್ಷಿತವಾಗಿರಲಿ. ವಿದೇಶಗಳಲ್ಲಿರುವ ಕೋವಿಡ್ ತಡೆ ನಿಯಮಾವಳಿಗಳನ್ನು ಯಾವ ಕಾರಣಕ್ಕೂ ಉಲ್ಲಂಘಿಸಬೇಡಿ. ತರಬೇತಿ ಕಡೆಗೆ ಗಮನ ಕೊಡಿ. ನಮ್ಮ ಕ್ರೀಡಾಪಟುಗಳು ಮತ್ತು ಕೋಚ್‌ಗಳಿಗೆ ಅಗತ್ಯವಾದ ಎಲ್ಲ ರೀತಿಯ ನೆರವನ್ನು ನಾವು ಒದಗಿಸುತ್ತೇವೆ. ಶುಭವಾಗಲಿ' ಎಂದು ರಿಜಿಜು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಮಾಲ್ಡಿವ್ಸ್‌ನ ಮಾಲೆಯಲ್ಲಿ ನಡೆಯುತ್ತಿರುವ ಎಎಫ್‌ಸಿ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡದ ಆಟಗಾರರು ಕೋವಿಡ್ ನಿಯಮ ಉಲ್ಲಂಘಿಸಿದ್ದು ವರದಿಯಾಗಿತ್ತು. ಇದರಿಂದ ತಂಡವು ಆಡಬೇಕಿದ್ದ ಈಗಲ್ಸ್ ಎಫ್‌ಸಿ ಎದುರಿನ ಪಂದ್ಯವನ್ನು ಮುಂದೂಡಲಾಗಿತ್ತು. ಬಿಎಫ್‌ಸಿ ಇದಕ್ಕೆ ಕ್ಷಮೆ ಕೇಳಿತ್ತು. ಈ ಘಟನೆಯ ಹಿನ್ನೆಲೆಯಲ್ಲಿ ರಿಜಿಜು ಹೇಳಿಕೆ ನೀಡಿದ್ದಾರೆ.

ಮಾಲ್ಡಿವ್ಸ್‌ನ ಕ್ರೀಡಾ ಸಚಿವ ಅಹಮದ್ ಮಹಲೂಫ್ ಅವರು ತಮ್ಮ ದೇಶವನ್ನು ತೊರೆಯುವಂತೆ ಬಿಎಫ್‌ಸಿ ತಂಡಕ್ಕೆ ಸೂಚಿಸಿದ್ದರು.

ಸುದ್ದಿ 2 ನಿಮಿಷ

ಒಲಿಂಪಿಕ್ಸ್ ಖಚಿತತೆ ಹೇಳಲು ಸಾಧ್ಯವಿಲ್ಲ: ಒಸಾಕಾ


ಟೋಕಿಯೊ (ಎಎಫ್‌ಪಿ) ಕೊರೊನಾವೈರಸ್ ಭೀತಿಗೆ ಒಳಗಾಗಿರುವ ಟೋಕಿಯೊ ಒಲಿಂಪಿಕ್ಸ್ ನಿಗದಿಯಂತೆ ನಡೆಯುವ ಬಗ್ಗೆ ಅನುಮಾನಗಳು ದಿನದಿಂದ ದಿನಕ್ಕೆ ಬಲವಾಗತೊಡಗಿವೆ. 'ಈ ಕ್ರೀಡೆಗಳು ನಡೆಯುವ ಬಗ್ಗೆ ಖಚಿತವಾಗಿ ಹೇಳಲಾಗದು' ಎಂದು ಜಪಾನ್‌ನ ದಿಗ್ಗಜ ಆಟಗಾರ್ತಿ ನವೊಮಿ ಒಸಾಕಾ ಕೂಡ ಒಪ್ಪಿಕೊಂಡಿದ್ದಾರೆ.

ಜಪಾನ್ ರಾಜಧಾನಿಯಲ್ಲಿ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭ ಆರಂಭವಾಗಲು ಇನ್ನು ಕೆಲವೇ ವಾರಗಳು ಉಳಿದಿವೆ.

ಟೋಕಿಯೊ ಜೊತೆಗೆ ಜಪಾನ್‌ನ ಇತರ ಭಾಗಗಳಲ್ಲಿ ವೈರಸ್ ಉಪಟಳ ಮೇರೆಮೀರಿರುವುದನ್ನು ತಡೆಯಲು ತುರ್ತು ಸ್ಥಿತಿ ಹೇರಲಾಗಿದೆ. ಈ ಬಗ್ಗೆ ಜಪಾನ್‌ನ ಆಟಗಾರ ಕಿ ನಿಶಿಕೋರಿ ಕೂಡ ಕಳವಳ ವ್ಯಕ್ತಪಡಿಸಿದ್ದು, ಅವರ ಸಾಲಿಗೆ ನಾಲ್ಕು ಗ್ರ್ಯಾಂಡ್‌ಸ್ಲಾಮ್ ಟ್ರೋಫಿಗಳ ಒಡತಿ ಒಸಾಕಾ ಕೂಡ ಸೇರಿದ್ದಾರೆ.

ಒಲಿಂಪಿಕ್ಸ್ ನಡೆಸುವುದು ಜಪಾನ್ ನಾಗರಿಕರಿಗೆ ಸ್ವಲ್ಪವೂ ಇಷ್ಟವಿಲ್ಲ ಎಂಬುದು ಜನಾಭಿಪ್ರಾಯ ಸಂಗ್ರಹಣೆಯಲ್ಲೂ ವ್ಯಕ್ತವಾಗಿದೆ. ಸೋಮವಾರ ಬಿಡುಗಡೆಯಾದ ಜಪಾನ್‌ನ ಪ್ರಮುಖ ಪತ್ರಿಕೆಯ ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ 59 ಜನ ಒಲಿಂಪಿಕ್ಸ್ ರದ್ದುಗೊಳಿಸುವುದೇ ಲೇಸು ಎಂದಿದ್ದಾರೆ.

ಈ ಹಿಂದೆ ಒಲಿಂಪಿಕ್ ಸಂಸ್ಥೆ ಅಧಿಕಾರಿಗಳು ಮತ್ತು ವ್ಯವಸ್ಥಾಪಕ ಸಮಿತಿ ಮುಖ್ಯಸ್ಥರು ನಿಗದಿಯಂತೆ ಒಲಿಂಪಿಕ್ಸ್ ನಡೆಸುವುದಾಗಿ ಉತ್ಸಾಹದಿಂದ ಹೇಳಿದ್ದರು. ಆದರೆ ಕೊರೊನಾ ವೈರಸ್ ಎಲ್ಲೆಡೆ ಕಬಂಧಬಾಹುಗಳನ್ನು ಚಾಚಿದ ಕಾರಣ, ಕಳೆದ ವರ್ಷದ ಜುಲೈ–ಆಗಸ್ಟ್‌ನಲ್ಲಿ ನಡೆಯಬೇಕಿದ್ದ ಕ್ರೀಡೆಗಳನ್ನು ಒಂದು ವರ್ಷ ಮುಂದೂಡಲಾಗಿತ್ತು.



ಪಡುಕೋಣೆ ಸ್ಪೋರ್ಟ್ಸ್‌ನಿಂದ ಫಿಟ್‌ನೆಸ್ ಕಾರ್ಯಕ್ರಮ

ಬೆಂಗಳೂರು: ಬ್ಯಾಡ್ಮಿಂಟನ್ ಕ್ರೀಡೆಯ ಕುರಿತು ಪಡುಕೋಣೆ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಆನ್‌ಲೈನ್ ಫಿಟ್‌ನೆಸ್ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಈ ಸಮಗ್ರ ಕಾರ್ಯಕ್ರಮಗಳು ಈಗಾಗಲೇ ಆರಂಭಗೊಂಡಿದ್ದು ಫಿಟ್‌ನೆಸ್, ತಜ್ಞರೊಂದಿಗೆ ಚರ್ಚೆ, ಯೋಗ ಮತ್ತು ಮನೋವಿಜ್ಞಾನದ ಮೇಲೆ ಕೇಂದ್ರೀಕೃತವಾಗಿರಲಿವೆ.

ಮಾಹಿತಿಗಾಗಿ ಮೊ.ಸಂಖ್ಯೆ 7848883344 ಸಂಪರ್ಕಿಸುವಂತೆ ಮ್ಯಾನೇಜ್‌ಮೆಂಟ್‌ನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತದ ಕೆಲವು ಆಟಗಾರರಿಗೆ ನಿರ್ಬಂಧ ಇಷ್ಟವಿರಲಿಲ್ಲ: ಪಮೆಂಟ್

ಆಕ್ಲೆಂಡ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡಿದ್ದ ಕೆಲವು ಭಾರತೀಯ ಅನುಭವಿ ಆಟಗಾರರಿಗೆ ಬಯೋಬಬಲ್ ಶಿಷ್ಟಾಚಾರದ ನಿರ್ಬಂಧಗಳು ಇಷ್ಟವಿರಲಿಲ್ಲ ಎಂದು ಮುಂಬೈ ಇಂಡಿಯನ್ಸ್ ತಂಡದ ಫೀಲ್ಡಿಂಗ್ ಕೋಚ್ ಜೇಮ್ಸ್ ಪಮೆಂಟ್ ಹೇಳಿದ್ದಾರೆ.

ಈಚೆಗೆ ಆಯೋಜಿಸಲಾಗಿದ್ದ ಐಪಿಎಲ್ 14ನೇ ಆವೃತ್ತಿಯನ್ನು ಮುಂದೂಡಲಾಗಿದೆ. ಬಯೋಬಬಲ್‌ನಲ್ಲಿ ಕೆಲವು ಆಟಗಾರರಿಗೆ ಕೋವಿಡ್ ಸೋಂಕು ತಗುಲಿದ್ದ ಕಾರಣ ಟೂರ್ನಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು.

'ಭಾರತದ ಕೆಲವು ಆಟಗಾರರಲ್ಲಿ ನಿರ್ಬಂಧಗಳ ಬಗ್ಗೆ ಸಹಮತವಿರಲಿಲ್ಲ. ಆದರೆ ನಮಗೆ ತಕರಾರು ಇರಲಿಲ್ಲ. ಈ ವ್ಯವಸ್ಥೆಯಲ್ಲಿ ಸುರಕ್ಷಿತವಾಗಿದ್ದೆವು' ಎಂದು ಹೇಳಿದರು.

ನಾಯಕತ್ವಕ್ಕೆ ಹಾರ್ದಿಕ್–ಧವನ್ ಸ್ಪರ್ಧೆ?

ಜುಲೈನಲ್ಲಿ ಶ್ರೀಲಂಕಾದಲ್ಲಿ ಸೀಮಿತ ಓವರ್‌ಗಳ ಕ್ರಿಕೆಟ್ ಸರಣಿ ಆಡಲಿರುವ ಭಾರತ

ನವದೆಹಲಿ (ಪಿಟಿಐ): ಅನುಭವಿ ಬ್ಯಾಟ್ಸ್‌ಮನ್ ಶಿಖರ್ ಧವನ್ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರಲ್ಲಿ ಒಬ್ಬರಿಗೆ ಶ್ರೀಲಂಕಾ ಪ್ರವಾಸದ ವೇಳೆ ಭಾರತ ತಂಡದ ನಾಯಕತ್ವ ಒಲಿಯುವ ಸಾಧ್ಯತೆ ಇದೆ.

ಜುಲೈನಲ್ಲಿ ಭಾರತ ತಂಡವು ಶ್ರೀಲಂಕಾದಲ್ಲಿ ಸೀಮಿತ ಓವರ್‌ಗಳ ಕ್ರಿಕೆಟ್ ಸರಣಿಯಲ್ಲಿ ಆಡಲಿದೆ. ಅದೇ ಸಂದರ್ಭದಲ್ಲಿ ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಇರುವುದರಿಂದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಸೇರಿದಂತೆ ಪ್ರಮುಖ ಆಟಗಾರರು ಶ್ರೀಲಂಕಾ ಎದುರಿನ ಸರಣಿಯಲ್ಲಿ ಇರುವುದಿಲ್ಲ. ಆದ್ದರಿಂದ ಇದಕ್ಕಾಗಿ ಪ್ರತ್ಯೇಕ ತಂಡವನ್ನು ರಚಿಸಲಾಗುತ್ತಿದೆ ಎಂದು ಈಚೆಗೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದರು.

ಮುಂಬೈ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ಅವರೇ ಈ ತಂಡವನ್ನು ಮುನ್ನಡೆಸುವುದಾಗಿಯೂ ಹೇಳಲಾಗಿತ್ತು. ಆದರೆ ಅವರು ಈಚೆಗೆ ಗಾಯಗೊಂಡು ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಒಂದೊಮ್ಮೆ ಅವರು ಫಿಟ್ ಆಗಿ ಮರಳದಿದ್ದರೆ, ನಾಯಕತ್ವ ಬೇರೆಯವರಿಗೆ ನೀಡಲಾಗುತ್ತದೆ. ಆ ಸ್ಪರ್ಧೆಯಲ್ಲಿ ಶಿಖರ್ ಮತ್ತು ಹಾರ್ದಿಕ್ ಹೆಸರು ಈಗ ಕೇಳಿಬರುತ್ತಿದೆ.

'ಇದುವರೆಗೂ ಶ್ರೇಯಸ್ ಅಯ್ಯರ್ ಅವರು ಪೂರ್ತಿ ಚೇತರಿಸಿಕೊಂಡಿರುವ ಕುರಿತು ಯಾವುದೇ ಮಾಹಿತಿ ಇಲ್ಲ. ಇಂತಹ ಶಸ್ತ್ರಚಿಕಿತ್ಸೆಗಳು ಆದಾಗ ಪುನಶ್ಚೇತನಕ್ಕಾಗಿ ಬಹಳಷ್ಟು ಸಮಯ ಬೇಕಾಗುತ್ತದೆ. ತಮ್ಮ ಮೊದಲಿನ ಲಯಕ್ಕೆ ಮರಳಬೇಕಾದರೆ ಸುಮಾರು ನಾಲ್ಕು ತಿಂಗಳುಗಳಾದರೂ ಬೇಕಾಗುತ್ತವೆ' ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಒಂದೊಮ್ಮೆ ಶ್ರೇಯಸ್ ಫಿಟ್ ಆದರೆ ನಾಯಕತ್ವಕ್ಕೆ ಅವರೇ ಮೊದಲ ಆಯ್ಕೆಯಾಗುವರು. ಕಳೆದ ಎರಡು ಐಪಿಎಲ್ ಟೂರ್ನಿಗಳಲ್ಲಿ ಶಿಖರ್ ಧವನ್ ಚೆನ್ನಾಗಿ ಆಡಿದ್ದಾರೆ. ಅನುಭವಿಯಾಗಿರುವ ಅವರು ಉತ್ತಮ ಲಯದಲ್ಲಿಯೂ ಇದ್ದಾರೆ. ಎಂಟು ವರ್ಷಗಳಿಂದ ಭಾರತ ತಂಡದಲ್ಲಿ ಅವರು ಆಡುತ್ತಿದ್ದಾರೆ. ಹಾರ್ದಿಕ್ ಪಾಂಡ್ಯ ಪಂದ್ಯಗಳ ಜಯದ ರೂವಾರಿಯಾಗಿದ್ದಾರೆ. ಆದರೆ ಅವರು ಇತ್ತೀಚಿನ ದಿನಗಳಲ್ಲಿ ಹೆಚ್ಚು ಬೌಲಿಂಗ್ ಮಾಡುತ್ತಿಲ್ಲ' ಎಂದು ಅವರು ತಿಳಿಸಿದ್ದಾರೆ.



ಹಾರ್ದಿಕ್ ಪಾಂಡ್ಯ (ಎಡ) ಮತ್ತು ಶಿಖರ್ ಧವನ್– ಎಎಫ್‌ಪಿ ಚಿತ್ರ

ಕೋವಿಡ್ ಲಸಿಕೆ ಪಡೆದ ಬೂಮ್ರಾ, ಮಂದಾನ



ಬೂಮ್ರಾ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಹಾಗೂ ಮಹಿಳಾ ತಂಡದ ಆಟಗಾರ್ತಿ ಸ್ಮೃತಿ ಮಂದಾನ ಅವರು ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದಾರೆ. ಮಂಗಳವಾರ ಅವರು ಈ ವಿಷಯ ತಿಳಿಸಿದ್ದಾರೆ.

ವಿಕೆಟ್ ಕೀಪರ್ ದಿನೇಶ್ ಕಾರ್ತಿಕ್ ಕೂಡ ಈ ಸಾಲಿಗೆ ಸೇರಿಕೊಂಡಿದ್ದು, ಮೂವರೂ ಲಸಿಕೆಯನ್ನು ಸ್ವೀಕರಿಸುವ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಪ್ರತಿಯೊಬ್ಬರು ಲಸಿಕೆ ಪಡೆಯುವಂತೆ ಮನವಿ ಮಾಡಿದ್ದಾರೆ.

ಬಿದಿರಿನ ಬ್ಯಾಟ್ ಬಳಕೆ ನಿಯಮಬಾಹಿರ: ಎಂಸಿಸಿ

ಲಂಡನ್ (ಪಿಟಿಐ): ಕ್ರಿಕೆಟ್‌ನಲ್ಲಿ ಬಿದಿರಿನಿಂದ ತಯಾರಿಸಿದ ಬ್ಯಾಟ್‌ಗಳನ್ನು ಬಳಸುವುದು ನಿಯಮಬಾಹಿರ ಎಂದು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ತಿಳಿಸಿದೆ.

ಕೇಂಬ್ರಿಜ್ ವಿಶ್ವವಿದ್ಯಾಲಯದ ದರ್ಶಿಲ್ ಶಾ ಮತ್ತು ಬೆನ್ ಟಿಕ್ಲರ್–ಡೆವಿಸ್ ಅವರು ಸಂಶೋಧನೆ ಮಾಡಿ, ಬಂಬೂ ಬ್ಯಾಟ್‌ಗಳು ಸಾಂಪ್ರದಾಯಿಕ ಬ್ಯಾಟ್‌ಗಳಿಗಿಂತ ಕಡಿಮೆ ಬೆಲೆಯುಳ್ಳವು ಮತ್ತು ಗುಣಮಟ್ಟದಲ್ಲಿ ಉತ್ತಮವಾಗಿರುತ್ತವೆ. ಆದ್ದರಿಂದ ವಿಲ್ಲೊ ಬ್ಯಾಟ್‌ಗಳಿಗಿಂತ ಇದನ್ನೇ ಬಳಸಬಹುದು ಎಂದು ಶಿಫಾರಸು ಮಾಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಎಂಸಿಸಿ, 'ಕ್ರಿಕೆಟ್ ನಿಯಮ 5.3.3ರ ಪ್ರಕಾರ ಕಟ್ಟಿಗೆ ಅಥವಾ ಮರದಿಂದ ತಯಾರಿಸಿದ ಬ್ಯಾಟ್‌ಗಳನ್ನೇ ಬಳಸಬೇಕು. ಬಿದಿರು ಹುಲ್ಲು ಜಾತಿಯದ್ದು. ಆದ್ದರಿಂದ ಅದು ಕಟ್ಟಿಗೆಯಲ್ಲ. ಒಂದೊಮ್ಮೆ ಬಿದಿರು ಬ್ಯಾಟ್ ಬಳಸಬೇಕಾದರೆ ನಿಯಮ ತಿದ್ದುಪಡಿ ಅಗತ್ಯವಿದೆ' ಎಂದಿದೆ.



ಬಿದಿರಿನ ಬ್ಯಾಟ್‌ನೊಂದಿಗೆ ದರ್ಶಿಲ್ ಶಾ– ಎಎಫ್‌ಪಿ ಚಿತ್ರ

'ಜೀವನೋಪಾಯದ ಬಿಕ್ಕಟ್ಟಿನತ್ತ ಭಾರತ'

ನವದೆಹಲಿ (ಪಿಟಿಐ): ಭಾರತವು ಗಂಭೀರ ಸ್ವರೂಪದ 'ಜೀವನೋಪಾಯದ ಬಿಕ್ಕಟ್ಟಿನತ್ತ' ಸಾಗುತ್ತಿರಬಹುದು ಎಂದು ಅರ್ಥಶಾಸ್ತ್ರಜ್ಞ ಜೀನ್ ಡ್ರೈಜ್ ಹೇಳಿದ್ದಾರೆ. 'ಭಾರತದಲ್ಲಿ ಈ ಬಾರಿ ಬಿಕ್ಕಟ್ಟು ದುಡಿಯುವ ವರ್ಗಕ್ಕೆ ಕೆಟ್ಟದ್ದಾಗಿ ಪರಿಣಮಿಸಿದೆ' ಎಂದು ಅವರು ಹೇಳಿದ್ದಾರೆ.

ಭಾರತವನ್ನು 2024–25ರೊಳಗೆ 5 ಟ್ರಿಲಿಯನ್ ಡಾಲರ್ ಅರ್ಥ ವ್ಯವಸ್ಥೆಯನ್ನಾಗಿಸುವ ಕೇಂದ್ರ ಸರ್ಕಾರದ ಗುರಿಯು ಕಾರ್ಯಸಾಧು ಆಗಿರಲೇ ಇಲ್ಲ ಎಂದು ಅವರು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಸ್ಥಳೀಯ ಮಟ್ಟದ ಲಾಕ್‌ಡೌನ್‌ಗಳ ಆರ್ಥಿಕ ಪರಿಣಾಮಗಳು ರಾಷ್ಟ್ರ ಮಟ್ಟದ ಲಾಕ್‌ಡೌನ್‌ನಷ್ಟು ವಿನಾಶಕಾರಿ ಆಗಿರಲಿಕ್ಕಿಲ್ಲ. ಆದರೆ, ಕೆಲವು ವಿಚಾರಗಳಲ್ಲಿ ಕಾರ್ಮಿಕ ವರ್ಗಕ್ಕೆ ಈ ಬಾರಿಯ ಪರಿಸ್ಥಿತಿ ಕೆಟ್ಟದ್ದಾಗಿದೆ' ಎಂದಿದ್ದಾರೆ.

'ಕೊರೊನಾ ಭೀತಿ ವ್ಯಾಪಕವಾಗಿದೆ. ಇದು ಆರ್ಥಿಕ ಚಟುವಟಿಕೆಗಳು ಗರಿಗೆದರುವುದಕ್ಕೆ ಅಡ್ಡಿ ಉಂಟುಮಾಡುತ್ತದೆ' ಎಂದು ಡ್ರೈಜ್ ಹೇಳಿದ್ದಾರೆ.

ಪೆಟ್ರೋಲ್, ಡೀಸೆಲ್ ದರ ಮತ್ತೆ ಏರಿಕೆ



ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ದರ ದೇಶದಾದ್ಯಂತ ಏರಿಕೆಯಾಗುತ್ತಲೇ ಇದೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಈ ತಿಂಗಳಿನಲ್ಲಿ ಇದುವರೆಗೆ ಆರು ಬಾರಿ ದರ ಹೆಚ್ಚಿಸಿವೆ.

ಮಂಗಳವಾರ ಪೆಟ್ರೋಲ್ ದರ ಲೀಟರಿಗೆ 27 ಪೈಸೆ ಮತ್ತು ಡೀಸೆಲ್ ದರ 30 ಪೈಸೆ ಹೆಚ್ಚಾಗಿದೆ. ಇದರಿಂದ ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 91.80 ಮತ್ತು ಡೀಸೆಲ್ ದರ ₹ 82.36ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ದರ 28 ಪೈಸೆ ಹೆಚ್ಚಾಗಿ ₹ 94.85ಕ್ಕೆ ಮತ್ತು ಡೀಸೆಲ್ ದರ 32 ಪೈಸೆ ಹೆಚ್ಚಾಗಿ ₹ 87.31ಕ್ಕೆ ತಲುಪಿದೆ.

ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಇಂಧನ ದರದಲ್ಲಿ ವ್ಯತ್ಯಾಸ ಆಗುತ್ತದೆ. ಮಹಾರಾಷ್ಟ್ರ, ರಾಜಸ್ಥಾನ, ಮಧ್ಯ ಪ್ರದೇಶ ರಾಜ್ಯಗಳಲ್ಲಿ ಪೆಟ್ರೋಲ್ ದರವು ₹ 100ರ ಗಡಿದಾಟಿದೆ.

ರಾಜಸ್ಥಾನದಲ್ಲಿ ಪೆಟ್ರೋಲ್‌ಗೆ ಗರಿಷ್ಠ ಪ್ರಮಾಣದ ವ್ಯಾಟ್ (ಮೌಲ್ಯವರ್ಧಿತ ತೆರಿಗೆ) ವಿಧಿಸಲಾಗುತ್ತಿದೆ. ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಪೆಟ್ರೋಲ್ ದರ ₹ 102.70 ಮತ್ತು ಡೀಸೆಲ್ ದರ ₹ 95.06ರಷ್ಟಾಗಿದೆ. ಜೈಸಲ್ಮೇರ್ ಮತ್ತು ಬಿಕಾನೇರ್‌ನಲ್ಲಿಯೂ ಪೆಟ್ರೋಲ್ ದರ 100ರ ಗಡಿ ದಾಟಿದೆ. ಮಧ್ಯಪ್ರದೇಶದ ಹಲವು ಜಿಲ್ಲೆಗಳಲ್ಲಿಯೂ ಪೆಟ್ರೋಲ್ ದರ ₹ 100ರ ಗಡಿ ದಾಟಿದೆ.

ಆರು ದಿನಗಳಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 1.41ರಷ್ಟು ಮತ್ತು ಡೀಸೆಲ್ ದರ ₹ 1.63ರಷ್ಟು ಹೆಚ್ಚಳವಾಗಿದೆ.

ಇಂಡಿಯಾಬುಲ್ಸ್ ಎಂಎಫ್ ಸ್ವಾಧೀನಕ್ಕೆ ಗ್ರೋವ್ ಸಿದ್ಧತೆ

ನವದೆಹಲಿ (ಪಿಟಿಐ): ಇಂಡಿಯಾ ಬುಲ್ಸ್ ಮ್ಯೂಚುವಲ್ ಫಂಡ್ ಕಂಪನಿಯನ್ನು ಒಟ್ಟಾರೆ ₹ 175 ಕೋಟಿ ಮೊತ್ತಕ್ಕೆ ಸ್ವಾಧೀನ ಮಾಡಿಕೊಳ್ಳುವುದಾಗಿ ಆನ್‌ಲೈನ್ ಹೂಡಿಕೆ ಕಂಪನಿ 'ಗ್ರೋವ್' ಮಂಗಳವಾರ ತಿಳಿಸಿದೆ.

ಇಂಡಿಯಾ ಬುಲ್ಸ್ ಆಸ್ತಿ ನಿರ್ವಹಣಾ ಕಂಪನಿ (ಐಬಿಎಎಂಸಿ) ಮತ್ತು ಟ್ರಸ್ಟಿ ಕಂಪನಿಯನ್ನು ಖರೀದಿಸಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಹಣಕಾಸು ವಲಯದ ತಂತ್ರಜ್ಞಾನ ಕಂಪನಿಗಳಿಗೆ ಮ್ಯೂಚುವಲ್ ಫಂಡ್ ವಹಿವಾಟು ನಡೆಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಒಪ್ಪಿಗೆ ನೀಡಿದ ಒಂದು ತಿಂಗಳ ಬಳಿಕ ಈ ಸ್ವಾಧೀನದ ನಿರ್ಧಾರ ಹೊರಬಿದ್ದಿದೆ. ಗ್ರೋವ್ ಸಂಸ್ಥೆಯು, ಆಸ್ತಿ ನಿರ್ವಹಣಾ ಕ್ಷೇತ್ರವನ್ನು ಪ್ರವೇಶಿಸುತ್ತಿರುವ ಮೊದಲ ಹಣಕಾಸು ತಂತ್ರಜ್ಞಾನ ಕಂಪನಿ ಆಗಲಿದೆ.

ಇಂಡಿಯಾಬುಲ್ಸ್ ಮ್ಯೂಚುವಲ್ ಫಂಡ್ ಬಳಿ 13 ಫಂಡ್‌ಗಳಿವೆ. ತ್ರೈಮಾಸಿಕದ ಸರಾಸರಿ ಆಸ್ತಿ ನಿರ್ವಹಣಾ ಮೊತ್ತವು 2021ರ ಡಿಸೆಂಬರ್‌ನಲ್ಲಿ ₹ 921.33 ಕೋಟಿಗಳಷ್ಟಿತ್ತು. ಇದು 2021ರ ಮಾರ್ಚ್ ಅಂತ್ಯಕ್ಕೆ ₹ 663.68 ಕೋಟಿಗೆ ಇಳಿಕೆ ಕಂಡಿದೆ.

ಮ್ಯೂಚುವಲ್ ಫಂಡ್ ವಹಿವಾಟನ್ನು ಮಾರಾಟ ಮಾಡುವುದರಿಂದ ಮಾತೃಸಂಸ್ಥೆ ಆಗಿರುವ ಇಂಡಿಯಾ ಬುಲ್ಸ್ ಹೌಸಿಂಗ್ ಫೈನಾನ್ಸ್‌ನ ಬಂಡವಾಳ ಸ್ಥಿತಿ ಸುಧಾರಿಸಲಿದೆ.

ಮ್ಯೂಚುವಲ್ ಫಂಡ್, ಷೇರುಪೇಟೆ ಮತ್ತು ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಹೂಡಿಕೆ ಮಾಡಲು ಡಿಜಿಟಲ್ ವೇದಿಕೆಯನ್ನು ಬಳಸುವ 1.5 ಕೋಟಿಗೂ ಅಧಿಕ ಗ್ರಾಹಕರನ್ನು ಗ್ರೋವ್ ಸಂಸ್ಥೆ ಹೊಂದಿದೆ. ಈಕ್ವಿಟಿ ಹೂಡಿಕೆಗಳಲ್ಲಿ ಸಣ್ಣ ಹೂಡಿಕೆದಾರರ ಪಾಲುದಾರಿಕೆಯನ್ನು ಹೆಚ್ಚಿಸುವುದಾಗಿ ಅದು ಹೇಳಿದೆ.